# ಹರಿದಾಸರ ಪಾಂಡುರಂಗ ವಿಠಲ

## ಬಯಲನು ತುಂಬುವ ಆಲಯದ ಬೆಳಕಿನ ಬೀಜಗಳು

ಕನ್ನಡ ವಿಶ್ವವಿದ್ಯಾಲಯ ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳ ಆಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಇಪತ್ತೊಂದನೆಯ ಶತಮಾನದ ಆರಂಭದಲ್ಲಿ ಜಾಗತೀಕರಣದ ಈ ಸಂಕ್ರಮಣ ಸ್ಥಿತಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ರಚನೆ ಮತ್ತು ಕಾರ್ಯಗಳು ಸವಾಲಿನವು ಮತ್ತು ಜವಾಬ್ದಾರಿಯವೂ ಆಗಿವೆ. 'ಕನ್ನಡ' ಎನ್ನುವ ಪರಿಕಲ್ಪನೆಯನ್ನು ಭಾಷೆ, ಸಾಹಿತ್ಯ, ಬದುಕು ಮತ್ತು ಆಧುನಿಕ ಸನ್ನಿವೇಶಗಳಲ್ಲಿ ಅರ್ಥೈಸುವ ಮತ್ತೆ ಕಟ್ಟುವ ಕೆಲಸವನ್ನು ಕನ್ನಡ ವಿಶ್ವವಿದ್ಯಾಲಯ ಒಂದು ಕಾಯಕದಂತೆ ಕೈಗೆತ್ತಿಕೊಂಡಿದೆ. ಕನ್ನಡ ಮತ್ತು ಅಭಿವೃದ್ಧಿ ಎನ್ನುವ ಎರಡು ಪರಿಕಲ್ಪನೆಗಳು ಎದುರುಬದುರಾಗುವ ಆತಂಕ ಒಂದು ಕಡೆಯಾದರೆ, ಅವು ಒಂದನ್ನೊಂದು ಪ್ರಭಾವಿಸಿ ನೆರವಾಗುವ ಆವರಣವನ್ನು ನಿರ್ಮಾಣ ಮಾಡುವುದು ಇನ್ನೊಂದೆಡೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯವು ಈ ಸಂಬಂಧಿಯಾದ ಹೊಸ ಆಲೋಚನೆಗಳ ಸಂವಾದ ಮತ್ತು ಅದರ ಅನ್ವಯಿಕ ಸಾಧನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಬಯಸಿದೆ.

ಮಾಹಿತಿ ತಂತ್ರಜ್ಞಾನವು ಜಾಗತೀಕರಣದ ಪ್ರಮುಖ ಅಸ್ತ್ರವಾಗಿ ಪ್ರಯೋಗವಾಗುತ್ತಿರುವಾಗ ಈ ಅಸ್ತ್ರವನ್ನು ಕನ್ನಡದ ಅಭಿವೃದ್ಧಿಗಾಗಿ ಬಳಸುವ ಹೊಣೆಗಾರಿಕೆಯು ಕನ್ನಡ ವಿಶ್ವವಿದ್ಯಾಲಯದ ಮೇಲೆ ಇದೆ. ಕನ್ನಡ ತಂತ್ರಾಂಶಗಳ ಅಭಿವೃದ್ಧಿಯ ಎಲ್ಲಾ ತೊಡಕುಗಳನ್ನು ನಿವಾರಿಸಿಕೊಂಡು ಮುಂದೆ ಸಾಗಬೇಕೆನ್ನುವ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯ ಈ ಸಂಬಂಧ ಸಾಹಿತಿಗಳ, ಭಾಷಾತಜ್ಞರ, ತಂತ್ರಜ್ಞರ ಸಮಾಲೋಚನೆಯನ್ನು ನಡೆಸಿ ಕನ್ನಡವು ಸರ್ವವ್ಯಾಪಿಯಾಗಿ ಬೆಳೆಯಲು ಶ್ರಮಿಸುತ್ತಿದೆ.

ಕನ್ನಡ ಕಾಗದರಹಿತ ಮಾಧ್ಯಮದಲ್ಲಿ ಕಾಣಿಸಿಕೊಳ್ಳುತ್ತಿರುವಾಗಲೂ ಪುಸ್ತಕ ರೂಪದಲ್ಲಿ ಕನ್ನಡ ಕೃತಿಗಳ ಪ್ರಕಟಣೆ ಸಮಾನಾಂತರವಾಗಿ ಕ್ರಿಯಾಶೀಲವಾಗಿ ನಡೆಯುವುದು ಬಹಳ ಮುಖ್ಯವಾದದ್ದು. ತಾಂತ್ರಿಕ - ಮೌಖಿಕ ಮಾಧ್ಯಮದಲ್ಲಿ ಕನ್ನಡವು ಬಳಕೆಯಾಗುತ್ತಿರುವಾಗಲೇ ಕಾಗದದಲ್ಲಿ ಕನ್ನಡ ಅಕ್ಷರಗಳಲ್ಲಿ ಮುದ್ರಣಗೊಂಡು ಕಣ್ಣಿಗೆ, ಕಿವಿಗೆ ಮತ್ತು ಮನಸ್ಸಿಗೆ ಕನ್ನಡವನ್ನು ಸಂವಹನಗೊಳಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಿದೆ. ಇಲ್ಲಿ ಪ್ರಕಟಗೊಳ್ಳುವ ಮಾಧ್ಯಮದೊಂದಿಗೆ ಅಭಿವ್ಯಕ್ತಿಗೊಳ್ಳುವ ಚಿಂತನಾ ಶರೀರವೂ ಮುಖ್ಯವಾದದ್ದು. ಭಾಷೆ, ಸಾಹಿತ್ಯ, ಕಲೆಗಳು, ವಿಜ್ಞಾನ, ತಂತ್ರಜ್ಞಾನ, ಸಮಾಜವಿಜ್ಞಾನ ಎನ್ನುವ ಬೌದ್ಧಿಕ ಗಡಿರೇಖೆಗಳನ್ನು ಕಳಚಿಕೊಂಡು ಕನ್ನಡ ಜ್ಞಾನವು ಕನ್ನಡ ವಿಶ್ವವಿದ್ಯಾಲಯದಲ್ಲಿ ರೂಪುಗೊಳ್ಳುವ ಮತ್ತು ಪ್ರಕಟಗೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಪುರಂದರದಾಸ ಅಧ್ಯಯನ ಪೀಠದ ಸಂಚಾಲಕರಾಗಿ ಪ್ರೊ. ಎ.ವಿ. ನಾವಡ ಅವರು ದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ಅಪೂರ್ವ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳ ಸಾಲಿಗೆ ಸೇರುವ ಪ್ರಸ್ತುತ ಕೃತಿ 'ಹರಿದಾಸರ ಪಾಂಡುರಂಗ ವಿಠ್ಠಲ' ಬಹಳ ಮಹತ್ವಪೂರ್ಣವಾದದು. ಪ್ರೊ. ಎ.ವಿ. ನಾವಡ ಅವರು ಮಹಾರಾಷ್ಟ್ರದಲ್ಲಿ ನೆಲೆಸಿದ ಕನ್ನಡ ವಿಠ್ಠಲನಿಗೆ ಸಂಬಂಧಿಸಿದ ಬಹಳ ಅಪೂರ್ವವಾದ ಜಲ ರಚನೆಗಳನ್ನು ಇಲ್ಲಿ ಕಲೆ ಹಾಕಿದ್ದಾರೆ. ಕನ್ನಡ ಕವಿಗಳು ಪಾಂಡುರಂಗ ವಿಠ್ಠಲನನ್ನು ಪರಿಕಲ್ಪಿಸಿದ ಬಗೆಗಳು ಇಲ್ಲಿ ಅನಾವರಣಗೊಂಡಿವೆ. ಒಂದು ಅರ್ಥದಲ್ಲಿ ಮಹಾರಾಷ್ಟ್ರದಲ್ಲಿರುವ ಪ್ರಯತ್ನ ಇಲ್ಲಿ ನಡೆದಿದೆ. ತಮ್ಮ ಶ್ರದ್ಧೆ ಮತ್ತು

ಪರಿಶ್ರಮದ ಮೂಲಕ ಅಚ್ಚುಕಟ್ಟಾಗಿ ಸಂಪಾದನೆಯನ್ನು ಮಾಡಿಕೊಟ್ಟ ಪ್ರೊ. ಎ.ವಿ. ನಾವಡ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಅಭಿನಂದನೆಗಳು. ಈ ಕೃತಿ ಕನ್ನಡ ಮತ್ತು ಮರಾಠಿ ಭಾಷೆ ಹಾಗೂ ಸಾಹಿತ್ಯಗಳ ಸಂಬಂಧವನ್ನು ಇನ್ನೆಷ್ಟು ಬೆಸೆಯುತ್ತದೆ ಎಂದು ಭಾವಿಸಿದ್ದೇನೆ.

**ಬಿ. ಎ. ವಿವೇಕ ರೈ**
ಕುಲಪತಿ

# ಇಟ್ಟಂಗಿ ಮೇಲ್ನಿಂತ ವಿಠ್ಠಲರಾಯನಿಗೆ

**ಕಾನಾಡೀ ವಿಠಲ**

ಇಂದಿನ ಪಂಢರಪುರದ ಪಾಂಡುರಂಗವಿಠಲ ಒಂದು ಕಾಲದಲ್ಲಿ ಕನ್ನಡಿಗರ ವಿಠಲನೇ ಆಗಿದ್ದ. ಕನ್ನಡದ ಹರಿದಾಸರೆಲ್ಲ ಪಂಢರಪುರದ ಅಧಿದೇವತೆ ವಿಠ್ಠಲನ ಅಭಿಮಾನಿಗಳು. ಹೀಗಾಗಿ ಹರಿದಾಸ ಪಂಥದಲ್ಲಿ ವಿಠ್ಠಲನಿಗೆ ವಿಶೇಷ ಮನ್ನಣೆ. ವಿಠ್ಠಲ ಸಂಪ್ರದಾಯದ ಉಗಮ (ಕ್ರಿ.ಶ. ೬ನೇ ಶತಮಾನ) ದ ಕಾಲಕ್ಕಾಗಲೇ ಇಂದಿನ ಮಹಾರಾಷ್ಟ್ರದ ಬಹುಪಾಲು ಕನ್ನಡದ ದೊರೆಗಳ ಆಳ್ವಿಕೆಗೆ ಒಳಪಟ್ಟಿತ್ತು. ಶಾತವಾಹನರು, ವಾಕಾಟಕರು, ಬದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಹಾಗೂ ದೇವಗಿರಿಯ ಯಾದವರು - ಈ ಐದು ರಾಜಮನೆತನಗಳು ಇಂದಿನ ಮಹಾರಾಷ್ಟ್ರ ರಾಜ್ಯವನ್ನು ಆಳಿದ ಕನ್ನಡ ರಾಜಮನೆತನಗಳಾಗಿವೆ. ರಾಷ್ಟ್ರಕೂಟರ ಕಾಲ (ಕ್ರಿ.ಶ. ೯ನೇ ಶತಮಾನ) ದಲ್ಲಿ ಪಂಢರಪುರವು ಕನ್ನಡ ನಾಡಿನ ಭಾಗವೇ ಆಗಿತ್ತು. ಈ ದೊರೆಗಳ ಕಾಲದಿಂದಲೇ ವಿಠ್ಠಲನ ಆರಾಧನಾ ಸಂಪ್ರದಾಯ ನೆಲೆಗೊಂಡಿರಬೇಕು. ರಾಷ್ಟ್ರಕೂಟ ದೊರೆಗಳು ಈ ದೇವಾಲಯಕ್ಕೆ ದತ್ತಿ ಬಿಟ್ಟುಕೊಟ್ಟ ಶಾಸನಗಳಿವೆ. ಪಂಢರಪುರದ ಅತಿ ಪ್ರಾಚೀನ ಉಲ್ಲೇಖ ಏಳನೆಯ ಶತಮಾನದ ತಾಮ್ರಪಟವಾಗಿದ್ದು ಅದರಲ್ಲಿ ವಿಠ್ಠಲ ಎಂಬ ಬ್ರಾಹ್ಮಣನಿಗೆ ಪಂಡರಂಗಪಳ್ಳಿಯನ್ನು ದಾನವಾಗಿ ಕೊಟ್ಟ ಉಲ್ಲೇಖವಿರುವುದಾಗಿ ಹೇಳಲಾಗಿದೆ. (ಚಿದಾನಂದಮೂರ್ತಿ ೨೦೦೫: ೧೦೨) ಕ್ರಿ.ಶ. ೧೯೩೭ರ ಹೊಯ್ಸಳ ಸೋಮೇಶ್ವರನ ಶಾಸನದಲ್ಲಿ (ಕನ್ನಡ ಮತ್ತು ಸಂಸ್ಕೃತಿ ಭಾಷೆ) ಭೀಮರಥೀ ನದಿತೀರಸಂವಿಷ್ಟಂ ಪಂಡರಗೆ ನಾಮಾನಾಂ ಮಹಾಗ್ರಾಮಮಧಿವಸತೇ ಪುಂಡರೀಕ ಮುನಿಮನಃ ಕುಮುದ ವಿಕಾಸ ಸುಧಾರಣಕಾಯ ಭಗವತ್ ಶ್ರೀ ವಿಠ್ಠಲ ದೇವಾಯ ಎಂದು ತೀರ್ಥ, ಕ್ಷೇತ್ರ, ಭಕ್ತ ಹಾಗೂ ದೇವ - ಈ ನಾಲ್ಕರ ಉಲ್ಲೇಖವಿದೆ. ಈ ಶಿಲಾಲೇಖದ ಕನ್ನಡ ಭಾಗದಲ್ಲಿ ಪಂಡರಗೆಯ ಶ್ರೀ ವಿಠ್ಠಲದೇವ ಎಂದಿದೆ. ಮೂಲತಃ ವಿಷ್ಣು ಸಹಿತ ಶಿವನಾಗಿರುವ ವಿಠ್ಠಲನಿಗೆ ಹೊಯ್ಸಳ ಸೋಮೇಶ್ವರನು ನೀಡಿದ ದಾನಗಳ ವಿವರ ಈ ಶಾಸನದಲ್ಲಿ ಇದೆ.

ಪಂಢರಪುರವನ್ನು ಶಾಸನಗಳಲ್ಲಿ ಪಂಡರಗೆ ಎಂದು ಕರೆದಿದೆ. ಪಂಡ ಎಂಬ ಹೆಸರಿನ ಜನಸಮುದಾಯದ ನೆಲೆಯೇ ಪಂಡರಗೆ. ಪಂಡರ + ಕೆಯ್ (= ನೆಲೆ) ಎಂಬುದೇ ಪಂಡರಗೆ ಆಗಿದೆ ಎಂದು ಡಾ. ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ (೧೯೮೮ : ೧೮೬) ಹೀಗೆ ವಿಠ್ಠಲ ನೆಲೆಸಿದ ಗ್ರಾಮನಾಮದ ವ್ಯುಪ್ಪತ್ತಿ ಕನ್ನಡದಿಂದಲೇ ಸಾಧಿತವಾಗಿರುವುದು ಗಮನಾರ್ಹ ಸಂಗತಿ. ಹಾಗೆಯೇ ಪಾಂಡುರಂಗ ವಿಠ್ಠಲ ಎಂಬುದು ಪಂಡರಗೆ ವಿಠ್ಠಲ ಎಂಬುದರ ಪಂಡಿತರೂಪವಿರಬೇಕು.

ವಿಠ್ಠಲ ಪದದ ಮೂಲ ಏನಿರಬಹುದು? ಈ ಪದ ಸಂಸ್ಕೃತಿ ಸಾಹಿತ್ಯದಲ್ಲೆಲ್ಲೂ ಬಳಕೆಯಾದಂತಿಲ್ಲ ವಿಠ್ಠಲ ಭಗವಂತನ ರೂಪವನ್ನು ಯಾವ ಪುರಾಣವೂ ಹೇಳುತ್ತಿಲ್ಲ. ಶ್ರೀ ವಾದಿರಾಜರು ಗೋಪಬಾಲಕನಾದ ಪಾಂಡುರಂಗ ವಿಠ್ಠಲನು ಕೃಪೆಯಿಂದ ನಮ್ಮ ಮೇಲೆ ಪ್ರಸನ್ನನಾಗಲಿ ಎಂದು ಹೇಳಿರುವುದನ್ನು ಕಂಡರೆ ಬಾಲರೂಪವೇ ವಿಠ್ಠಲ. ವಿಠ್ಠಲದ ಮೂಲ ವಿಷ್ಣು ಆಗಿರಬೇಕೆಂದೂ ವಿಷ್ಣು > ವಿಟ್ಟ > ವಿಟ್ಟಣ > ವಿಟ್ಟಳ > ವಿಠ್ಠಲ ಆಗಿರುವ ಸಾಧ್ಯತೆಯಿದೆ ಎಂದು ಡಾ. ಕಲಬುರ್ಗಿಯವರು ಬರೆಯುತ್ತಾರೆ (೧೯೮೮-೧೫೯) ಇಟ್ಟಿಗೆಯ ಮೇಲೆ ನಿಂತಿದರಿಂದ ಈ ದೇವರಿಗೆ ವಿಠ್ಠಲ. ವಿಠೋಬಾ ಎಂಬ ಹೆಸರಾಗಿ ಬಂದಿರಬಹುದು ಎಂಬ ಅಭಿಪ್ರಾಯವನ್ನು ಪುಂಡರೀಕನ ಹಿನ್ನೆಲೆಯಲ್ಲಿ ಹೇಳಲಾಗಿದೆ (ಗಾಯಕ್ವಾಡ್ ೨೦೦೫ : ೩)

ಮಹಾರಾಷ್ಟ್ರದ ಸಂತರೂ ಕರ್ನಾಟಕದ ಹರಿದಾಸರೂ ವಿಠಲೋಪಾಸಕರು. ಕನ್ನಡದ ಹರಿದಾಸ ಸಾಹಿತ್ಯ ಪರಂಪರೆ ಹದಿನೈದನೆಯ ಶತಮಾನದಿಂದ ಖಚಿತಗೊಂಡರೂ ಅದಕ್ಕಿಂತ ಮೊದಲೇ ಕನ್ನಡಿಗರು ವಿಠಲೋಪಾಸಕರಾದುದಕ್ಕೆ ಅನೇಕ ಉದಾಹರಣೆಗಳಿವೆ. ವಿಠ್ಠಲ ಮೂಲತಃ ಕರ್ನಾಟಕದವನು. ಅನಂತರ ಪಂಢರಪುರಕ್ಕೆ ಹೋದನು ಎಂದು ಮರಾಠಿ ಸಂತರು ತಮ್ಮ ಅಭಂಗಗಳಲ್ಲಿ ಹೇಳಿದ್ದುಂಟು.

ಕಾನಡಾ ಹೋ ವಿಠ್ಠಲು ಕರ್ನಾಟಕೂ
ತ್ಯಾನೆ ಮಜ ಲಾವಿಲಾ ವೇದು
(ಕನ್ನಡದ ವಿಠ್ಠಲ ತನ್ನ ಮನಸ್ಸನ್ನು ಸೆಳೆದುಕೊಂಡನು )

ಸಂತ ಜ್ಞಾನೇಶ್ವರನು ಪಂಢರಿರಾಯ ವಿಠ್ಠಲನಿಗೆ ಮನಸೋತು ಒಂದು ಚಿಕ್ಕ ಹಾಡನ್ನು ಕಟ್ಟಿದ್ದಾನೆ.

ಆ ……. ಆ ….. ನೀ ಕೇಳೆ ಮಾತು ಕೇಳೆಲೆ ಘನಿಗೆ ಮರುಳಾದೆನೆ
ಚೆಲುವನೇ ಚೆಲುವನೇ ಪಂಢರಿರಾಯಾ ಚೆಲುವನೇ
ಎಲ್ಲೆ ದೊರೆಕ್ಯಾನೆ ಎಲ್ಲೆ ಬಾ ರನ್ನೆ
ಪುಂಡಲೀಕನ ಭಕ್ತಿಗೆ ಬಂದಾ
ರಖುಮಾದೇವಿ ವರ ವಿಠ್ಠಲನೆ

ಸಂತ ಏಕನಾಥನ ಅಭಂಗವೊಂದರಲ್ಲಿ ವಿಠ್ಠಲನ ವರ್ಣನೆ ಹೀಗಿದೆ

ತೀರ್ಥ ಕಾನಡೆ, ದೇವ ಕಾನಡೆ
ಕ್ಷೇಮ ಕಾನಡೆ, ಪಂಡರಿಯೆ
ವಿಠ್ಠಲ ಕಾನಡೆ, ಭಕ್ತ ಕಾನಡೆ
………………………………….

ವಿಠ್ಠಲ ಕಾನಾಡಾ ವೀಠೆವರಿ

ಮಧ್ವಮತ ಸ್ಥಾಪಕರಾದ ಶ್ರೀ ಮಧ್ವಾಚಾರ್ಯ (೧೩ನೇ ಶತಮಾನ) ಉಡುಪಿಯ ಅಷ್ಟಮಠಗಳಲ್ಲಿ ಮೂವರು ಯತಿಗಳಿಗೆ ತಮ್ಮ ಉಪಾಸ್ಯಮೂರ್ತಿಗಳಾಗಿ ವಿಠಲನ ಮೂರ್ತಿಗಳನ್ನು ನೀಡಿದರು. ಈ ಮೂರ್ತಿಗಳು ಮೂಲಪುರುಷರ ಹೆಸರಿನೊಂದಿಗೆ ಇಂದಿಗೂ ಪೂಜೆಗೊಳ್ಳುತ್ತಿವೆ.

ಪೇಜಾವರ ಮಠ - ಅಧೋಕ್ಷಜ (ತೀರ್ಥ) ವಿಠಲ
ಪುತ್ತಿಗೆ ಮಠ - ಉಪೇಂದ್ರ (ತೀರ್ಥ) ವಿಠಲ
ಶೀರೂರ ಮಠ - ವಾಮನ (ತೀರ್ಥ) ವಿಠಲ

ಮಧ್ವಚಾರ್ಯರ ಮಾಧ್ವ ಪರಂಪರೆಗೆ ಸೇರಿದ ಉತ್ತರಾದಿ ಮಠದಲ್ಲಿಯೂ ಮೂಲರಾಮನ ಜತೆಗೆ ವಿಠಲಮೂರ್ತಿಯ ಆರಾಧನೆ ನಡೆಯುತ್ತಿದೆ.

ದಾಸ ಸಾಹಿತ್ಯದ ಪ್ರಮುಖ ಕೇಂದ್ರಗಳಲ್ಲಿ ಒಂದಾದ ಹಂಪಿಯಲ್ಲಿ ವಿಜಯ ವಿಠ್ಠಲ ಗುಡಿಯಿದೆ. ದಾಸ ಸಾಹಿತ್ಯದ ಆದ್ಯರಲ್ಲಿ ಒಬ್ಬರಾದ ಶ್ರೀಪಾದರಾಜರಿಗೆ ಪಂಢರಪುರದಲ್ಲಿ ವಿಠ್ಠಲಮೂರ್ತಿ ದೊರೆತ ಬಗ್ಗೆ ಮಾಧ್ವ ಪರಂಪರೆಯಲ್ಲಿ ಬಲವಾದ ನಂಬಿಕೆಯಿದೆ.

ಶ್ರೀಪಾದರಾಜರು ತಮ್ಮ ಕೀರ್ತನೆಗಳಲ್ಲಿ ಮೊದಲ ಬಾರಿಗೆ ರಂಗವಿಠ್ಠಲ ಎಂಬ ಅಂಕಿತವನ್ನು ಬಳಸಿದ್ದಾರೆ ಹಾಗೂ 'ಶ್ರೀರಂಗ ವಿಠಲನ ಶ್ರೀ ಮುಕುಟಕೆ ಶರಣು' ಎಂಬ ಕೀರ್ತನೆಯನ್ನು ಬರೆದಿದ್ದಾರೆ.

ಶ್ರೀಪಾದರಾಜರಿಂದ ತೊಡಗಿ ಇಂದಿನವರೆಗೂ ಅನೇಕ ದಾಸರ ಅಂಕಿತದಲ್ಲಿ ಪರಪದವಾಗಿ ವಿಠಲ ಬಳಕೆಯಾಗುತ್ತಿರುವುದು ಗಮನಾರ್ಹ. ಮಹಾರಾಷ್ಟ್ರದ ವಿಠಲ ಸಂಪ್ರದಾಯ ಅಧ್ವೈತಪರವಾದರೆ ಕರ್ನಾಟಕದ ಹರಿದಾಸರದು ಧ್ವೈತಪರವಾದುದು. ಮಹಾರಾಷ್ಟ್ರದ ಸಂತರಲ್ಲಿ ಜ್ಞಾನದೇವ, ನಾಮದೇವರು ವಿಠಲೋಪಾಸಕರಲ್ಲಿ ಮೊದಲಿಗರು.

ಕರ್ನಾಟಕದಲ್ಲಿ ವಿಠ್ಠಲ ಸಂಪ್ರದಾಯ ಮೊದಲಾದುದರಲ್ಲಿ ಅಚಲಾನಂದ ದಾಸರೇ ಪ್ರೇರಕರು ಎಂಬ ಅಭಿಪ್ರಾಯವಿದೆ. ಡಾ. ಜಿ. ವರದರಾಜರಾವ್ ಅವರು ತುಳೇಕರಿ ಎಂಬ ಊರಲ್ಲಿ ದೊರೆತ ಹಸ್ತಪ್ರತಿಯ ಆಧಾರದ ಮೇಲೆ ಅಚಲಾನಂದದಾಸ (೯ನೇ ಶತಮಾನ) ರಿಗೆ ಪಂಢರಪುರದ ಚಂದ್ರಭಾಗ ನದಿ ದಂಡೆಯಲ್ಲಿ ಶ್ರೀ ವಿಠ್ಠಲನ ದರ್ಶನವಾಯಿತಂತೆ. ಆ ಬಳಿಕ ಭಾಗವತ ಧರ್ಮಾನುಸಾರಿ ಅಚಲಾನಂದ ದಾಸರು ವೈಷ್ಣವರಾದುದಾಗಿ ತಿಳಿದು ಬಂದಿದೆ. ಶ್ರೀ ಪಾದರಾಜರಿಗೆ ಪಂಢರಪುರದ ಚಂದ್ರಭಾಗ ನದೀದಡದಲ್ಲಿ ರಂಗವಿಠ್ಠಲನ ಪ್ರತಿಮೆ ದೊರೆತ ಬಗ್ಗೆ ವಿವರಗಳು ದೊರೆಯುತ್ತವೆ (ಬೇಲೂರು ಕೇಶವದಾಸ ೧೯೭೪ : ೨೮, ನಾಗರತ್ನ ಟಿ. ಎನ್. ೨೦೦೪: ೧೫-೧೭) ಮುಂದೆ ಬಂದ ಪುರಂದರದಾಸರು ಪುರಂದರ ವಿಠಲ ಎಂಬ ಅಂಕಿತವನ್ನೇ ಬಳಸಿದರಲ್ಲದೆ ಪಂಢರಪುರದ ವಿಠಲನನ್ನು ಕುರಿತ ನಾಲ್ಕು ಕೀರ್ತನೆಗಳನ್ನು ಬರೆದಿರುವದು ಕಂಡು ಬರುತ್ತದೆ. ಮುಂದೆ ಕನ್ನಡ ದಾಸ ಪರಂಪರೆಯಲ್ಲಿ ವಿಠ್ಠಲ ಪ್ರೀತಿ ಮುಂದುವರಿಯುವುದು. ಜಗನ್ನಾಥ ದಾಸರಿಗಂತೂ ಅಂಕಿತ ಪ್ರದಾನವಾದದ್ದು ಪಂಢರಪುರದಲ್ಲಿ.

ವ್ಯಾಸತೀರ್ಥರು ವಿಜಯನಗರದ ರಾಜಗುರುಗಳಾದ ಬಳಿಕ ಹಂಪಿಯಲ್ಲಿ ವಿಠ್ಠಲನ ಮಂದಿರದ ಸ್ಥಾಪನೆ ಆಯಿತು (೧೬ನೇ ಶತಮಾನ). ಅದು ವಿಜಯ ವಿಠ್ಠಲ ಗುಡಿಯೆಂದೇ ಪ್ರಸಿದ್ಧವಾಯಿತು. ಈ ಗುಡಿಯಲ್ಲಿ ರಾಜಕೀಯ, ಮತ್ತೀಯ ಕಾರಣಕ್ಕಿಂತ ಅಂದಿನ ವಿಠ್ಠಲ ಭಕ್ತ ಸಮುದಾಯದ ಮನೋಧರ್ಮವೇ ಕಾರಣವಾಗಿರಬೇಕೆಂದು ಡಾ. ಶಂಬಾ ಜೋಶಿಯವರು ಅಭಿಪ್ರಾಯ ಪಡುತ್ತಾರೆ.

ಸಂತ ಭಾನುದಾಸನು ಆ ಪ್ರತಿಮೆಯನ್ನು ಮರಳಿ ತಂದನೆಂಬ ಐತಿಹ್ಯವು ಮಹಾರಾಷ್ಟ್ರದಲ್ಲಿದೆ. ವಾದಿರಾಜರ ' ತೀರ್ಥ ಪ್ರಬಂಧ'ದಲ್ಲಿ 'ತುಂಗಾತೀರ ಗತೋಸಿ ವಿಠ್ಠಲ' ಎಂಬ ಉಲ್ಲೇಖನವಿದೆ. ಈ ಕಾರಣದಿಂದ ಭಾನುದಾಸರು ವಿಠ್ಠಲನನ್ನು ಮರಳಿ ಒಯ್ದು ಕಥೆ ವಾಸ್ತವವಿರಬೇಕು. ಆದರೆ ವಿಠ್ಠಲನು ಚಂದ್ರಭಾಗ ತೀರಬಿಟ್ಟು ತುಂಗಾತೀರಕ್ಕೆ ಬಂದ ನಿಜವಾದ ಕಾರಣವೇನು? ಕರ್ಜಿಗಿಯ ದಾಸರ ಒಂದು ಹಾಡಿನ ಮೂಲಕ ಬೆಳಕಿಗೆ ಬರುವ ಕಾರಣವು ವಾಸ್ತವ ಸ್ವರೂಪದ್ದಾಗಿ ಕಾಣುತ್ತದೆ. ಆ ಹಾಡು ಹೀಗಿದೆ.

ಏನಿದು ಕೌತುಕವೊ ಪಂಡರಿಯನೆ ಬಿಟ್ಟು
ನೀನಿಲ್ಲಿಗೆ ಬಂದ್ಯಾ ವಿಠ್ಠಲ
ಮಿಥ್ಯಾವಾದಿಗಳು ನಿನ್ನ ಸುತ್ತುಮುತ್ತಿಕೊಂಡು
ಅತ್ತು ಕರೆದು ಕೂಗುತ್ತಿರೆ ಬಹುಬ್ಯಾಸತ್ತು ಬಂದೆಯಾ ವಿಠಲಾ
ಮಧ್ವ ದ್ವೇಷಿಗಳು ಮಾಡುವ ಪದ್ಧತಿಯನು ಕಂಡು
ಹೃದ್ಯವಾಗದೆ ಕದ್ದ ಕಳ್ಳನಂತೆದ್ದು ಇಲ್ಲಿಗೆ ಬಂದ್ಯಾ ವಿಠಲಾ
ಶ್ರೀದ ವಿಠಲ ನಿಮ್ಮ ಸದ್ಗುಣ ವೇದಶಾಸ್ತ್ರದಲ್ಲಿ
ಶೋಧಿಸಿ ನೋಡುವ ಭೂದೇರಿಗೊಲಿದಾದರಿಸಲು ಬಂದ್ಯಾ ವಿಠಲಾ

ಇದರ ಕೊನೆಯ ನುಡಿಯಲ್ಲಿ 'ಭೂ ದೇವರಿಗೆ ಒಲಿದು ಆದರಿಸ ಬಂದ್ಯಾ ವಿಠ್ಠಲ' ಎಂಬ ಇನ್ನೊಂದು ಮಹತ್ವದ ಕಾರಣ ಹೇಳಲಾಗಿದೆ. (ಜೋಶಿ ಸಂ. ೩, ೧೯೯೯ : ४೭೭)

ಈ ಹಾಡಿನ ಆಶಯಗಳನ್ನು ಹೀಗೆ ಸಂಗ್ರಹಿಸಬಹುದು :-

೧. ೧೩ನೆಯ ಶತದಲ್ಲಿ ಸಂತಜ್ಞಾನೇಶ್ವರನ ನೇತೃತ್ವದಲ್ಲಿ ಮರಾಠಿ ಸಂತ ಪರಂಪರೆಗೆ ಬಂದ ಜನಪ್ರಿಯತೆ ಹಾಗೂ ಸೈದ್ಧಾಂತಿಕ ಮನ್ನಣೆ ೧೬ನೆ ಶತಕದವರೆಗೆ ಮುಂದುವರಿದು ಆ ಹೊತ್ತಿಗಾಗಲೇ ಪಂಢರಿಪುರವು ಸಂಪೂರ್ಣವಾಗಿ ಮಹಾರಾಷ್ಟ್ರೀಯರ ಹಿಡಿತಕ್ಕೆ ಬಂದಿತ್ತು.

೨. ಮಹಾರಾಷ್ಟ್ರದಲ್ಲಿ ಮಾಧ್ವ - ವೈಷ್ಣವ ಪಂಥಕ್ಕೆ ಅಳಿಗಾಲ ಬಂದಿತು. 'ಮಧ್ವ ದ್ವೇಷಿಗಳು'. ಮಿಥ್ಯಾವಾದಿಗಳು - ಎಂಬ ಪದಗಳು ಇದಕ್ಕೆ ಪುಷ್ಟಿ ನೀಡುತ್ತವೆ.

೩. ಕರ್ನಾಟಕದ ಮಡಿ ಮಾಧ್ವ ಪರಂಪರೆಯ ಜನಕ್ಕೆ (ಅವರೇ ತಮ್ಮನ್ನು ಕರೆದುಕೊಂಡಂತೆ ಭೂ ದೇವರು) ಪಂಢರಪುರದ ವಿಠಲ ಗುಡಿಯ ಪರಿಸರದಲ್ಲಿ ಜಾತಿ, ಲಿಂಗ ಸಮಾನತೆಯ ಆಲೋಚನೆ ಹುಟ್ಟಿಕೊಂಡುದು ಅಸಹನೀಯವಾಗಿರಬೇಕು. ಅವರ ದೃಷ್ಟಿಯಲ್ಲಿ ವಿಠ್ಠಲ ಭ್ರಷ್ಟನಾದನು. ಹೀಗಾಗಿ ಈ ಧ್ವೈತ ಮಹಾರಾಷ್ಟ್ರದ ಹೊರಕ್ಕೆ ಬರುವುದು ಅನಿವಾರ್ಯವಾಯಿತು. ಅಧ್ವೈತ ಪರವಾದ ವಿಠ್ಠಲ ಸಂಪ್ರದಾಯದಿಂದ ಹೊರಬಂದ ಕರ್ನಾಟಕದ ದಾಸರು ವಿಠ್ಠಲನನ್ನು ಪೂಜಿಸುವ ಕೆಲಸದಲ್ಲಷ್ಟೇ ನಿರತರಾದರು.

ಕೃಷ್ಣದೇವರಾಯನು ಹಂಪಿಯಲ್ಲಿ ವಿಜಯ ವಿಠ್ಠಲ ಮಂದಿರವನ್ನು ಕಟ್ಟಿಸಿದನಷ್ಟೇ! ತಾನು ಉದಯಗಿರಿಯಿಂದ ತಂದ ವಿಠ್ಠಲಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪಿಸಿದನೆಂಬ ಹೇಳಿಕೆಯಿದೆ. ಉದಯಗಿರಿಯಲ್ಲಿದ್ದುದು ಪಂಢರಪುರದಿಂದ ಕೊಂಡೊಯ್ದು ಮೂರ್ತಿಯೆಂದೂ ಮರಾಠಿ ಸಂತ ಏಕನಾಥನ ಅಜ್ಜ ಭಾನುದಾಸನ ಕೋರಿಕೆಯ ಮೇರೆಗೆ ಕೃಷ್ಣದೇವರಾಯನು ವಿಠ್ಠಲನಮೂರ್ತಿಯನ್ನು ಹಿಂದಿರುಗಿಸಿದನೆಂದೂ ಹೇಳುತ್ತಾರೆ (ರಾಮಚಂದ್ರರಾವ್ ೧೯೮೧: ೧೫) ಆದರೆ ಈ ಹಿಂದೆ ಪ್ರಸ್ತಾಪಿದಂತೆ ಪುರಂದರದಾಸ - ವಾದಿರಾಜರ ಕಾಲದಲ್ಲಿ ವಿಠ್ಠಲಮೂರ್ತಿ ಹಂಪಿಯಲ್ಲಿದ್ದಿರಬೇಕು. ಏನೇ ಇರಲಿ ವಿಠ್ಠಲ ವಿಜಯನಗರದ ಅರಸರ ಕಾಲದಲ್ಲಿ ಜನಪ್ರಿಯ ದೈವತನಾಗಿದ್ದ ಎಂಬುದು ಸತ್ಯ.

ವಿಠ್ಠಲನನ್ನು ಕುರಿತು ಪ್ರಸ್ಥಾಪಿಸುವ ಚೌಂಡರಸ (೧೩ನೇ ಶತಮಾನ) ನು ತನ್ನ 'ದಶಕುಮಾರ ಚರಿತೆ'ಯಲ್ಲಿ ಪಂಢರಾಪುರವನ್ನು ' ಪಾಂಡುರಂಗ' ಎಂದೇ ಕರೆದಿದ್ದಾನೆ. ಹಾಗೆಂದು ವಿಠ್ಠಲನನ್ನು ಎಲ್ಲೂ ಪಾಂಡುರಂಗ ಎಂದು ಕರೆದಿಲ್ಲ. ಆತ ವಿಠ್ಠಲನನ್ನು 'ಪಂಡರೀರಾಯ'. 'ಅಭಂಗ ವಿಠ್ಠಲ' ಎಂದೇ ಕರೆದಿದ್ದಾನೆ. ಕೃಷ್ಣನು ದನ ಕಾಯುವ ಹುಡುಗರ ಜೊತೆ ಆಟ ಆಡುವ ಹವ್ಯಾಸವನ್ನು ಬಿಟ್ಟು ಅಲ್ಲಿ ವಿಠ್ಠಲ ಎಂದು ಕರೆಸಿಕೊಂಡಿದ್ದಾನೆ. ತಲೆಯ ಮೇಲೆ ಮುಕುಟ, ಮುಗುಳ್ನಗೆ ತುಳುತುವ ಮುದ್ದು ಮೊಗ, ಜಗನ್ಮೋಹಕವಾದ ಕುಂಡಲ, ಹೆಗಲ ಮೇಲೆ ಆಭರಣ, ಎದೆಯ ಮೇಲೆ ಹೊಳೆಯುವ ಪದಕ, ಜೋಡು ಕೈಗಳು, ಒಂದರಲ್ಲಿ ಹೊಸ ಗೋವಳ ಕೋಲು, ಎಡಗೈಯಲ್ಲಿ ಶಂಖ, ಎರಡೂ ಕೈಗಳೂ ಸೊಂಟದ ಮೇಲೆ, ಪಾದಗಳು ಇಟ್ಟಿಗೆಯ ಮೇಲೆ ಊರಿವೆ. 'ನಳಚಂಪು' ವಿನಲ್ಲೂ ವಿಠ್ಠಲನನ್ನು ಪಾಂಡುರಂಗ ಎಂದು ಕರೆದಿಲ್ಲ. 'ಪಂಡರೀರಾಯ'ನು 'ಪಾಂಡುರಂಗ' ಎಂಬುದಾಗಿ ಪ್ರಾಮುಖ್ಯಕ್ಕೆ ಬಂದುದು ಆಮೇಲೆ (ಚಿದಾನಂದ ಮೂರ್ತಿ ೨೦೦೫ : ೧೦೧).

ಅಚಲಾನಂದ ದಾಸ (ಕ್ರಿ.ಶ. ೯ನೆ ಶತಮಾನ) ದ ಭಾಗವತ ಪಂಥದ ಚೌಕಟ್ಟಿನಲ್ಲಿ ಪಂಢರಪುರ ಸರಹದ್ದಿನಲ್ಲಿ ಉಗಮವಾದ ವಿಠ್ಠಲ ಸಂಪ್ರದಾಯವು ಧ್ವೈತ ಮತದಿಂದ ಪೋಷಣೆಯನ್ನು ಪಡೆದು ಕರ್ನಾಟಕದ ಹರಿದಾಸ ಸಾಹಿತ್ಯದ ಪ್ರಧಾನ ಧಾರೆಯಾಯಿತು.

**ಬಡವರೊಡೆಯ ವಿಠ್ಠಲ**

ಕರ್ನಾಟಕದ ಹರಿದಾಸರಿಗೆ ಪಾಂಡುರಂಗ ವಿಠಲ ಅತಿ ಪ್ರೀತಿಯ ದೈವ. ವಿಷ್ಣು ಪಾರಮ್ಯವನ್ನು ಸಾರುವ, ಧ್ವೈತ ಮತ ನಿಷ್ಠೆಯ ಹರಿದಾಸರಿಗೆ ಪಂಢರಿರಾಯ ಆರಾಧ್ಯ ದೈವ. ಹೀಗಾಗಿಯೇ ಕನ್ನಡದ ಅನೇಕ ದಾಸರು ತಮ್ಮ ಅಂಕಿತವಾಗಿ ವಿಠ್ಠಲನನ್ನು ಆರಿಸಿಕೊಂಡರು ಪಂಢರಪುರದ ವಿಠ್ಠಲನನ್ನು ಕೀರ್ತನೆಗಳನ್ನು ರಚಿಸಿದವರಲ್ಲಿ ಅಂಬಾಬಾಯಿ (೧೮೭೦) ಭೂಪತಿ ವಿಠ್ಠಲ (೧೯೧೦) ವಿಜಯದಾಸ (೧೬೮೭ - ೧೭೫೫) ಜಗನ್ನಾಥ ದಾಸ (೧೮೮೦) ರು ಪ್ರಮುಖರು. ಪುರಂದರದಾಸರೂ ನಾಲ್ಕು ಕೀರ್ತನೆಗಳನ್ನು ರಚಿಸಿರುವುದು ದೊರೆಯುತ್ತವೆ.

ದಾಸರು ಪಾಂಡುರಂಗ ವಿಠ್ಠಲನನ್ನು ಈ ಕೆಳಗೆ ಕಂಡ ದೃಷ್ಟಿಕೋನದಿಂದ ಪರಿಶೀಲಿಸಿದ್ದಾರೆ.

೧. ಪಾಂಡುರಂಗ ವಿಠ್ಠಲನನ್ನು ವಿಷ್ಣು ಹಾಗೂ ಆತನ ದಶಾವತಾರದ ರೂಪವಾಗಿ ಚಿತ್ರಿಸಿರುವುದು.

೨. ತಿರುಪತಿ ತಿಮ್ಮಪ್ಪ, ಉಡುಪಿಯ ಕೃಷ್ಣ ಹಾಗೂ ಪಂಥರಾಪುರದ ವಿಠ್ಠಲ ಅಭೇದರು ಎಂಬ ನಿಲುಮೆ.

೩. ಪಂಢರಪುರದ ವಿಠ್ಠಲನೊಂದಿಗೆ ಭಕ್ತರ ವಿಶಿಷ್ಟ ಸಂಬಂಧ.

೪. ವಿಠ್ಠಲನ ಮೂರ್ತಿಯ ಸವಿವರ ವರ್ಣನೆ ಹಾಗೂ ಕ್ಷೇತ್ರದ ವರ್ಣನೆ.

೫. ವಿಠ್ಠಲನ ಹಿಂದಿರುವ ಐತಿಹ್ಯಗಳ ಚಿತ್ರಣ.

ದಾಸರಿಗೆ ವಿಠ್ಠಲ ಮತ್ತು ವಿಷ್ಣು ಅಭೇದರು. ವಿಷ್ಣುವೆಂದ ಮೇಲೆ ಆತನ ದಶಾವತಾರದ ರೂಪಗಳೆಲ್ಲವೂ ವಿಠಲನಿಗೆ ಅನ್ವಯಿಸುತ್ತದೆ.

ಅಚ್ಯುತಾನಂತನ ಕಂಡೆ
ಸಚ್ಚಿದಾನಂದೈಕ ಸರ್ವೋತ್ತಮನ ಕಂಡೆ
……………………………….
ನಿಚ್ಚಾ ಪಂಢರಿಪುರಿವಾಸಾ ರಂಗನ ಕಂಡೆ
……………………………..
ವಾಸುದೇವನ ಕಂಡೆ ವಾಮನನಾ ಕಂಡೆ
ಕ್ಲೇಶನಾಶನ ಕಂಡೆ ಕೇಶವನ ಕಂಡೆ
ವಾಸವಾನುಜನಾಗಿ ವಾಗೀಶಪಿತನ ಕಂಡೆ
………………………………….
ಗೋಪಿಯ ನಂದನ ಗೋಪಿಯರರಸ
ಗೋಪಾಲರಾ ಒಡೆಯ ಸಾಂದೀಪನಿ ಪ್ರಿಯಾ
ಕೋಪ ಕಾಳಿಂಗನ ತಾವನಾಶನ ಸಂ
………………………………
ಮನುಜನಾಗಿ ಧನುವನು ಮುರಿದು
ದನುಜನ ಕಾಲಿಲೆ ವರಸಿದೆ (ವಿಜಯದಾಸ ಪುಟ ೪)

ಕೃಷ್ಣಾವತಾರದ, ರಾಮಾವತಾರದ ಒಂದೊಂದೇ ಘಟನೆಯನ್ನು ನೆನಪು ಮಾಡುತ್ತಾ, ಅವುಗಳಿಗೆಲ್ಲಾ ಕಾರಣೀಭೂತನಾದವನು ಪಾಂಡುರಂಗ ಎಂದು ದಾಸರು ಹೇಳುತ್ತಾರೆ.

ಪುರಂದರದಾಸರಿಗೆ ಪಾಂಡುರಂಗ ವಿಠಲ ಕೂಸಾಗಿ ಕಂಡಿದ್ದಾನೆ. ಬಾಲಕೃಷ್ಣನ ಒಂದೊಂದು ರೂಪೂ ಪಾಂಡುರಂಗನಾಗಿ ಕಂಡಿದೆ.

ಅಂದಿಗೆ ಅರಳೆಲೆ ಇಟ್ಟಿತ್ತು ಕೂಸು
ಮುಂಗೈಯ ಬಾಪುರಿ ಇಟ್ಟಿತ್ತು ಕೂಸು
ಬಿಂದಲಿ ಸರಪಳಿ ಹಾಕಿತ್ತು ಕೂಸು
ಅಂಗಳದೊಳಗಿಂದ ಹೋಗ್ಯದೆ ಕೂಸು

ಕಾಲಿಗೆ ಕಿರುಗೆಜ್ಜೆ ಕಟ್ಟಿತ್ತು ಕೂಸು
ನೇವಳ ಪದಕವ ಹಾಕಿತ್ತು ಕೂಸು
ಜಾಲದ ಅಂಗಿಯ ತೊಟ್ಟಿತ್ತು ಕೂಸು
ಬಾಗಿಲ ಒಳಗಿದ್ದು ಹೋಗ್ಯದೆ ಕೂಸು
ಹುಲಿಯುಗುರಿನ ಸರ ಹಾಕಿತ್ತು ಕೂಸು
ಬೆರಳಲಿ ಉಂಗುರ ಇಟ್ಟಿತ್ತು ಕೂಸು
ಕಿವಿಯೊಳು ಚೌಕುಳಿ ಇಟ್ಟಿತ್ತು ಕೂಸು
ಕುಳಿತಿದ್ದ ಠಾವಿಲಿ ಕುಳಿತಿಲ್ಲ ಕೂಸು (ಪುಟ ೧೯)

ದಾಸರಿಗೆ ಉಡುಪಿಯ ಕೃಷ್ಣ, ತಿರುಪತಿಯ ವೆಂಕಟೇಶ ಹಾಗೂ ಪಂಢರಪುರದ ವಿಠಲರಲ್ಲಿ ಭೇದ ಕಾಣಿಸದು.

ವೆಂಕಟೇಶ ಅಲ್ಲಿ ಅವನು ಶಂಖ ಚಕ್ರ ಪಿಡಿದ ಕರವ
ಟೊಂಕದ ಮೇಲಿಟ್ಟುಕೊಂಡು ನಿಂತು ಇಲ್ಲಿ ವಿಠ್ಠಲನಾದ
ಕಡಗೋಲ್ನಿಂದ ಗಡಿಗೆ ಒಡೆದು ತುಡುಗು ಮಾಡಿದ ಹುಡುಗ ಬಂದು
ಉಡುಪಿಯಲ್ಲಿ ಕೃಷ್ಣನಾಗಿ ಓಡಿ ಬಂದಿಲ್ಲಿ ವಿಠ್ಠಲನಾದ
ಎಷ್ಟು ಜನ್ಮದ ಸುಕೃತವೋ ಶ್ರೀಕೃಷ್ಣ ವಿಠಲರೂಪದಿಂದ
ಭಕ್ತ ಜನರಿಗಾಲಿಂಗನ ಭೆಟ್ಟಿ ಕೊಡುತ ನಿಂತುಬಿಟ್ಟ
ಅನ್ನಬ್ರಹ್ಮ ಉಡುಪಿಯಲ್ಲಿ ಚೆನ್ನಬ್ರಹ್ಮ ಬೆಟ್ಟದಲಿ
ಸಣ್ಣ ತುಳಸಿ ಮಾಲೆ ಸಾಕು ಬ್ರಹ್ಮ ಭೂಪತಿ ವಿಠ್ಠಲಗೆ (ಪುಟ ೨೦)

ಪಂಢರಪುರದ ವಿಠ್ಠಲನಿಗೂ ಭಕ್ತರಿಗೂ ಅಂತರವಿಲ್ಲ. ಪಾಂಡುರಂಗನ ಮೈಮುಟ್ಟಿ. ಕಾಲು ಮುಟ್ಟಿ, ಅಪ್ಪಿ ಮುದ್ದಾಡಬಹುದು. ಆತ ಅಲ್ಲಿ ಬಡವರ ದೇವರು. ಪಂಢರಪುರದ ವಿಠಲನ ಕ್ಷೇತ್ರ ಅದು. ಭಕ್ತ - ಭಗವಂತರ ನಡುವಣ ಪ್ರೇಮಸಾಮ್ರಾಜ್ಯ. ಈ ಹೊಸ ವಿಶಿಷ್ಟ ಅನನ್ಯ ಸಂಪ್ರದಾಯವನ್ನು ಹುಟ್ಟು ಹಾಕುವುದರಲ್ಲಿ ವಾರಕರಿ ಪಂಥದ ಪಾತ್ರ ಮಹತ್ವದು. ಲಿಂಗ, ಜಾತಿ, ಸ್ಥಾನಮಾನಗಳನ್ನು ನಿರಾಕರಿಸಿ ಎಲ್ಲರಿಗೂ ಎಲ್ಲೆಡೆಗೂ ಪ್ರವೇಶ ಸಾಧ್ಯವಾಗಿಸಿದ ಜ್ಞಾನೇಶ್ವರನಿಗೆ ಪುರೋಹಿತ ವರ್ಗ ವಿರೋಧವಾಗಿತ್ತು. ವಿಠಲನನ್ನು ಭಕ್ತರು ಅಪ್ಪಿಕೊಳ್ಳುವ, ಕಾಲು ಮುಟ್ಟುವ, ಕೆನ್ನೆ ಸವರುವ ಮೂಲಕ ಮೈಲಿಗೆ ಮಾಡುತ್ತಿದ್ದಾರೆ ಎಂದು ನಂಬಲಾಯಿತು. ಪಂಢರಪುರದ ವಿಠಲ ಮೈಲಿಗೆ ಬ್ರಹ್ಮ ಎಂದು ತಿಳಿದವರೂ ಇದ್ದರು. ಅದಕ್ಕಾಗಿ ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ಕುಡಾಳ ತಾಲೂಕಿನ ವಾಲಾವಲದ ವಿಠಲಮಂದಿರದ (ವೇದೋ ನಾರಾಯಣ - ಮಡಿಬ್ರಹ್ಮ) ವಿಠಲನ ಕೊರಳ ತುಳಸೀ ಮಾಲೆಯನ್ನು ವರ್ಷಕ್ಕೊಮ್ಮೆ ಪಂಢರಪುರದ ವಿಠ್ಠಲನ ಕೊರಳಿಗೆ ಹಾಕಿ ಅಂದು ದೇವರಿಗೆ ಹೊಸಬಟ್ಟೆಯನ್ನು ತೊಡಿಸುವ ಸಂಪ್ರದಾಯ ಇಂದಿಗೂ ಚಾಲ್ತಿಯಲ್ಲಿದೆ. (ಗಾಯಕ್ವಾಡ್ ೨೦೦೫ : ೧೫) ಹೀಗೆ ಸಂತ ಚಳುವಳಿ ಕ್ಷೀಣಗೊಂಡ ಬಳಿಕ ವೈದಿಕಶಾಹಿ ಆಡಳಿತದಿಂದ ನಲುಗಿ ಹೋದ ಪಾಂಡುರಂಗನನ್ನು ಸಾರ್ವಜನಿಕಗೊಳಿಸಿದ ಕೀರ್ತಿ ಮಹಾರಾಷ್ಟ್ರದ ಸಮಾಜ ಸುಧಾರಕ ಜ್ಯೋತಿಫುಲೆ ಅವರದು (೧೯೪೮).

ಬಡವರೊಡೆಯ ವಿಠ್ಠಲನನ್ನು ತಮ್ಮ ಅನೇಕ ಕೀರ್ತನೆಗಳಿಂದ ಸ್ತುತಿಸಿದವರು ಭೂಪತಿ ವಿಠ್ಠಲರು.

ಈ ಪರಿಯ ಸುಲಭ ಇನ್ಯಾವ ದೇವರು ಉಂಟು
ಗೋಪಾಲಕೃಷ್ಣ ಪಂಢರೀನಾಥನಲ್ಲದೆ

ಕಾಸುಇಲ್ಲದೆ ಪೋಗಿ ಶ್ರೀಶನಂಘ್ರಿಯ ಮೇಲೆ
ಲೇಸಾಗಿ ಹಣೆಯಿಟ್ಟು ನಮಿಸಬಹುದೋ

ಕೂಸೆಂದು ಗದ್ದ ತುಟಿ ಹಿಡಿದು ಮುದ್ದಿಡಬಹುದು
ಕೂಸಾಗಿ ಕೈಹಿಡಿದು ಕಾಡಿಬೇಡಲು ಬಹುದೊ
ವಾಸುದೇವನ ಮೂರ್ತಿ ಅಪ್ಪಿಕೊಳ್ಳಲು ಬಹುದೊ

ಜಾತಿಕುಲಗೋತ್ರಗಳ ಆತ ನೋಡುವುದಿಲ್ಲ
ಪ್ರೀತಿಯಿಂದಲಿ ಬರುವ ಭಕ್ತನಕೆಲ್ಲ

ರಾತ್ರಿಹಗಲೆನ್ನದೇ ಸತತ ಜನಜಾತ್ರೆಗೆ
ಮಿತ್ರನಂದದಿ ಭೆಟ್ಟಿ ಕೊಡುವ ವಿಠ್ಠಲರಾಯ

ದುಡ್ಡಿನವ ತಿಮ್ಮಪ್ಪ - ದೊಡ್ಡಗುಡ್ಡದಿ ನಿಂತ
ಕಡಲದಡದಲಿ ನಿಂತ ಮಡಿವಂತ ಕೃಷ್ಣ
ಬಡವರೊಡೆಯನು ನಾನು ಬೇಗ ಬನ್ನಿರಿ ಎಂದು
ನಡದ ಮೇಲೆ ಕೈಯಿಟ್ಟು ನಿಂತ ಭೂಪತಿ ವಿಠ್ಠಲ (ಪುಟ ೫)

ಪಂಢರಪುರದ ವಿಠ್ಠಲ ಎಲ್ಲರ ಕೈಗೊಂಬೆಯಾಗಿ ಅವನ 'ಮಡಿ' ಕೆಟ್ಟುದನ್ನು ಯಾವೊಬ್ಬ ದಾಸನೂ ಪ್ರಸ್ತಾಪಿಸಿಲ್ಲ ಕರ್ಜಗಿಯ ದಾಸರನ್ನು ಬಿಟ್ಟು. ವಿಠ್ಠಲನಿಗೆ ದೊಡ್ಡ ಹರಕೆ ಹೊರಬೇಕಾಗಿಯೂ ಇಲ್ಲ. 'ಬುಕ್ಕಿಟ್ಟು ತುಳಸಿ ಮಾಲೆ ಕಟ್ಟಿ ಕೊರಳಿಗೆ ಹಾಕಿ ಅಪ್ಪಿಕೊಂಡರೆ ಸಾರೂಪ್ಯ ಕೊಡುವ ದಾತ' ಆತ.

ದಾಸಜನರ ಕ್ಲೇಶ ಹರಿಪಾ ದೋಷ ದೂರನನ್ನು ಕಂಡ ಭಕ್ತರು ಅಡಿಯಿಂದ ಮುಡಿಯವರೆಗೆ ವರ್ಣಿಸಿದ್ದಾರೆ. ಇಂತಹ ವರ್ಣನೆಯಲ್ಲಿ ವಸ್ತು ವಿವರಗಳಲ್ಲದೆ ಬೇರೇನೂ ಇಲ್ಲ.

ಅರುಣಾಬ್ಜೋಪಮ ಚಾರು ಚರಣಾಂಗುಲಿ ನಖರ
ತರುಣೇಂದುಚ್ಛವಿ ತಿರಸ್ಕರಿಸುವ ಪ್ರಖರ
ಕಿರುಗೆಜ್ಜೆ ಕಡಗ ನೂಪುರ ಪೆಂಡೆ ಶಫರ
ತೆರಜಾನು ಜಂಘ ಭಾಸುರ ರತ್ನ ಮುಕುರ (ಪುಟ ೬)

ಪಂಡರಪುರದ ವಿಠಲ ಕಟಿಯಲ್ಲಿ ಕರವಿಟ್ಟ ಭಂಗಿಯಲ್ಲಿ ಕಾಣಿಸಿಕೊಂಡಿದ್ದಾನೆ. ಈ ಭಂಗಿಗೆ ಕಾರಣವನ್ನು ಪುರಂದರದಾಸರು ಬಗೆಬಗೆಯಲ್ಲಿ ಊಹಿಸುತ್ತಾರೆ.

ಇದೊಂದು ಬಗೆಯ ವ್ಯಾಜ ಸ್ತುತಿ.

ರಾಜಸೂಯ ಯಾಗದಲ್ಲಿ ರಾಜೇಶ್ವರ
ರಾಜರು ಮೊದಲಾದ ಸುರರೆಲ್ಲರು
ಭೋಜನವನೆ ಮಾಡಿದೆಂಜಲು ಮೊದಲಾದ್ದು
ರಾಜೀವಾಕ್ಷನು ಎತ್ತಿದಾಯಾಸದಿಂದಲೊ
ಗೊಲ್ಲ ಬಾಲಕರೊಡಗೂಡಿ ತಾ ಬಂದು
ಗೊಲ್ಲತೇರ ಮನೆಪೊಕ್ಕು ಬೆಣ್ಣೆಯ ತಿಂದು

ಬಲ್ಲಿದ ತೃಣಾವರ್ತ ಮೊದಲಾದಸುರರನ್ನು
ಎಲ್ಲರನ್ನು ಕೊಂದ ಆಯಾಸದಿಂದಲೊ (ಪುಟ ೧೬)

ಪುರಾಣದಿಂದ ಎತ್ತಿಕೊಂಡ ಶಬ್ದ ಚಿತ್ರಗಳನ್ನು ಹೆಣೆಯುತ್ತಾ ಹೋಗುತ್ತಾರೆ.

ಪುಂಡರೀಕ ಮತ್ತು ಪಾಂಡುರಂಗ ವಿಠ್ಠಲರಿಗೆ ಸಂಬಂಧಿಸಿದಂತೆ ಕೆಲವೊಂದು ಐತಿಹ್ಯಗಳು ಪ್ರಚಲಿತವಿವೆ. ಪುಂಡರೀಕನು ತನ್ನ ಹೆಂಡತಿಯ ವ್ಯಾಮೋಹದಲ್ಲಿ ವೃದ್ಧ ತಂದೆ - ತಾಯಿಯರನ್ನು ನಿರ್ಲಕ್ಷಿಸುತ್ತಾನೆ. ರೋಹಿದಾಸನೆಂಬ ಚಮ್ಮಾರನು ತನ್ನ ಮಾತಾ - ಪಿತೃಗಳ ಸೇವೆಯನ್ನು ತಾದಾತ್ಮ್ಯದಿಂದ ಮಾಡುತ್ತಿರುವುದನ್ನು ಕಂಡು ಪರಿವರ್ತಿತನಾಗುತ್ತಾನೆ. ಹೀಗೆ ಹೃದಯ ಪರಿವರ್ತನೆಗೊಂಡ ಪುಂಡರೀಕನು ತನ್ನ ತಂದೆ ತಾಯಿಯರ ಸೇವೆಯಲ್ಲಿ ತೊಡಗಿದ್ದಾಗ ಸ್ವತಃ ವಿಷ್ಣುವೇ ಪರೀಕ್ಷಿಸಲು ಬರುತ್ತಾನೆ. ಅವನನ್ನು ಕಾದು ನಿಲ್ಲುವಂತೆ ಇಟ್ಟಿಗೆಯನ್ನು ಎಸೆಯುತ್ತಾನೆ. ಭಕ್ತನ ನಿಷ್ಠೆಯನ್ನು ಕಂಡು ಮೆಚ್ಚಿದ ವಿಠೋಬಾ ಸೊಂಟಕ್ಕೆ ಕೈಕೊಟ್ಟು ಚಿರಸ್ಥಾಯಿಯಾಗಿ ಭಕ್ತನಿಗಾಗಿ ಕಾಯುತ್ತ ನಿಂತ. ಹೀಗೆ ವಿಠಲ 'ಪುಂಡರೀಕ ವರದ' ನಾಮ ಈ ಐತಿಹ್ಯವನ್ನು ಎಲ್ಲ ದಾಸರೂ ತಮ್ಮ ಕೀರ್ತನೆಗಳಲ್ಲಿ ಕೀರ್ತಿಸಿರುವುದು ಕಂಡು ಬರುತ್ತದೆ.

ಪುಂಡರೀಕನಿಗೊಲಿದು ಒಂದು ಇಟ್ಟಿಗೆ ಮೇಲೆ
ಪಾಂಡವರ ಪ್ರಿಯಬಂಧು ನೆಲಸಿದಂಥಾ (ಪುಟ ೧೧)

ಕಟಿಯಲಿ ಕರವಿಟ್ಟು ಮೆರೆವನ
ಹಠದಿ ವಗದಿಟ್ಟಿಗೆಲಿ ನಿಂತನ (ಪುಟ ೧೬)

ವಿಠಲನ ದಿವ್ಯರೂಪವನ್ನು ವೀಕ್ಷಿಸಿದ ಭಕ್ತನೊಬ್ಬ ವಿಠ್ಠಲಮಂದಿರದ ದೈನಂದಿನಾ ಪೂಜಾ ಕೈಂಕರ್ಯವನ್ನು ಮನದಣಿಯೆ ಹಾಡಿದ್ದಾನೆ.

ಪಂಚ ಪಂಚ ಉಷಃಕಾಲದೀ
ಮಂಚಬಾಣನ ಪಿತಗೆ ಆರುತಿ
ಮುಂಚಿನೊಸನಗಳನೆಲ್ಲ ತೆಗೆಯುತ ತೈಲವೆರೆಯುವರೂ
ಮಂಚರೂಪಗೆ ಚಂದ್ರಭಾಗೆಯ
ಪಂಚಗಂಗೋದಕಗಳೆರೆಯುತ
ಪಂಚ ಅಮೃತ ಸ್ನಾನಗೈಸುವ ಸೊಬಗ ನೋಡಿದೆನು

ಬೆಣ್ಣೆ ಬಿಸಿನೀರೆರದು ಕೃಷ್ಣಗೆ
ಸಣ್ಣವಸ್ತ್ರದಿ ಒರಸಿ ಮೈಯನು
ಘನ್ನಪೀತಾಂಬರವನುಡಿಸುತ ಜರಿಯ ಶಾಲ್ಹೊದಿಸಿ
ಬಣ್ಣದೊಸ್ತ್ರದ ಪಾಗು ಸುತ್ತುತ
ಬೆಣ್ಣೆ ಕಳ್ಳಗೆ ಅಂಗಿ ತೊಡಿಸುವ
ಸಣ್ಣ ಮಲ್ಲಿಗೆ ಹಾರ ಉಪವೀತ ಸಡಗರವ ಕಂಡೆ (ಪುಟ ೩೬)

ಮಧ್ಯಾಹ್ನ ಮಹಾಪೂಜೆಯ ಬಳಿಕದ ಚಿತ್ರಣ :

ಸರಿಯಾಗಿ ಮಧ್ಯಾಹ್ನ ಮಹಾಪೂಜೆ ನಡೆಯುವುದು
ಭಕ್ತರಿಗೆ ಲೆಖ್ಖವಿಲ್ಲಾ
ಪಾದಕ್ಕೆ ಹಣೆಹಚ್ಚಿ ತಿಕ್ಕುವರು ಮೇಲೆದ್ದು
ಅಪ್ಪಿಕೊಳ್ಳುವರು ಸ್ವಾಮಿ ತಿರುಗಿ ಬರಲಾಗದೇ
ನಿಂತು ಬಿಡುವವರು ಅಲ್ಲಿ ದಬ್ಬಿದರು ಎಚ್ಚರಿಲ್ಲಾ
ಇಂಥ ಭಕ್ತಿಯ ಭಾವ ಇನ್ನೆಲ್ಲಿಯೂ ಕಾಣೆ
ಭಕ್ತವತ್ಸಲ ವಿಠ್ಠಲಾ (ಪುಟ ೧೪)

ಪಂಢರಪುರದೊಳಗೆ ಪುರಂದರದಾಸರ ಕಂಬವಂತೂ ಬಹಳ ಪ್ರಸಿದ್ಧವಾದುದು. ಆದರೆ ಅದರ ಹಿಂದಿರುವ ಐತಿಹ್ಯದ ಸತ್ಯಾಸತ್ಯತೆಯ ಬಗ್ಗೆ ಖಚಿತವಾಗಿ ಹೇಳತೀರದು. ಪುರಂದರದಾಸರನ್ನು ಒಂದು ಅಪವಾದದ ಕಾರಣಕ್ಕಾಗಿ ಕಂಬಕ್ಕೆ ಕಟ್ಟಿ ಹೊಡಿಸಿದರೆಂದೂ ಆಗ ಅವರು 'ಮುಯ್ಯಕ್ಕೆ ಮುಯ್ಯ ತೀರಿತು ಜಗದಯ್ಯ, ವಿಜಯ್ಯ ಸಹಾಯ ಪಂಢರಿರಾಯ' ಎಂಬ ಕೃತಿಯನ್ನು ಹಾಡಿದರೆಂಬ ಪ್ರತೀತಿಯಿದೆ. ಆದರೆ ಮಂದಿರದ ಮಂದಿಯಲ್ಲಿ ಕೇಳಿದರೆ ಯಾರೂ ಅದನ್ನು ಪುರಂದರದಾಸರ ಕಂಬವೆಂದು ಗುರುತಿಸುತ್ತಿಲ್ಲ. ಹೀಗಾಗಿ ಈ ಕತೆಯಲ್ಲಿ ಹುರುಳಿಲ್ಲವೆನಿಸುತ್ತದೆ. ಪಂಢರಪುರದ ವಿಠ್ಠಲಮೂರ್ತಿಯ ಎದುರುಗಡೆ 'ಸೋಳಹ ಕಂಬ' (ಹದಿನಾರು ಕಂಬಗಳ ಮಂಟಪ) ಎನ್ನುವ ಆವರಣವಿದೆ. ಅಲ್ಲಿನ ಎರಡನೆಯ ಕಂಬಕ್ಕೆ ಬೆಳ್ಳಿಯ ತಗಡನ್ನು ಮಡಾಯಿಸಿದ್ದು ಕುಂದಣದ ಕೆಲಸ ಮಾಡಿದ್ದಾರೆ. ಭಕ್ತರು ಈ ಕಂಬವನ್ನು ಅಪ್ಪಿಕೊಂಡು ವಿಠ್ಠಲನ ದರ್ಶನ ಮಾಡುವುದು ಸಂಪ್ರದಾಯ. ಇದನ್ನೇ ನಮ್ಮವರು (ಕನ್ನಡಿಗರು) 'ಪುರಂದರ ಕಂಬ'ವೆಂದು ಹೇಳುತ್ತಿರುವುದು. ವಿಚಾರ ಮಾಡಿದರೆ ಈ ಕಂಬಕ್ಕೂ ಪುರಂದರದಾಸರಿಗೂ ಸಂಬಂಧ ಕಾಣದು. ಅಲ್ಲಿನ ಜನ ಅದನ್ನು 'ಗರುಡ ಕಂಬ' ವೆಂದೇ ಗುರುತಿಸುತ್ತಾರೆ.

ಕನ್ನಡದ ದಾಸಸಾಹಿತ್ಯದಲ್ಲಿ ಪುಂಡರಪುರದಲ್ಲಿ ಜರುಗುವ ವಾರಕರಿಯ ಪ್ರಸ್ತಾವ ಬಾರದೆ ಇರುವುದೆ ಆಶ್ಚರ್ಯ. ಪತಿತರಿಗೂ ದಲಿತರಿಗೂ ಪಂಢರಪುರ ಕ್ಷೇತ್ರದಲ್ಲಿ ಮುಕ್ತ ಪ್ರವೇಶದ ವಿವರ ಭೂಪೇಶ ವಿಠಲರ ಹಾಡುಗಳನ್ನು ಹೊರತು ಇನ್ನಾರಲ್ಲೂ ದಾಖಲೆಗೊಂಡಿಲ್ಲ ಜ್ಞಾನದೇವ, ತುಕಾರಾಮ, ನಾಮದೇವ ಮುಂತಾದ ಸಂತರು ನಮ್ಮ ದಾಸರ ಗಮನ ಸೆಳೆದಿಲ್ಲ.

ಪಂಢರಪುರದ ವಿಠ್ಠಲನ ಕತೆ ರೋಚಕವಾದುದು. ಒಂದು ಕಾಲದಲ್ಲಿ ಕನ್ನಡದ ನೆಲದೊಳಗಿನ 'ಕಾನಡಿ ವಿಠಲ_' ಕನ್ನಡ ಮರಾಠಿ ಭಕ್ತರೆಲ್ಲರಿಗೂ ತಂದೆ - ತಾಯಿ - ಬಂಧು - ಬಳಗ. ಕನ್ನಡದ ಹರಿದಾಸರ ಆರಾಧ್ಯ ದೈವ, ವಿಠಲನ ಅಂಕಿತ ಬಳಸುವ ಮೂಲಕ, ಅವನ ಅಂಕೆಗೆ ಒಳಗಾದವರಾಗಿದ್ದಾರೆ.

**ಎ. ವಿ. ನಾವಡ**
ಸಂಚಾಲಕ
ಪುರಂದರದಾಸ ಅಧ್ಯಯನ ಪೀಠ.

## ಪುರಂದರದಾಸ ಅಧ್ಯಯನ ಪೀಠದ ಪರವಾಗಿ

ಕನ್ನಡ ವಿಶ್ವವಿದ್ಯಾಲಯ ಪುರಂದರದಾಸ ಅಧ್ಯಯನ ಪೀಠವು ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಒಂದು ಭಾಗವಾದ ಹರಿದಾಸ ಸಾಹಿತ್ಯವನ್ನು ಕುರಿತು ಅಧ್ಯಯನ ಹಾಗೂ ಪ್ರಸರಣದ ಗುರಿಯನ್ನು ಇರಿಸಿಕೊಂಡು ಕಳೆದ ನಾಲ್ಕು ವರ್ಷಗಳಿಂದ ಕೆಲಸ ಮಾಡುತ್ತಿದೆ. ದಾಸ ಸಾಹಿತ್ಯವನ್ನು ಮತಧರ್ಮಗಳ ಚೌಕಟ್ಟಿನಿಂದ ಹೊರತಂದು ಮಧ್ಯಕಾಲಿನ ಭಕ್ತಿ ಪರಂಪರೆಯ ಒಂದು ಉತ್ಪನ್ನ ಎಂಬ ನಿಟ್ಟಿನಿಂದ ಗ್ರಹಿಸಲು ಪ್ರಯತ್ನಿಸುತ್ತಿದೆ. ಈ ಗುರಿಯನ್ನು ತಲುಪಲು ದಾಸರನ್ನು ಹಾಗೂ ಅವರ ಸಾಹಿತ್ಯ ಪರಂಪರೆಯನ್ನು ಕುರಿತ ಪುಸ್ತಕಗಳ ಪ್ರಕಟಣೆ ಮತ್ತು ಕ್ಷೇತ್ರಕಾರ್ಯದ ಮೂಲಕ ಮೌಖಿಕ ಪರಂಪರೆಯಲ್ಲಿರುವ ದಾಸರ ರಚನೆಗಳ ಸಂಗ್ರಹ ಹಾಗೂ

ಪಠ್ಯೀಕರಣ, ಪ್ರಕಟಣ ವಿಧಾನವನ್ನು ಬಳಸಿದೆ. ಜೊತೆಗೆ ದಾಸರ ರಚನೆಗಳನ್ನು ಸಾಂಸ್ಕೃತಿಕ ಪಠ್ಯಗಳೆಂದು ಪರಿಗ್ರಹಿಸಿ ವರ್ತಮಾನದ ಸಂದರ್ಭದಲ್ಲಿ ಅವುಗಳ ಪ್ರಸ್ತುತತೆಯನ್ನು ಮರುಪರಿಶೀಲಿಸುವ ಹಿನ್ನೆಲೆಯಲ್ಲಿ ಸಮ್ಮೇಳನ ಹಾಗೂ ವಿಚಾರಸಂಕಿರಣಗಳನ್ನು ನಡೆಸಿಕೊಂಡು ಬರುತ್ತಿದೆ. ಉಡುಪಿ, ಧರ್ಮಸ್ಥಳ, ರಾಯಚೂರು, ಪಂಡರಪುರಗಳಲ್ಲಿ ಜರುಗಿದ ದಾಸ ಸಾಹಿತ್ಯ - ಸಂಸ್ಕೃತಿ ಸಮ್ಮೇಳನಗಳು ನಾಡಿನಲ್ಲಿ ದಾಸ ಸಾಹಿತ್ಯವನ್ನು ಕುರಿತಂತೆ ಹೊಸ ಎಚ್ಚರವನ್ನು ತಂದಿದೆ.

'ಹರಿದಾಸರ ಪಾಂಡುರಂಗ ವಿಠಲ' ಒಂದು ಸಂಕಲನ ಕೃತಿ. ಪಂಢರಪುರದ ವಿಠ್ಠಲ ಮೂಲತಃ ಕರ್ನಾಟಕದವನು ಅನಂತರ ಪಂಢರಪುರಕ್ಕೆ ಹೋದನು ಎಂದು ಮರಾಠಿ ಸಂತರು ಹೇಳುತ್ತಾರೆ.

ಕಾನಡಾ ಹೋ ವಿಠ್ಠಲ ಕರ್ನಾಟಕೂ
ತ್ಯಾನೆ ಮಜ ಲಾವಿಲಾ ವೇಧು

ಎಂದು ಕನ್ನಡದ ವಿಠ್ಠಲ ತನ್ನ ಮನಸ್ಸನ್ನು ಸೆಳೆದುಕೊಂಡನು ಎಂದು ಸಂತ ಜ್ಞಾನೇಶ್ವರ ಹೇಳಿದ್ದಾನೆ. ಪಂಢರಪುರದ ವಿಠಲನ ಗುಡಿಯಲ್ಲಿ ಕ್ರಿ.ಶ. ೧೧೯೭ರ ಶಿಲಾಲೇಖವೊಂದು ಕನ್ನಡದಲ್ಲಿದೆ. ಕರ್ನಾಟಕದ ಯಾದವ ವಂಶದ ದೇವಗಿರಿಯ ರಾಮದೇವರಾಯನ ಹೆಸರು ಅಲ್ಲಿ ಉಲ್ಲೇಖವಾಗಿದೆ. ಕನ್ನಡದ ಅನೇಕ ದಾಸರು ತಮ್ಮ ಅಂಕಿತದೊಳಗೆ ವಿಠ್ಠಲನ ಬಹುರೂಪೀ ಹೆಸರುಗಳನ್ನೇ ಬಳಸಿರುವುದು ಗಮನಾರ್ಹ. ಕನ್ನಡ ದಾಸರು ತಮ್ಮ ಕಾವ್ಯರಚನೆಯ ಸಂದರ್ಭಗಳಲ್ಲಿ 'ಇಟ್ಟಿಗೆಯ ಮೇಲೆ ನಿಂತ ಪಾಂಡುರಂಗ'ನನ್ನು ಬಹು ಬಗೆಯಾಗಿ ಹೊಗಳಿದ್ದಾರೆ. ಬಡವರ ದೇವರೆಂದೇ ಖ್ಯಾತನಾದ ಪಾಂಡುರಂಗ ವಿಠ್ಠಲನೊಂದಿಗೆ ಬೆಳೆದು ಬಂದ ವಾರಕರಿ ಸಂಪ್ರದಾಯದಲ್ಲಿ ಕನ್ನಡಿಗರ ಪಾತ್ರವೂ ನಗಣ್ಯವಲ್ಲ. ಭೀಮ ನದಿಯ ಕವಲು ಚಂದ್ರಭಾಗ ನದಿಯ ದಂಡೆಯ ಮೇಲೆ ನಿಂತಿರುವ ಪಾಂಡುರಂಗ ವಿಠ್ಠಲನನ್ನು ಕನ್ನಡದ ಕವಿಗಳು ಗ್ರಹಿಸಿರುವ ಬಗೆಯನ್ನು ಇಲ್ಲಿನ ೫೮ರ ರಚನೆಗಳು ಹೇಳುತ್ತವೆ. ಈ ಮೂಲಕ ಒಂದು ನೆಲ ಕಟ್ಟಿದ ಸಾಂಸ್ಕೃತಿಕ ಪರಿವೇಷದ ಸ್ವರೂಪವನ್ನು ತಿಳಿಯಲು ಅನುಕೂಲವಾಗುತ್ತದೆ.

ಈ ಪುಸ್ತಕವನ್ನು ಪುರಂದರದಾಸ ಅಧ್ಯಯನ ಪೀಠದ ಪರವಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿದೆ. ಅದಕ್ಕಾಗಿ ಪ್ರಸಾರಾಂಗದ ನಿರ್ದೇಶಕರಾದ ಡಾ. ಹಿ.ಚಿ. ಬೋರಲಿಂಗಯ್ಯನವರಿಗೆ ಕೃತಜ್ಞತೆಗಳು. ಮುದ್ರಣ ವಿನ್ಯಾಸದ ಬಗೆಗೆ ಕಾಳಜಿ ವಹಿಸಿರುವ ಶ್ರೀ ಬ. ಸುಜ್ಞಾನಮೂರ್ತಿಯವರಿಗೆ ವಂದನೆಗಳು.

ಎಲ್ಲಕ್ಕಿಂತ ಮುಖ್ಯವಾಗಿ ಪುರಂದರದಾಸ ಅಧ್ಯಯನ ಪೀಠದ ಗೊತ್ತು ಗುರಿಯ ಬಗೆಗೆ ಅಗಿಂದಾಗ್ಗೆ ಮಾರ್ಗದರ್ಶನ ಮಾಡುತ್ತಾ. ಪೀಠದ ಸಂಶೋಧನೆ ಕಾರ್ಯಗಳಿಗೆ ಎಲ್ಲಿಲ್ಲದ ಪ್ರೋತ್ಸಾಹ ನೀಡುತ್ತಿರುವ ನಮ್ಮ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಎ. ವಿವೇಕ ರೈ ಅವರಿಗೆ ವಿಶೇಷ ನೆನಕೆಗಳು.

**ಪ್ರೊ. ಎ. ಬಿ. ನಾವಡ**
ಸಂಚಾಲಕ
ಪುರಂದರದಾಸ ಅಧ್ಯಯನ ಪೀಠ.

**೧. ಧ್ರುವ**

**ಅಟ್ಟ**

ಅಂದು ಮಾನಿಸನಾದೆಲೋ ಹಾಹ ಕ್ಷೇತದಲ್ಲಿ
ಬಂದು ಸುಳಿದು ಪೋದುದ ಅರಿಯಾದೆ

ಮಂದಮತಿಗ ನಾನು ಮನುಷ್ಯನ್ನವ ಬಿಡದೆ
ತಿಂದ ಪ್ರಯುಕ್ತದಲ್ಲಿ ಇನಿತಾಯಿತೋ
ಹಿಂದೆ ಮಾಡಿದ ಕರ್ಮಾವರ್ಕವಾಗಿದ್ದ ಮರವೊ
ಸಂದೇಹಗೊಳಿಸುವುದು ನಿನ್ನ ಬಗೆಯೊ
ಎಂದಿಗೆಂದಿಗೆ ತಿಳಿಯಾದಿದ್ದೆ ವಿಷಯಂಗಳಿಗೆ
ಪೊಂದಿಕೊಂಡು ನಿನ್ನ ಮಹಾಮಹಿಮೆಯಾ
ಇಂದು ನೀನೆ ಕೃಪೆಯಿಂದ ಬಾಂಧವನಾಗಿ
ಬಂದು ತಿಳಿಪಿದ ಕಾರಣದಿಂದಲಿ
ನಂದವಾಯಿತು ಮನಕೆ ಉತ್ಸಾಹವೆಂದೆಂಬೋ
ಸಿಂಧುವಿನೊಳಗೆ ಮುಣುಗಿ ತೇಲಾಡಿದೆ
ಅಂದೆ ಈ ಪರಿಯಲ್ಲಿ ತಿಳಿಸಿದರಾದರೆ
ಮುಂದಿಯೊಳಗೆ ತಲೆ ಹೊರೆಯಾಗುವೆನೆ
ಇಂದಲ್ಲ ನಿನ್ನ ಮಾಯಾ ಅನಂತಕಲ್ಪಕೆ
ಒಂದೊಂದು ಪರಿ ಉಂಟು ಬೊಮ್ಮಗರಿದು
ಕುಂದಿದೆ ಸತ್ವರಿಗೆ ಮೊದಲು ವಿಷಯಾ ಆಮೇಲೆ
ಸುಂದುವಾದಾಮೃತ ನೋಡ ನೋಡೆ
ಎಂದು ನಿನ್ನಂಘ್ರಿಧ್ವಯವ ಪೂಜಿಪ ಸಜ್ಜನರು
ಒಂದೆ ಮನಸಿನಲಿ ಸಾರುವರೊ
ನಂದ ಗೋಕುಲದಲ್ಲಿ ಗೋಪಾಲಕನಾಗಿದ್ದೆ ದೇವ. ೧

**ಮಟ್ಟ**

ಜಾರಿಪೋದ ಜೀವ ಇಂದ್ರದೇವರ ಮನೆಯ
ದ್ವಾರದ ಬಳಿಯಲ್ಲಿ ದಾಸ್ಯ ಭಾವವೆಂದು
ಕಾರುಣ್ಯವೆ ಮಾಡಿ ಸ್ವಪ್ನದಲಿ ಇದೆ
ಮಾರುತಿ ಪೇಳಲಾಯು ನಿಶ್ಚಯಿಸಿಕೊಂಡೆ
ಆರಾರ ಸಾಧನ ಆವುದೊ ನಾನರಿಯೇ

ಘೋರಪಾತಕ ಹರ ವಿಜಯವಿಠಲ ಹದಿ
ನಾರು ಸಾವಿರ ಗೋಪಸ್ತ್ರೀಯರಾಳಿದ ಕೃಷ್ಣ ೧

**ತ್ರಿವಿಡಿ**

ಈರ್ವರ ಕರಸುವದೆಂದವ ಪೇಳಿದ
ಗೀರ್ವಾಣ ಸಭೆಯಲ್ಲಿ ನುಡಿದ ಮಾತು
ಊರ್ವಿಯೊಳಗೆ ಸಿದ್ಧಪ್ರಮೇಯ ಇದೆ ನಿಜವೆಂದು
ನಿರ್ವಾಧಿಕ ಬಾಲಾಪ್ರಾಯವೆನದೆ
ಗರ್ವವ ತಗ್ಗಿಸಿ ಕರದು ಒಯ್ಯದೆ ಬಿಡರು
ನಿರ್ವಾಹಕರ್ತರು ಮೇಲಿನವರು
ನಿರ್ವಹಿಸಲಾರರು ಮರ್ತ್ಯರೆಂದೆನುತ ಆ
ಓರ್ವನು ಕೂಗಿ ಸಾರಿಪೋದನು
ಸರ್ವಥಾ ನಾನಿದಕೆ ಶಂಕಿಸುವವನಲ್ಲಾ
ಸರ್ವದ ನಿನ್ನಾಜ್ಞದವನೋ ನಾನು
ಸರ್ವಶಕ್ತನೋ ಕೇಳೋ ಬಿನ್ನಪ ಒಂದುಂಟು
ಪೂರ್ವದಲ್ಲಿದ್ದ ಮನಸ್ಸಿನಪೇಕ್ಷ
ಗೀರ್ವಾಣ ನದಿಸ್ನಾನ ಗಯ ಪಿಂಡದಾನಾ
ಸರ್ವೇಂದ್ರಿಯಾಗಳಿಂದ ನಿನ್ನ ಸೇವೆ
ದರ್ವಿ ಭೂತಸ್ಥನಾಗಿಹನೆಂದು ಮುನ್ನಿಸಿ
ಪೂರ್ವಮತಿಯ ಕೊಟ್ಟು ಪಾಲಿಸುತ್ತ
ಇರ್ವಗೆ ಮಾಡಿಸು ಪುಸಿಯಗೊಡದೆ ಮಾತು
ದೂರ್ವಿನಾದರೂ ನಿನಗೆ ಕೊಡಲರಿಯೆನೋ
ಶರ್ವಾದಿಗಳ ವಂದ್ಯ ವಿಜಯ ವಿಠಲಕೃಷ್ಣ
ನಿರ್ವಾಣಗಿಂದಧಿಕ ನಿನ್ನ ಭಕ್ತಿ ಮುಕುತಿ ಸುಖ ೨

**ಅಟ್ಟ**

ಕಸಗೊಂಡ ಭೂಪತಿ ತಿರುಗಿ ಕೊಡುವೆನೆಂದು
ವಸಿಕರನಾಗಿ ಬಡವಂಗೆ ಒಲಿದಾರೆ
ವಸುಧಿ ಮಾನವರೆಲ್ಲಾ ಒಂದಾಗಿ ಪೋಗಿ ಮಾ
ಣಿಸಲಾಗಿ ಭೂಪತಿ ಕೊಡದಿಪ್ಪನೇ
ಬಿಸಜನಾಭನ ಕೃಪಾರಸಪೂರ್ಣ ದೃಷ್ಟಿಲಿ
ನಸುನಗೆಯಲ್ಲಿ ನಿನ್ನ ಭಕುತನ್ನ ಸಂತಾಪ
ಕೊಸರಿದರಿವರೆಂದು ಇಚ್ಛೆ ಮಾಡಿದರೆ ನಿ
ಲ್ಲಿಸಲಾಪರೆ ಸರ್ವಲೋಕದವರು ಕೂಡಿ
ಪಶುಪತಿ ಮಿಕ್ಕಾದವರು ಈ ಮಾತಿಗೆ
ಕುಶಲವಾಗಲೆಂದು ನಿನ್ನ ಸ್ತುತಿಪರು

ವಿಷಭುಂಜ ವಿಜಯ ವಿಠಲ ಕೃಷ್ಣ ಒಲಿದಾರೆ
ಹಸಗೆಟ್ಟು ಪೋಗುವುದು ಅನಾದಿ ದುಷ್ಕರ್ಮ ೪

**ಆದಿ**

ಚಿತ್ತವಾದರು ಹರಿಯ ಚಿತ್ತಜನಯ್ಯಾ ನಿನ್ನ
ಚಿತ್ತ ನಮ್ಮ ಭಾಗ್ಯ
ಹತ್ತಾರು ತುತ್ತು ಪುಣ್ಯಕೀರ್ತಿಯಂ ಬರುವಂತೆ
ವಾರ್ತಿಯಾಗಲಿ ಎನ್ನ ಆರ್ತವ ಪರಿಹರಿಸು
ಸ್ತೋತ್ತಮರ ಗುರುವೆ ಎತ್ತಿ ಕರವ ಮುಗಿವೆ
ಮತ್ತೊಂದಾವರು ಅರಿಯೆ ಮಿತ್ರಾನೆ ನಮಗೆ ನೀನು
ನಿತ್ಯದಲ್ಲಿ ರಕ್ಷಿಸು ಸತ್ಯಸಂಕಲ್ಪ ಸಿದ್ಧಿ ವಿಜಯ ವಿಠಲ ಇದೇ
ಉತ್ತರ ಲಾಲಿಸ್ಯೆ ಅರಿಷ್ಟ ನಿವಾರಣಾ ೫

**ಜತೆ**

ಸಂತಾಪ ಕಳೆವಲ್ಲಿ ನೀನಲ್ಲದಿನ್ನಿಲ್ಲ
ಶಾಂತ ಮೂರುತಿ ನಮ್ಮ ವಿಜಯವಿಠಲ ಕೃಷ್ಣ ೬

೨

**ಧ್ರುವ**

ಅಚ್ಯುತಾನಂತನ ಕಂಡೆ
ಸಚ್ಚಿದಾನಂದೈಕ ಸರ್ವೋತ್ತಮನ ಕಂಡೆ
ಅಚ್ಚ ಮಲ್ಲಿಗೆ ವನಮಾಲಾನ ಕಂಡೆ
ಪಚ್ಚಕಡಗ ವಿಹ್ಯರಾ ಕಂಡೆ
ನೆಚ್ಚಿದ ಭಕ್ತ ಪೊರೆವದಾತನ ಕಂಡೆ ಅಚ್ಯುತಾನಂತ
ಅಚ್ಚರಿಯಾ ದೈವಾವೆ ವಿಜಯವಿಠಲರೇಯಾ
ನಿಚ್ಚಾ ಪಂಢರಪುರಿವಾಸಾ ರಂಗನ ಕಂಡೆ ೧

**ಮಟ್ಟ**

ವಾಸುದೇವನ ಕಂಡೆ ವಾಮನನಾ ಕಂಡೆ
ಕ್ಲೇಶನಾಶನ ಕಂಡೆ ಕೇಶವನ ಕಂಡೆ
ವಾಸವಾನುಜನಾಗಿ ವಾಗೀಶ ಪಿತನ ಕಂಡೆ
ಶ್ರೀಶ ವಿಜಯವಿಠಲೇಶ ಚಂದ್ರಭಾಗಾ
ವಾಸ ರಂಗನ ಕಂಡೆ ವರನಾ ಕಂಡೆ ೨

**ತ್ರಿವಿಡಿ**

ಕುಲಾವಿ ಶಿರದಲ್ಲಿ ಇಟ್ಟು ಸೊಬಗುಕಂಠ
ದಲ್ಲಿ ಮೆರೆವ ಎಳೆ ತುಳಸಿಮಾಲೆ ನವ
ಮಲ್ಲಿಕ ಸುರಗಿ ಜಾಜಿದಂಡೆ, ಉಡಿ
ಯಲ್ಲಿ ಗುಲ್ಲಿಯ ಚೇಲಾ ಸಿಗಿಸಿಕೊಂಡಾ ಗೋವಾ
ಳೆಲ್ಲಾರು ಒಂದಾಗಿ ತುರುವಿಂಡು ಕಾಯುವತಾ
ಇಲ್ಲಿಗೆ ಬಂದಾ ಶ್ರೀವಲ್ಲಭಾ ಯದುಪಾ
ಚಲ್ಲಾಗಂಗಳ ಚಲುವ ವಿಜಯವಿಠಲ ಸ್ವಾಮಿಯಾ
ಎಲ್ಲಿಂದ ಬಂದ ಮತ್ತೆಲ್ಲಿಪ್ಪನ ಕಂಡೆ ೩

**ಅಟ್ಟ**

ಗೋಪಿಯನಂದನ ಗೋಪಿಯರರಸ
ಗೋಪಾಲರಾ ಒಡಿಯಾ ಸಾಂದೀಪನಿ ಪ್ರೀಯಾ
ದ್ರೌಪದಿಯಾ ಮಾನವ ಪರಿಪಾಲಕಾ
ತಾಪಹರ ನಮ್ಮ ವಿಜಯವಿಠಲನ್ನ
ಈ ಪಾಂಡುರಂಗಾ ಕ್ಷೇತ್ರದಲ್ಲಿ ಕಂಡೆ ೪

**ಆದಿ**

ಮನುಜನಾಗಿ ಧನುವನು ಮುರಿದು
ದನುಜನ ಕಾಲಿಲೆ ವರಸಿದೆ
ಮನುಜನಾಗಿ ಮಡಿಯನ್ನು ಉಟ್ಟು
ತನುವಿಗೆ ಗಂಧವ ಪೂಸಿದಾ
ಮನುಜನಾಗಿ ಹರನ ಸೋಲಿಸಿ
ತನುಜ ತನುಜನ್ನ ಬಿಡಿಸಿದ
ಮನುಜನಾಗಿ ಮನುಜ ಧರ್ಮವ
ಜನರಿಗೆ ಸೋಜಿಗೆ ತೋರಿದ
ಮನುಜನಲ್ಲ ಇದು ಮಾಯಾದ ಬೊಂಬೆ
ಘನ ವಿಜಯವಿಠಲನ್ನ ಕಂಡೆ
ಮನುಜನಾಗಿ ಸೋಳಾ ಸಾಸಿರ ಗೋಪೇರ
ಮನಸಿಗೆ ಒಪ್ಪಿದ ಮನುಜನಾಗಿ ೫

**ಜತೆ**

ಆವಾಗ ಬಿಡದಿಲ್ಲಿ ಆಡುವವನ ಕಂಡೆ
ದೇವೇಶಾ ವಿಜಯವಿಠಲರಾಯನ ಕಂಡೆ

೩

**ಜೋಗ** **ಝಂಪ**

ಈ ಪರಿಯ ಸುಲಭ ಇನ್ಯಾವ ದೇವರು ಉಂಟು
ಗೋಪಾಲಕೃಷ್ಣ ಪಂಢರೀನಾಥನಲ್ಲದೆ ಪ

ಕಾಸು ಇಲ್ಲದೇ ಪೋಗಿ ಶ್ರೀಶನಂಘ್ರಿಯ ಮೇಲೆ
ಲೇಸಾಗಿ ಹಣೆಯಿಟ್ಟು ನಮಿಸಬಹುದೋ
ಕೂಸೆಂದು ಗದ್ದ ತುಟಿ ಹಿಡಿದು ಮುದ್ದಿಡಬಹುದು
ಕೂಸಾಗಿ ಕೈ ಹಿಡಿದು ಕಾಡಿಬೇಡಲುಬಹುದೊ
ವಾಸುದೇವನ ಮೂರ್ತಿ ಅಪ್ಪಿಕೊಳ್ಳಲುಬಹುದೋ ೧

ಜಾತಿಕುಲ ಗೋತ್ರಗಳ ಆತ ನೋಡುವದಿಲ್ಲ
ಪ್ರೀತಿಯಿಂದಲಿ ಬರುವ ಭಕುತ ಜನಕೆಲ್ಲಾ
ರಾತ್ರಿ ಹಗಲೆನ್ನದೇ ಸತತ ಜನಜಾತ್ರಿಗೆ
ಮಿತ್ರನಂದದಿ ಭೆಟ್ಟಿಕೊಡುವ ವಿಠ್ಠಲರಾಯ ೨

ದುಡ್ಡಿನವ ತಿಮ್ಮಪ್ಪ ದೊಡ್ಡಗುಡ್ಡದಿ ನಿಂತ
ಕಡಲದಡದಲಿ ನಿಂತ ಮಡಿವಂತ ಕೃಷ್ಣಾ
ಬಡವರೊಡೆಯನು ನಾನು ಬೇಗ ಬನ್ನಿರಿ ಎಂದು
ನಡದಮೇಲೆ ಕೈಯಿಟ್ಟು ನಿಂತ ಭೂಪತಿ ವಿಠಲ ೩

೪

ಎಂದು ಕಾಂಬೆನು ಪಾಂಡುರಂಗ ಮೂರುತಿಯಾ
ಇಂದುಭಾಗನಿವಾಸ ನರನ ಸಾರಥಿಯ ಪ

ಅರುಣಾಬ್ಜೋಪಮ ಚಾರು ಚರಣಾಂಗುಲಿ ನಖರ
ತರುಣೇಂದುಚ್ಛವಿ ತಿರಸ್ಕರಿಸುವ ಪ್ರಖರ
ಕಿರುಗೆಜ್ಜೆ ಕಡಗ ನೂಪುರ ಪೆಂಡೆ ಶಫರ
ತೆರಜಾನು ಜಂಘೆ ಭಾಸುರ ರತ್ನ ಮುಕುರ ೧

ರಂಭಾ ಪೋಲುವ ಊರು ಪೊಂಬಣ್ಣಾಂಬರವ
ಕುಂಭೀಮಸ್ತಕದೊಲ್ ನಿತಂಬದಿ ಪೊಳೆವ
ಕಂಬುಮೇಖಳಕಂಜ ಗಂಭೀರ ನಾಬೀ
ಅಂಬುಧಿಶಾಯಿ ವಿಧಿ ಶಂಭು ಪೂಜಿತನ ೨

ಲವಕುಕ್ಷಿತ್ರಿವಳೀ ಭಾರ್ಗವಿವಕ್ಷ ಉದಯ
ರವಿ ಪೋಲುವ ಕೌಸ್ತುಭ ವೈಜಯಂತಿಯ

ಸುವಿಶಾಲ ವಕ್ಷದೊಳ್ ವಿವಿಧ ಹಾರಗಳು
ನವನೀತ ಚೋರ ಶ್ರೀ ಪವಮಾನಾರ್ಚಿತನ ೩

ಪದಕ ಸರಿಗೆಯು ಜಾಂಬೂನದ ಕಂಬುಕಂಠ
ರದನೀಕರ ಬಾಹು ಚೆದುರ ಭುಜಕೀರ್ತಿ
ಬದರಸಂಕಾಶಾ ಅಂಗದ ರತ್ನ ಕಟಕಾ
ಪದುಮಾರುಣ ಕರಯುಗ್ಮ ಕಟಿಯಲ್ಲಿಟ್ಟವನಾ ೪

ವಿಧುಬಿಂಬೋಪಮ ಚೆಲ್ವವದನ ಕೆಂದುಟಿಯಾ
ಬಿಧುರಾಭಾದಶನಾಲಿಂಗದನೊಳ್ ಕಿರುನಗೆಯಾ
ಕದಪು ಕನ್ನಡಿ ನಾಸಾ ತುದಿ ಚಂಪಕಮೊನೆಯಾ
ಉದಕೇಜಾಯತ ನೇತ್ರಯದುವಂಶೋದ್ಭವನಾ ೫

ಜ್ವಲಿತಕುಂಡಲಿ ಕರ್ಣ ಸುಲಲಿತ ಭ್ರೂಯುಗಳ
ಪೊಳೆವ ಬಾಲ ಶಶಾಂಕ ತಿಲಕಾಂತಿಕ ಫಾಲ
ಅಳಿಜಾಲವೆನಿಪ ಕುಂತಳ ರತ್ನ ಚಕಿತ
ಕಲಧೌತಮಕುಟ ದಿಗ್ವಲಯ ಬೆಳಗುವನ ೬

ಶಠಕೂರ್ಮರೂಪಿಯ ಕಿಟ ಮಾನವ ಹರಿಯಾ
ವಟುಭಾರ್ಗವ ಕಾಕುಸ್ಥ ಶಠ ಕಂಸದ್ವೇಷಿಯ
ನಿಟಿಲಾಂಬಕ ಸಹಾಯ ಖಳಕಟಕಾರಿ ಭೀಮಾ
ತಟವಾಸಿ ಜಗನ್ನಾಥವಿಠಲ ಮೂರುತಿಯ

೫

ಎಂದು ಕಾಂಬೆನು ತಂದೆ ಪಂಢರಿ ವಿಠಲರಾಯನೆ
ಬಂದು ನಿನ್ನಯ ಸುಂದರಾಕೃತಿ ಎಂದು ನೋಡುವೆ ಪ

ದಾಸ ಜನರಾ ಕ್ಲೇಶ ಹರಿಪಾ ದೋಷ ದೂರಾನೇ
ದೋಷಿ ಎನ್ನನು ಪೋಷಿಸೂವುದು ಸಹಸ್ರನಾಮಾನೇ ೧

ಶ್ರೇಷ್ಠ ಭಕ್ತನು ಕೊಟ್ಟ ಇಟ್ಟಿಯ ಮೆಟ್ಟಿ ನಿಂತಾನೇ
ಪುಟ್ಟನಾಗುತ ಮೆಟ್ಟಿ ಒಲಿಯನು ಕಷ್ಟ ಕಳೆದಾನೇ ೨

ಕಾವ ಕೊಲ್ಲುವ ಬೋವ ಬಂಡಿಗೆ ಯಾವನೀತನೇ
ಓವಿ ಭಜಿಸಲು ಕಾವ ಗುರು ಗೋವಿಂದ ವಿಠಲನೇ ೩

೬

**ಧ್ರುವ**

ಎನ್ನ ಜ್ಞಾನಗಳೆಲ್ಲ ಎನ್ನ ಧ್ಯಾನಗಳೆಲ್ಲ
ಎನ್ನ ಮಾನಗಳೆಲ್ಲ ಎನ್ನ ಸ್ನಾನಗಳೆಲ್ಲ
ಎನ್ನ ಮಂತ್ರಗಳೆಲ್ಲ ಎನ್ನ ತಂತ್ರಗಳೆಲ್ಲ
ಎನ್ನ ದಾನಂಗಳೆಲ್ಲ ಎನ್ನ ಧರ್ಮಂಗಳೆಲ್ಲ
ಎನ್ನ ತೀರ್ಥಯಾತ್ರೆಯೆಲ್ಲ ಎನ್ನ ಯಾಗಂಗಳೆಲ್ಲ
ಎನ್ನ ಪುಣ್ಯಗಳೆಲ್ಲ ಎನ್ನ ಕೌಶಲ್ಯವೆಲ್ಲ
ಇನ್ನಿದರೊಳಗಿನ್ನು ಎನ್ನಿಂದಾದ ಸಾಧನ -
ವನ್ನು ಲೇಶವಾದರು ಕಣ್ಣಿಲಿ ಕಂಡುದ್ದಿಲ್ಲ
ನಿನ್ನ ಸ್ವಭಾವವಯ್ಯಾ ನಿನ್ನ ಕರುಣರಸಕಿನ್ನು
ಆನೇನೆಂಬೆ ಎನ್ನೊಡೆಯನೆ ಕೇಳು
ಎನ್ನ ಕರ್ತೃತ್ವಗಳು ಇನ್ನೂ ಮುನ್ನಾದುದಲ್ಲ
ನಿನ್ನ ಅಧೀನವಯ್ಯ ಎನ್ನ ಫಲಾಫಲವು
ಮನ್ನಣೆ ಮಾಡಿಸುವಿ ಅನ್ಯರಿಂದಲಿ? ನೀನು
ಮನ್ನಣೆಯನ್ನು ಕೊಂಬೆ ಎನ್ನಲ್ಲಿ ನಿಂತುಕೊಂಡು
ನಿನ್ನ ಭಕ್ತರವರನ್ನು ಪಾಲಿಸೊ ಬಗೆ
ನಿನ್ನವರ ಮಹಿಮೆ ನೀನೆ ಬಲ್ಲೆಯೊ ದೇವ
ನಿನ್ನನೆ ಗತಿ ಎಂದು ಬಿನ್ನಪ ಚಿತ್ತೈಸು
ಘನ್ನ ದಯಾನಿಧಿಯೆ ಪನ್ನಗಶಯನ ಗೋಪಾಲವಿಠಲರೇಯ
ನಿನ್ನನೆ ನಿನ್ನನೆ ನಿನ್ನನೆ ಮರೆಹೊಕ್ಕೆ ೧

**ಮಠ್ಯ**

ಸಿರಿ ಅಜಭವ ಸುರ ಸನಕಾದಿಗಳಿಗೆ
ಹರಿ ನೀ ಚಲಿಸದಿರೆ ಬೆರಳು ಆಡಿಸಲಿನ್ನು
ತರವಲ್ಲವೆಂತೆಂದು ವರಶ್ರುತಿಸ್ಮೃತಿಗಳು
ಪರಿಪರಿಯಲಿ ಸ್ತುತಿಸಿ ಆರಸಿ ಕೊಂಡಾಡಲು
ಅರಿಯದೆ ನಾ ವ್ಯರ್ಥ ಮರುಳು ಕರ್ತೃತ್ವಾ -
ಧರಿಸಿಕೊಂಡು ಇನ್ನು ಬರಿದೆ ದಣಿದೆನಯ್ಯ
ಪರಮಮೂರ್ಖ ನಾನು ಮರೆಹೊಕ್ಕೆ ಮರೆಹೊಕ್ಕೆ
ಮರೆದದ್ದೆಲ್ಲವ ನೀನು ಅರಿವು ಮಾಡೆನಗೀಗ
ಕರುಣಾಕರರಂಗ ಗೋಪಾಲವಿಠಲ
ಕರುಣಾಳೆಂಬುವುದು ಅರಿಯದಾದೆ ನಿನ್ನ ೨

**ರೂಪಕ**

ಕರಚರಣಂಗಳ ಚೇಷ್ಟೀಪರಿ ವ್ಯಾಪಾರವು ಎನ್ನಿಂ -
ದರಿದು ಮಾಡಿದ್ದರೆ ಅರಿಯದಲೆ ಎನ್ನ
ಬೆರಳಿಂದ ಕಣ್ಣನು ಇರಿದುಕೊಬಲ್ಲೆನೆ ಚರಣದಿಂದಲಿ ಮುಳ್ಳು
ಭರದಿಂದ ತುಳಿವೆನೆ ಮರಳಿ ಎನ್ನ ಜಿಹ್ವೆ
ಮರೆದು ನಾ ಕಡ್ವೆಳ್ವೆನೇ ಕಡಿವೆನೆ
ತೆರೆವನೆ ನೀ ಬಾಯನು ತೆರೆಸಿದಿದ್ದರೆ ನಾನು
ಹರಿಯೆ ನೀ ಕರ್ತನಿರೆ ಬರಿದೆ ನಾ ಕರ್ತೆಂದು
ಉರುಲು ಹಾಕಿಸಿಕೊಂಡು ಗುರುಗುರುಗುಟ್ಟುವೆನೆ
ಶರಣರಪಾಲಕ ಗೋಪಾಲವಿಠಲ
ಪೊರೆಯೆನ್ನ ದೊರೆಯೆ ನೀ ಪರಿಪರಿಯಿಂದಲಿ ೩

**ಝುಂಪೆ**

ಸರ್ವರಿಗೆ ಪ್ರೇರಕ ಸರ್ವಕರ್ತಭೋಕ್ತ
ಸರ್ವತ್ರದಲಿ ವ್ಯಾಪ್ತ ಸರ್ವಶಬ್ದವಾಚ್ಯ
ಸರ್ವಗುಣ ಪರಿಪೂರ್ಣ ಸರ್ವದೋಷದೂರ
ಸರ್ವಜ್ಞಾನಗಮ್ಯ ಸರ್ವಶಕ್ತಮೂರ್ತಿ
ಸರ್ವೇಶ ಚೆಲುವ ಗೋಪಾಲವಿಠಲರೇಯ
ಸರ್ವಾಂತರಿಯಾಮಿ ಸಾರ್ವಭೌಮ ನಮೋ ೪

**ತ್ರಿಪುಟ**

ಬಂದವನು ನೀನೆ ಭಕ್ತರಮನದಲ್ಲಿ
ನಿಂದವನು ನೀನೆ ಪಂಢರಪುರದಲ್ಲಿ
ತಂದೆಯಾಗಿ ಎನಗೆ ತಾಯಿಯಾಗಿ ಎನಗೆ
ಬಂಧುವಾಗಿ ಎಮಗೆ ಸಂದೇಹವಿಲ್ಲದೆ
ಹಿಂದೆ ಮುಂದೆ ಏಕಾಗಿ ಒಂದೆ ಪರಿಯಲ್ಲಿನ್ನು ಸಕಲಕಾಲಲಿನ್ನು
ಚೆಂದದಿ ಪಾಲಿಸಲಾನಂದದಿ ಎನ್ನಮನ-
ಮಂದಿರದಿ ಪೊಳೆದು ನಿಂದು ಆಡುವ ರಂಗ
ಒಂದೆ ದೈವವೆ ನಮ್ಮ ಗೋಪಾಲವಿಠಲ
ಕಂದನ ತಾಯಿ ತಾಯಿ ಸಲಹಿದಂದದಿ ಸಲಹುವೆ ೫

**ಅಟ್ಟ**

ಬೇಬ್ಯಾಡೆನ್ನಬಾರದೆ ನಾಡವಿಷಯಕ್ಕೆ ಮನ
ಓಡಿದರೆ ನೀನು ಓಡುತಲಿಹರೆ
ಮಾಡಿಕೊಂಡ ಪತಿ ನೋಡುತಲಿರಲು ಸತಿ

ಈಡ ಒಬ್ಬನ ಬೇರೆ ನೋಡಿಕೊಂಡರೆ ಇನ್ನು
ಮಾಡುವನೊ ಕೃಪೆ ಕೇಡಾಗೋದಲ್ಲದೆ
ನಾಡದೈವದ ಗಂಡ ಗೋಪಾಲವಿಠಲ
ಖೋಡಿ ವಿಷಯಕ್ಕೆ ಮನ ಓಡಾಡದಂತೆ ಮಾಡೊ ೬

**ಆದಿ**

ಗರತಿಯ ಲಕ್ಷಣ ದೊರಕಿಸು ಎನಗೆ
ಗರಳ ಎನಿಸು ಪರ ಅರಸಿಯಲಿ
ಕುರುಹ ತಿಳುಹಿಸು ನಿನ್ನ ತತ್ವಗಳಲ್ಲಿ
ಮರುಳು ಬಿಡಿಸು ಮನಮತಿಗಳಲ್ಲಿ
ತಿರುಗಿಸೆನ್ನನು ತೀರ್ಥಯಾತ್ರೆಗಳಲ್ಲಿ
ಹರಟೆಮಾಡಿಸು ಹರಿವಾರ್ತೆಗಳಲ್ಲಿ
ಕರವ ಮುಗಿಸು ನಿನ್ನ ರೂಪಂಗಳಲ್ಲಿ
ಕರವವಿಡಿಸು ನಿನ್ನ ಶರಣರಲ್ಲಿ
ಪರಮ ದಯಾಳು ಗೋಪಾಲವಿಠಲರೇಯ
ಕರೆವ ವಚನಗಳಲ್ಲಿ ಅರಿವಂತೆ ಮಾಡೊ ನಿನ್ನ ೭

**ಜತೆ**

ನಾನಾಡುವ ಮಾತೆಲ್ಲ ನಿನ್ನದೆ ಅಯ್ಯಾ
ನಾನರಿಯೆ ನೀನೆ ಗತಿ ಗೋಪಾಲವಿಠಲ

೭

ಏಳು ಪಂಢರಿವಾಸ ಏಳು ಶ್ರೀ ದೇವೇಶ
ಏಳು ಮುಕ್ತ ಗಿರೀಶ ಏಳು ಹೃದೇಶ ಪ

ಏಳು ಮೂಲೋಕದೀಶ ಏಳು ಹೃತ್ಪದವಾಸ
ಏಳು ಏಳಯ್ಯ ಶ್ರೀಶಾ ಏಳು ಸರ್ವೇಶಾ ॥ ಅ.ಪ ॥

ಗಂಗಾ ಭಾಗೀರಥಿ ತುಂಗಭದ್ರಾ ಯಮುನ
ಸಂಗಮ ತ್ರೀವೇಣಿ ಸರಸ್ವತಿ ಸರಯೂ
ಮಂಗಳೆ ಚಂದ್ರಭಾಗೆಯೋಳ್ ಕೂಡಿ ಸೇವಿಸೆ
ರಂಗಾ ಬಾಗಿಲೋಳ್ ನಿಂತು ಕಾದಿಹಳಯ್ಯ ೧

ಪುನಗು ಜವಾಜಿ ಕಸ್ತೂರಿ ಬೆರಸಿದ ಜಲ
ನಿನಗೆ ತೈಲವನೆತ್ತಿ ಎರೆವೆನೆಂದು

ಕನಕ ರತ್ನದಿ ಭೂಷಿತರಾದ ದೇವ
ಕನ್ನಿಕೆಯರು ಕಾದಿಹರಯ್ಯ ಲಕುಮಿಪತಿ ೨

ಪಂಚಬಾಣನ ಪಿತನೆ ಪಂಚಾಮೃತ ತಂದು
ಪಂಚಕನ್ನೆಯರು ಎರೆವೆನೆಂದು
ಮಿಂಚು ಕೋಟಿಯತೇಜಾಭರಣ ಪೀತಾಂಬರ
ಪಂಚ ರೂಪಗೆ ಉಡಿಸಿ ಶೃಂಗರಾಗೈಯುವರು ೩

ಕಸ್ತೂರಿ ತಿಲಕವು ಕನಕಾಂಬರದ ಶಾಲು
ಸುತ್ತಿದ ಮುಂಡಾಸು ಶೃಂಗರಿಸಿ
ಮತ್ತೆ ಕಾಸಿದ ಹಾಲು ಹಣ್ಣು ಸಕ್ಕರೆ ಕೊಟ್ಟು
ಎತ್ತಿ ಬೆಳಗುವ ಮುತ್ತಿನಾರತಿ ವಿಠಲ ೪

ಪಾಪರಹಿತ ಏಳು ಪಾವನ್ನ ರೂಪ ಏಳು
ಗೋಪಾಲಕೃಷ್ಣ ವಿಠಲ ಹರಿ ಏಳು
ಶ್ರೀಪದ್ಮಭವಮುಖರಾಪಾರ ಮುನಿಗಳು
ರೂಪ ನೋಡಲು ಇಲ್ಲಿ ಕಾದಿಹರೇಳಯ್ಯ ೫

## ಹರಿದಾಸರ ಪಾಂಡುರಂಗ ವಿಠಲ (೨)

೮

ಕಂಡು ಎಂದಿಗೆ ಧನ್ಯಳಾಗುವೆ ನಾನು
ಪಂಢರೀಶನ ಪಾದ ಪುಂಡರೀಕವನೂ ಪ

ಪುಂಡರೀಕನಿಗೊಲಿದು ಒಂದು ಇಟ್ಟಿಗೆ ಮೇಲೆ
ಪಾಂಡವರ ಪ್ರಿಯ ಬಂಧು ನೆಲಸಿದಂಥಾ
ಪಂಢರೀಕ್ಷೇತ್ರದಲಿ ಚಂದ್ರಭಾಗದಿ ಮಿಂದು
ಮಂಡೆ ಬಾಗುತ ಹರಿಗೆ ಹಿಂಡಘವ ಕಳೆದೂ ೧

ಕೋಮಲದ ಚರಣಕಭಿನಮಿಸಿ ಕರಯುಗದಿಂದ
ಶ್ಯಾಮವರ್ಣನ ಪಾದಕಮಲ ಮುಟ್ಟೆ
ಆ ಮಹಾ ಆನಂದ ಅನುಭವಿಪ ಭಾಗ್ಯವನು
ಶ್ರೀ ಮಹಾಲಕುಮಿಪತಿ ಎಂದು ಕಾಂಬುವೆನೋ ೨

ಅಪಾರಭಕ್ತರಿಗೆ ವಲಿದ ವಿಠಲನ ಮೂರ್ತಿ
ಆಪಾದ ಮೌಳಿ ಈಕ್ಷಿಸುತ ಹೃದಯದಲಿ

ಇಷ್ಟಮೂರ್ತಿಯ ತಂದು ಗುರುಬಿಂಬ ಸಹಿತದಲಿ
ಗೋಪಾಲಕೃಷ್ಣವಿಠಲನ ಎಂದು ಕಾಂಬೆ ೩

೯

ಕಂಡೆ ಕನಸಿನಲಿ ನಾ ಪಾಂಡುರಂಗನ
ಮಂಡೆ ಇಡುತಲಿ ಪುಂಡಲೀಕ ಚರಣದಲೀ ಪ

ಪಂಢರೀಕ್ಷೇತ್ರದಲಿ ವಿಠ್ಠಲನ ದರ್ಶನಕೆ
ದಂಡೆ ಹಾರ ಕೊಂಡುಪೋಗುತಿರಲೂ
ಹಿಂಡು ಜನ ಊಟಕೆಡೆ ಅಣಿಮಾಡುತಿರಲಲ್ಲಿ
ಕಂಡು ಸಾಗುತ ಮುಂದೆ ದ್ವಾರದೆಡೆ ಬಂದು ೧

ನಂತರದಿ ದ್ವಾರಗಳು ಮುಚ್ಚಿರಲು ಕಂಡು ಬಹು
ಚಿಂತಿಸಲು ಅಲ್ಲೊಬ್ಬ ಬರಲು ಅವಗೇ
ಅಂತರಂಗವನುಸುರೆ ಕದ ತೆರೆದು ನೋಡೆನಲು
ಸಂತೋಷದಿಂದೆರಡು ದ್ವಾರಗಳ ತೆರೆದೇ ೨

ರತಿಪತಿಯ ಬಿಂಬ ಶ್ರೀ ಪ್ರದ್ಯುಮ್ನವಿಠ್ಠಲನ
ಮೂರ್ತಿಯನೆ ಕಂಡು ಹಾರವನ್ಹಾಕಿ ನಮಿಸಿ
ಅತಿ ಪ್ರೀತಿ ಭಕ್ತಿಯಲಿ ಅಪ್ಪಿ ನಾ ಮೈಮರತೆ
ಸ್ತುತಿಸುತಲಿ ಗೋಪಾಲಕೃಷ್ಣ ವಿಠ್ಠಲನನಾ ೩

೧೦

ಕಂಡೆ ಕಂಡೆ ಪಂಢರೀಶನ ಕಂಡೆ ಕಂಡೆ ಪ

ಕಂಡೆ ಪಂಢರೀಪುರದಿ ಮೆರೆವನ
ಕಂಡೆ ಭಕ್ತರ ಕಾವ ಬಿರುದನ
ಕಂಡೆ ಮಂಡೆಯ ಚರಣದಲ್ಲಿಡೆ
ಹಿಂಡು ಅಘಗಳ ತರಿವ ವಿಠಲನ ‖ ಅ.ಪ ‖.

ಕಟಿಯಲೀ ಕರವಿಟ್ಟು ಮೆರೆವನ
ಹಟದಿ ವಗದಿಟ್ಟಿಗೆಲಿ ನಿಂತನ
ಸ್ಪಟಿಕ ಹಾಟಕ ಕಟಕ ಮಕುಟನ
ವಟದೆಲೆ ಮೇಲೊರಗಿದಂಥನ
ಕುಟಿಲ ಕುಂತಳ ಫಣಿಯ ತಿಲಕನ
ತೃಟಿಯು ತೆರವಿಲ್ಲದಲೆ ನಮಿತನ

ವಟುವೆನಿಸಿ ಬಲಿರಾಯಗೊಲಿದನ
ನಟನೆಗೆಯ್ಯುವ ದಿವ್ಯರೂಪನ ೧

ಚಂದ್ರಭಾಗಾ ತೀರದಲ್ಲಿ ಹನ
ಚಂದ್ರ ಕೋಟಿಸ್ಮರನ ರೂಪನ
ಇಂದಿರೆಯ ಸಹಿತದಲಿ ನೆಲಸುತ
ಚಂದ್ರದ್ವಾರಗಳಿಂದಲೆಸವನ
ಬಂದ ಭಕ್ತರ ಭೇದ ನೋಡದೆ
ಸಂದರುಶನಾನಂದವೀವನ
ಚಂದ್ರಮಂಡಲ ಮಧ್ಯವರ್ತಿಯ
ಚಂದ್ರಕುಲಕೆ ತಾ ಚಂದ್ರನೆನಿಪನ ೨

ವಿಠ್ಠಲನ ಪುರದಲ್ಲಿ ಹರಿಯುವ
ಶ್ರೇಷ್ಠ ಇಂದುಭಾಗೆಯಲಿ ಮಿಂದು
ಮುಟ್ಟಿ ವಿಠಲನ ಚರಣಕಮಲವ
ಬಿಟ್ಟು ಮನದ್ದಂಬಲಗಳೆಲ್ಲವ
ವಿಠ್ಠಲಾ ನೀನೆ ಗತಿ ಕೈ
ಗೊಟ್ಟು ಕಾಯೆಂದೆನುತ ಸ್ತುತಿಸಿ
ಕಷ್ಟಹರ ಗೋಪಾಲಕೃಷ್ಣ
ವಿಠ್ಠಲನ ಚರಣಾಂಬುಜಗಳನು ೩

೧೧

ಕಂಡು ಧನ್ಯಳಾದೆ ನಾ
ಪಾಂಡುರಂಗವಿಠಲನಾ ಪ

ಕಂಡು ಧನ್ಯಳಾದೆ ಹರಿಯ
ಪುಂಡರೀಕ ಪದದಿ ಎನ್ನ
ಮಂಡೆ ಇಟ್ಟು ವಂದಿಸುತಲಿ
ಪುಂಡರೀಕ ವರದ ನಾ ॥ ಅ.ಪ ॥.

ದೂರದಿಂದ ಬಂದು ಹರಿಯ
ಸೇರಿ ವಂದಿಸುತಲಿ ಈಗ
ಹಾರ ಹಾಕಿ ನಮಿಸಿ ಮನೋ
ಹಾರ ನೋಡಿ ದಣಿದೆನಿಂದು ೧

ಗುರುಗಳಂತರ್ಯಾಮಿ ಹರಿಯ
ಇರಿಸಿ ಎನ್ನ ಬಿಂಬ ಸಹಿತ

ಸ್ಮರಿಸಿ ಚಿಂತಿಸಿ ವಿಠಲನಲ್ಲಿ
ಕರುಣಮೂರ್ತಿ ಪಾಂಡುರಂಗನ ೨

ಗುರುಪುರಂದರ ಸ್ತಂಭ ಕಂಡೆ
ವರದ ಚಂದ್ರಭಾಗ ತೀರದಿ
ಚರಣ ಇಟ್ಟಿಗೆಯಲಿ ಇಟ್ಟು
ಸಿರಿ ಗೋಪಾಲಕೃಷ್ಣ ವಿಠಲನ ೩

ವನ ಮಧ್ವಮಂದಿರ ಮನಸಿಜಪಿತ ಸರ್ವ
ಮನನಿಯಾಮಕ ಹರಿ ಮನದಲ್ಲಿ ನೀ ನಿಲ್ಲೊ ೪

ಶ್ರೀಪದ್ಮಭವನುತ ನಾ ಪಾಮರಾಳಿಹೆ
ಗೋಪಾಲಕೃಷ್ಣವಿಠಲ ಶ್ರೀಪತಿಯೆ
ನೀ ಪಾರು ಮಾಡದೆ ಕಾಪಾಡುವವಯ್ರೊ
ಗೋಪಕುವರ ಪೇಲೋ ತಾಪ ಬಿಡಿಸಿ ಸಲಹೋ ೫

೧೨

ಕಂಡೆ ಪಂಢರಿರಾಯನ ತನ್ನನು
ಕೊಂಡಾಡುವರ ಪ್ರಿಯನ ವಿಠ್ಠಲನ ಪ

ಸಮಚರಣಭುಜನ ನಿಗಮಾ
ಗಮತತಿಗೋಚರನಾ
ಅಮಿತ ಪರಾಕ್ರಮನ ರುಕ್ಮಿಣಿ
ರಮಣ ರವಿಕ್ಷಣನಾ ವಿಠಲನ ೧

ಕಾಮಿತಾರ್ಥಪ್ರದನ ಶ್ರೀ ತುಲಸೀ
ಧಾಮ ವಿಭೂಷಿತನ
ಸಾಮಜ ಪತಿ ಪಾಲನ ತ್ರಿಭುವನ
ಸ್ವಾಮಿ ಚಿತ್ಸುಖಮಯನ ವಿಠ್ಠಲನ ೨

ಗೋಕುಲ ಪೋಷಕನ ಮುನಿ ಪುಂಡ
ರೀಕಗೋಲಿದು ಬಂದನ
ಲೋಕವಿಲಕ್ಷಣನ ಪ್ರಣತರ
ಶೋಕವಿನಾಶಕನ ವಿಠ್ಠಲನ ೩

ಚಂದ್ರಭಾಗವಾಸನಾ ವಿಧಿ ವಿಹ
ಗೇಂದ್ರಮುಖಾರ್ಚಿತನ

ಇಂದ್ರೋತ್ಪಲನಿಭನ ಗುಣಗಣ
ಸಾಂದ್ರ ಸರ್ವೋತ್ತಮನ ವಿಠ್ಠಲನ ೪

ಶ್ವೇತವಾಹನ ಸಖನ ಸತಿಗೆ ಪಾರಿ
ಜಾತನ ತಂದವನಾ
ವೀತ ಶೋಕ ಭಯನಾ ಶ್ರೀ ಜಗ
ನ್ನಾಥ ವಿಠಲರೇಯನಾ ೫

೧೩

ಕಂಡೆ ಪಂಢರಿರಾಯನ ಸಿರಮನಃ ಪ್ರಿಯನಾ ಪ

ಚಂಡವಿಕ್ರಮ ಕರದಂಡ ಮುನಿಪಗೊಲಿ
ದಂಡಜಾಧಿಪ ಪ್ರಕಾಂಡ ಸುಪೀಠನ ‖ ಅ.ಪ ‖.

ಮಣಿಮಯ ಮುಕುಟ ಮಧುಪನವಿರಪ್ಯರೇ
ಪಣೆಯೊಳಿಟ್ಟ ಕಸ್ತೂರಿ ತಿಲಕ
ವನರುಹ ಉಪಮ ಲೋಚನಯುಗ ಚಂಪಕ
ಸುನಾಸವಕುಂಡಲ ವಿಕಾಸವ ಕದಪಿನ ವಿಲಾಸವ
ಮೊಗದ ಮಂದಹಾಸವ ೧

ಕುಂದಕೋರಕ ದಶನಾವಳಿಯ ಬಿಂಬ
ದಂದದಿ ಪೊಳೆವ ಅಧರಕಳೆಯ
ಕಂಧರ ತ್ರಿವಳಿ ಪುರಂದರ
ಇಭಕರ ಪೋಲುವ ಭುಜಯುಗ ವಿಶಾಲವಾ
ಕರತಳರಸಾಲವ ನಖರ ಮಲ್ಲಿಕಾಸವ ೨

ಅತಿವಿಸ್ತೃತ ವಕ್ಷಸ್ಥಳವಾ ಸಿರಿ
ಸತಿಸದನಾರ್ಕನಂದದಿ ಪೊಳೆವಾ
ರತುನ ಕೌಸ್ತುಭ ದೀಧಿತಿ ವಿಲಸಿತ
ವೈಜಯಂತಿಯ ಉದರರೋಮ ಪಂಕ್ತಿಯಾ
ಕುಕ್ಷಿತ್ರಿವಳಿ ಕಾಂತಿಯಾ ನಾಭಿವಲ್ಮೀಕದಂತಿಹ ೩

ಮುಂಬಿಸಿಲಿನಂತೆ ಕನಕ ಚೇಲ ಸುನಿ
ತಂಬದಿ ಪೊಳೆವ ಗೋಲಿಯ ಚೇಲ
ಕಂಬು ಕೋಕನವಿಡಂಬ ಮೇಖಲ ಕದಂಬವ
ಊರು ಕದಳೀ ಜಾನುಗಳಿಂದುಬಿಂಬನಾ
ಅ ಚರಿಪ ವಿಡಂಬವ ೪

ಮಾತಂಗಕರದ ಜಂಘೆಗಳ ಗುಲ್ಫ
ಜಾತಿಮಣಿಕಾಂಗುಲಿ ಸಂಘಗಳ
ಜ್ಯೋತಿ ಬೆಳಗೆ ಜಗನ್ನಾಥ ವಿಠಲ
ಸಂಘ್ರೀ ಪುಷ್ಕರ ಉದಿತ ಶತ ಭಾಸ್ಕರ
ಗಭಸ್ತಿ ತಿರಸ್ಕರ ಸುಜನರಿಗೆ ಶ್ರೇಯಸ್ಕರ ೫

೧೪

**ತೋಡಿ** **ಛಾಪು**

ಕಟಿಯಲ್ಲಿ ಕರವಿಟ್ಟನು ಜಗದೀಶನು ಪ

ರಾಜಸೂಯಯಾಗದಲ್ಲಿ ರಾಜೇಶ್ವರ
ರಾಜರು ಮೊದಲಾದ ಸುರರೆಲ್ಲರು
ಭೋಜನವನೆ ಮಾಡಿದೆಂಜಲು ಮೊದಲಾದ್ದು
ರಾಜೀವಾಕ್ಷನು ಎತ್ತಿದಾಯಾಸದಿಂದಲೊ ೧

ಗೊಲ್ಲ ಬಾಲಕರೊಡಗೂಡಿ ತಾ ಬಂದು
ಗೊಲ್ಲತೇರ ಮನೆ ಪೊಕ್ಕು ಬೆಣ್ಣೆಯ ತಿಂದು
ಬಲ್ಲಿದ ತೃಣಾವರ್ತ ಮೊದಲಾದಸುರರನ್ನು
ಎಲ್ಲರನ್ನು ಕೊಂದ ಆಯಾಸದಿಂದಲೊ ೨

ಧಾರಿಣಿಯನು ತಂದ ದನುಜ ಹಿರಣ್ಯಕನ
ಕೋರೆದಾಡೆಯಿಂದ ಸೀಳಿದರಿಂದಲೊ
ವಾರಿಜಮುಖಿ ಸರ್ವಕಾಲದಲಿ ನಿಂತು
ಸೇರಿ ಸುರತ ಮಾಡಿದಾಯಾಸದಿಂದಲೊ ೩

ಸುರಪತನಯಗೆ ಸಾರಥ್ಯವನೆ ಮಾಡಿ
ಭರದಿಂದ ಚಕ್ರ ಪಿಡಿದರಿಂದಲೊ
ಪರಿಪರಿ ವಿಧದಿಂದ ಕುದುರೆಗಳನೆ ತೊಳೆದು
ಪರಿಪರಿ ಕೆಲಸದ ಆಯಾಸದಿಂದಲೊ ೪

ಮುದದಿಂದ ವ್ರಜದ ಹದಿನಾರು ಸಾವಿರ
ವನಿತೆಯರಾಳಿದ ಮದದಿಂದಲೊ
ಮದಗಜಗಮನೆರ ಮಧುರಾಂತಕನ
ಒದಗಿ ಮಾವನ ಕೊಂದ ಆಯಾಸದಿಂದಲೊ ೫

ಮಮತೆಯಿಂದಲಿ ಭಕ್ತಜನರು ನಿಮ್ಮ ಚರಣ
ಕಮಲಯುಗವನು ಸ್ತುತಿಸುತಿರಲು
ಮಮತೆಯಿಂದಲಿ ಬಂದು ಅಭಯಗಳನೆ ಕೊಟ್ಟು
ಕಮಲನಾಭ ಶ್ರೀಪುರಂದರವಿಠಲ ೬

೧೫

**ತಿಲಂಗ ಝಂಪತಾಳ**

ಕರಮುಗಿದು ಪ್ರಾರ್ಥಿಪೆವು ದಯಮಾಡಿಸಯ್ಯಾ
ಸಿರಿರಮಣಿ ಪರಿವಾರ ಸಹಿತಾಗಿ ಸಂಭ್ರಮದಿಂದ ಪಲ್ಲವಿ

ಹರಿಯೆ ಸರ್ವೋತ್ತಮ ಎಂದು ಭೂಮಂಡಲದಿ
ಡಂಗುರ ಹೊಡಿಸಿ ಅವತಾರ ಮುಗಿಸಿ
ನಿನ್ನ ಸನ್ನಿಧಿಯಲ್ಲಿ ಸ್ತಂಭದಲ್ಲಿ ಇರುತಿರುವ
ಶ್ರೀ ಪುರಂದರದಾಸರ ದಾಸರೈ ನಾವು ೧

ದಾಸರಾಯರ ಪುಣ್ಯತಿಥಿಯ ಆರಾಧನೆಯು
ನಿನ್ನ ಪ್ರೇರಣೆಯಿಂದ ನಿನ್ನ ಪ್ರೀತ್ಯರ್ಥ
ನಿನ್ನ ಸನ್ನಿದಿಯಲ್ಲಿ ಆಚರಿಸಬೇಕೆಂದು
ಉತ್ಸಾಹದಿಂದ ಪ್ರತಿವರುಷ ಬರುತಿಹೆವೈಯ್ಯಾ ೨

ಮಧ್ವಮತ ಸಿದ್ದಾಂತ ಪದ್ದತಿಗೆ ಅನುಸರಿಸಿ
ಶುದ್ಧ ತತ್ವಜ್ಞಾನ ಮರ್ಮವರಿತು
ಶ್ರದ್ಧೆಯಿಂದಲಿ ಸರ್ವಕಾರ್ಯಗಳು ನಡೆಯುವವು
ಮುದ್ದು ಭೂಪತಿ ವಿಠ್ಠಲ ಶ್ರೀ ಪಾಂಡುರಂಗಾ ೩

೧೬

ಕರುಣ ಬಾರದೆ ವಿಠ್ಠಲಾ ಶ್ರೀ ಪಾಂಡುರಂಗ ಪ

ಶರಣಳಲ್ಲವೆ ನಿನ್ನ ಚರಣ
ಸ್ಮರಣೆ ಮಾಡುತ ಪೊರೆ ಎಂದೆನ್ನುತ
ವರಲುವಾ ಧ್ವನಿ ಕೇಳದೇ ಈ
ಪರಿಯ ಗರ್ವವಿದೆನೊ ಹರಿಯೆ ॥ ಅ.ಪ ॥

ದೂರದಿಂದಲಿ ಬಂದೆನೋ ಇಲ್ಲಿಂದ ಮುಂದೆ
ದಾರಿ ಕಾಣದೆ ನಿಂದೆನೋ
ದ್ವಾರಕಾಪತಿ ನೀನಲ್ಲದಿ

ನ್ನಾರು ಕಾಯುವರೀಗ ಪೇಳು
ಸಾರಿದೆನು ನಿನ್ನಂಘ್ರಿಕಮಲವ
ಚಾರು ಚರಿತನೆ ಮಾರನಯ್ಯ ೧

ತನುಸುಖ ಬೇಡಲಿಲ್ಲಾ ನಿನ್ನ ನಾನು
ಘನವಾಗಿ ಕಾಡಲಿಲ್ಲ
ಮನದ ಹಂಬಲ ನೀನೆ ಬಲ್ಲೆಯೊ
ಮನಕೆ ತಾರದೆ ಸುಮ್ಮನಿಪ್ಪೆಯೋ
ಎನಗೆ ಪ್ರೇರಕ ನೀನೆ ಅಲ್ಲವೆ
ನಿನಗೆ ದಾಸಳು ನಾನು ಅಲ್ಲವೆ ೨

ಕರೆಕರೆ ಪಡಿಸುವುದು ಸರಿಯಲ್ಲ ನಿನಗೆ
ಕರಿವರದ ಕೇಳು ಇದೂ
ನರಸಖನೆ ದಯದಿಂದ ನಿನ್ನ
ಚರಣ ದರುಶನವಿತ್ತೆ ಒಲಿದು
ಕರಪಿಡಿದು ಸಲಹೆಂದರೀಗ
ತೆರೆದು ನೋಡದೆ ನೇತ್ರವಿರುವರೆ ೩

ಜ್ಞಾನಿ ಹೃತ್ಕಮಲವಾಸ ಶ್ರೀ ರುಕ್ಮಿಣೀಶ
ಭಾನುಕೋಟಿ ಪ್ರಕಾಶ
ನೀನೆ ಗತಿ ಇನ್ನಿಲ್ಲ ಅನ್ಯರು
ಸಾನುರಾಗದಿ ಸಲಹೊ ಎನ್ನಲು
ಆನನದಿ ಈಕ್ಷಿಸದೆ ನಿಂತರೆ
ಮಾನ ಉಳಿವುದೆ ಭಕ್ತವತ್ಸಲ ೪

ಇಟ್ಟಿಗೆ ಕೊಟ್ಟವನೊ ಕೊಟ್ಟನಿನ್ನೇನು
ಅಷ್ಟು ಭಾಗ್ಯವನೂ
ಕೊಟ್ಟೆ ಬಡ ಬ್ರಾಹ್ಮಣನ ಅವಲಿಗೆ
ದೃಷ್ಟಿ ಬಿದ್ದರೆ ಕಷ್ಟ ಉಂಟೆ
ಕೊಟ್ಟು ಅಭಯ ಪೊರೆ ಗೋಪಾಲ -
ಕೃಷ್ಣ ವಿಠಲ ಮನದಿ ತೋರೋ ೫

೧೭

**ಪಂತುವರಾಳಿ ಆದಿ**

ಕೂಸಿನ ಕಂಡಿರಾ ಗೋಪಾಲಕೃಷ್ಣನ ಕಂಡಿರಾ ಪ

ಅಂದಿಗೆ ಅರಳೆಲೆ ಇಟ್ಟಿತ್ತು ಕೂಸು
ಮುಂಗೈಯ ಬಾಪುರಿ ಇಟ್ಟಿತ್ತು ಕೂಸು
ಬಿಂದಲಿ ಸರಪಳಿ ಹಾಕಿತ್ತು ಕೂಸು
ಅಂಗಳದೊಳಗಿಂದ ಹೋಗ್ಯದೆ ಕೂಸು ೧

ಕಾಲಿಗೆ ಕಿರುಗೆಜ್ಜೆ ಕಟ್ಟಿತ್ತು ಕೂಸು
ನೇವಳ ಪದಕವ ಹಾಕಿತ್ತು ಕೂಸು
ಜಾಲದ ಅಂಗಿಯ ತೊಟ್ಟಿತ್ತು ಕೂಸು
ಬಾಗಿಲ ಒಳಗಿದ್ದು ಹೋಗ್ಯದೆ ಕೂಸು ೨

ಹುಲಿಯುಗುರಿನ ಸರ ಹಾಕಿತ್ತು ಕೂಸು
ಬೆರಳಲಿ ಉಂಗುರ ಇಟ್ಟಿತ್ತು ಕೂಸು
ಕಿವಿಯೊಳು ಚೌಕಳಿ ಇಟ್ಟಿತ್ತು ಕೂಸು
ಕುಳಿತಿದ್ದ ಠಾವಿಲಿ ಕುಳಿತಿಲ್ಲ ಕೂಸು ೩

ನೀಲಮೇಘವ ಪೋಲುವ ಕೂಸು
ನೀಲದ ಬಾವುಲಿ ಇಟ್ಟಿತ್ತು ಕೂಸು
ನೀರಿನ ತೀರದಿ ಕುಳಿತಿತ್ತು ಕೂಸು
ನೀರಿನ ದಡದಿಂದ್ಯೋಗ್ಯದೆ ಕೂಸು ೪

ಪಂಢರಪುರದಲ್ಲಿ ನೆಲಸಿತ್ತು ಕೂಸು
ಪಾಂಡವರೈವರ ಸಲಹಿತು ಕೂಸು
ಅಂಡದೊಳಗೆ ಹರಿದಾಡುವ ಕೂಸು ಪ್ರ
ಚಂಡ ಪುರಂದರವಿಠಲ ಕೂಸು ೫

೧೮

**ಯಮನ ಭಜನಿಠೇಕಾ**

ಗಿರಿಧರ ಪರಮ ಮಂಗಲಾ ಕರುಣಾನಿಧಿ
ಶರಣಾಗತ ಭಕ್ತವತ್ಸಲಾ ಪ

ತಂದೆ ತಾಯಿ ಸೇವಾಸಕ್ತ ಪುಂಡಲೀಕನ ಭಕ್ತಿಗೊಲಿದು
ಭಕ್ತಕೊಟ್ಟ ಇಟ್ಟಿಗೆಯ ಮೇಲೆ
ಟೊಂಕದ ಮೇಲೆ ಕೈಇಟ್ಟು ನಿಂತೆ ೧

ಬೆಟ್ಟದೊಳಗೆ ಹುತ್ತಿನಲ್ಲಿ ಪೆಟ್ಟುತಿಂದು ಪದ್ಮಾವತಿಯ
ಎಷ್ಟು ಸಾಲ ಮಾಡಿಕಡೆಗೆ ಪಟ್ಟದರಸಿ ಮಾಡಿಕೊಂಡೆ ೨

ಮಣ್ಣು ಹೆಂಟಿಯೊಳಗೆ ನೀನು ಪೂರ್ಣಪ್ರಜ್ಞರಿಗೆ ಒಲಿದು
ಬೆಣ್ಣೆ ಕಡಗೋಲಪಿಡಿದ ಕೃಷ್ಣ ಅನ್ನಬ್ರಹ್ಮನಾಗಿ ಮೆರೆವೆ ೩

ಅನ್ನಬ್ರಹ್ಮ ನಾದಬ್ರಹ್ಮ ಕಾಂಚಾಣದ ಬ್ರಹ್ಮ ನೀನು
ದೈನ್ಯಬಿಡಿಸಿ ಜ್ಞಾನ ಭಕ್ತಿಕೊಟ್ಟು ಕಾಪಾಡೊ ಸ್ವಾಮಿ ೪

ಆಪದ್ಬಾಂಧವ ಅನಾಥ ಬಂಧೋ ತಾಪತ್ರಯ ಬಿಡಿಸು ದೇವಾ
ಕೈಪಿಡಿದು ಉದ್ದರಿಸು ಭೂಪತಿ ವಿಠಲನಭಕ್ತರ ಕೃಷ್ಣ ೫

**ವರಾಳಿ ಧ್ರುವ**

ಜನನಿ ರುಕುಮಿಣಿ ಜನಕ ವಿಠಲಾ
ನನಚತುಷ್ಟನು ಭ್ರಾತನು
ಅನಲನೇತ್ರನು ಆತನ ಸುತ
ಅನುದಿನ ನಿಜಬಾಂಧವ
ಅನಿಲದೇವನು ಮುಖ್ಯತಗುರು
ಅನಿಮಿಷರೂ ಬೆಂಬಲಾರೆನ್ನೀ
ದನುಜ ದೈತ್ಯರು ಹತ್ತಾದವರು
ಮುನಿಯ ದಾಸಿಯರು ಮಾರಿ ಮೃತ್ಯುಗ
ಳಿನಿತು ಹರಿದಾಸರಿಗೆ ಅಯ್ಯಾ ಅಯ್ಯಾ
ಜನನಿ ರುಕುಮಿಣಿ ಅವನಿಜಾಂಡದೊಳಗೆ ಇವರಿಗೆ
ಎಣೆ ಇಲ್ಲಾ ಆವಲ್ಲಿ ಎಂಬರೂ
ಘನ ವಿಜಯವಿಠಲರೇಯನ
ನೆನವರ ಸುಕೃತವಿನ್ನೆಂತೋ ೧

**ಮಟ್ಟ**

ಕಡಲಶಯನ ನಾಮಾ ನುಡಿ ಎಂಬೋ ಖಡ್ಗಾ
ವಿಡಿದು ದುರಿತ ರಾಶಿಯಾ ತಡೆದು ತರುಬಿ ನಿಲಿಸಿ
ಕಡಿಕಡಿ ಎನುತಾಲಿ ಕಡಿದೊಟ್ಟವರಯ್ಯಾ
ಸುಡುವ ದಾವಾನಲನ ಉಡಿಯಲ್ಲಿ ಕಟ್ಟುವರು
ಪಡಿಗಾಣೆ ಹರಿಯಾ ಅಡಿಗಳ ನಂಬಿದ ದೃಢ ಭಕ್ತರಿಗಿನ್ನು
ಮೃಡನೊಬ್ಬನೆ ಬಲ್ಲ ಒಡ ಒಡನಾಡುವಾ ವಿಜಯವಿಠಲನ್ನ
ಒಡನಾಡಿಸಿಕೊಂಡ ಕಡುಗಲಿ ದಾಸರಿಗೆ ೨

**ತ್ರಿವಿಡಿ**

ಉರಿಮಾರಿ ತುತ್ತಿಗೆ ಜಡಭರತನ ಕಟ್ಟಿ
ದುರುಳಾ ಪಿಡಿದೊಯ್ಯೆ ತರಹರಿಸಲಾರದೆ
ಮರಳೆ ಉಗುಳಿತು ನೋಡಾ ಹರಿಯಾ ಮಹಿಮೆಯಂತೆ
ಕರೆದೊಯ್ಯೆ ಪುಷ್ಕರನ ಯಮನಾದೂತರು ತಂದು
ನರಕಾವೆ ಬತ್ತಿ ಪೋಯಿತು ಮತ್ತೆ ದೂರ್ವಾಸಾ
ಪರೀಕ್ಷಿತಾ ಬಳಲಿದ ತಪನ ಕುಲಜನಿಂದ
ಧರೆಯೊಳು ಕೀರ್ತಿಮಾನಿನಿ ಕೆಣಕಿ ಯಮರಾಯಾ
ಪರಾಜಿತನಾದನು ನಿಜವೆಂದು ತಿಳಿವಾದು
ಹರಿಶರಣರ ಪ್ರತಾಪಾರೂ ಬಲ್ಲರು ಬಲೂ
ಪರಿಯಲ್ಲಿ ಶೋಧಿಸಿ ನೋಡಲು ನೆಲೆ ಇಲ್ಲಾ
ಶರಣರಾಡಿದಂತೆ ಆಡುವ ಪ್ರಲ್ಹಾದ
ವರದ ವಿಜಯವಿಠಲ ಐಶ್ವರಿಯಾ ದೇವಾ ೩

**ಅಟ್ಟ**

ಹರಿದಾಸರು ಒಂದು ಚರಣವಿಡಲು ರಜ
ಹರಿಯಲು ಸುತ್ತಲು ಧರೆಯೆಲ್ಲಾ ಪಾವನ
ಪುರವೆಲ್ಲಾ ಪಾವನ್ನ ನರರೆಲ್ಲಾ ಪಾವನ್ನ
ಕೇರಿ ಪಾವನ ಹೊಲಗೇರೆಲ್ಲ ಪಾವನ
ಹರಿ ತನ್ನ ಶರಣನ್ನ ಚರಣರಜಾವನ್ನು
ಉರದಲ್ಲಿ ಧರಿಸಿದ ಶಿರಿವಾಸಾವಾದಳು
ಹರಿ ತನ್ನ ಶರಣರ ತಾನೆ - ಉದ್ಧರಿಸುವ
ಪರಮಾತ್ಮ ಪಂಢರಪುರಿ ವಿಜಯವಿಠಲಾ ೪

**ಆದಿ**

ಭಜಿಸು ಬೇಕಾದರೆ ಅಜನಪಿತನ ಪಾದಾಂ
ಬುಜವನನುದಿನಾ ಭಜಿಪಾರು ಭಜಿಪಾರು
ನಿಜವಾಗಿ ವರವ್ರಜ ಮನುಜಾರರಿದೂ
ಕುಜನ ಮತನು ಒದ್ದು ಭಜನೆಯಗೆಡಿಸುವರು
ಸುಜನರಿಗೆ ಪಾದ ರಜವಾಗಿ ಇಪ್ಪಾರು
ತ್ರಿಜಗದೊಳಗೆ ನಮ್ಮಾ ವಿಜಯವಿಠಲನ್ನಾ
ನಿಜದಾಸರು ಸದಾ ಪ್ರಜ್ಞಾವಂತಾವೆನಿಸುವರೂ ೫

**ಜತೆ**

ಸಂಬಿದವರಿಗೆ ಕಟಿ ಪ್ರಮಾಣವೆಂದು ಭ
ವಾಂಬುಧಿಯಾ ತೋರುವಾ ಪ್ರಿಯ ವಿಜಯವಿಠಲಾ ೬

# ಹರಿದಾಸರ ಪಾಂಡುರಂಗ ವಿಠಲ (೩)

೨೦

**ನಾದನಾಮಕ್ರಿಯ ಆದಿ**

ಜಯಪಾಂಡುರಂಗ ನಾ ನಿನ್ನ ಮನಕೆ ಬಾರೆನೆ ಪ

ನಾ ನಿನ್ನ ಮನಕೆ ಬಾರೆನೆ, ಬಂದರೆ ಈ ಭವದ
ಬಲೆಯೊಳು ಸಿಲುಕುವೆನೆ ಜಯ ಪಾಂಡುರಂಗ ಅ

ಕೆಟ್ಟ ಕಿರಾತಕನ ಬೆಟ್ಟದಂಥ ಪಾಪವ
ಸುಟ್ಟು, ವಾಲ್ಮೀಕಿ ಎನಿಸಿದ್ಯೊ ಜಯಪಾಂಡುರಂಗ ೧

ಅತಿಭ್ರಷ್ಟ ಅಜಾಮಿಳನ ಅಂತ್ಯ ಸಮಯದಲ್ಲಿ
ಅಂತಕನ ಬಾಧೆ ಬಿಡಿಸಿದ್ಯೊ ಜಯಪಾಂಡುರಂಗ ೨

ಅಂಬುಜನಾಭನೆ ಕುಬ್ಜೆಯ ಡೊಂಕನು ತಿದ್ದಿ
ಕುಶಲದಿಂದವಳ ಕೂಡಿದ್ಯೊ, ಜಯಪಾಂಡುರಂಗ ೩

ಪ್ರೀತಿಯಿಂದಲಿ ಶಬರಿ, ಉಂಡ ಎಂಜಲ ಮೆದ್ದು
ಮುಕುತಿ ಮಾರ್ಗವ ತೋರಿದ್ಯೊ, ಜಯಪಾಂಡುರಂಗ ೪

ಐದು ಮಂದಿಯ ಕೂಡೆ, ಸರಸವು ದ್ರೌಪದಿಗೆ
ಐದೆ ಲಜ್ಜೆಯ ಕಾಯಿದ್ಯೊ, ಜಯಪಾಂಡುರಂಗ ೫

ಗಣಿಕೆ ಗಂಡಕಿಯ ಅಗಣಿತ ಪಾಪವ ಕಳೆದು
ವೈಕುಂಠದಲ್ಲಿ ನಿಲಿಸಿದ್ಯೊ, ಜಯಪಾಂಡುರಂಗ ೬

ತೊತ್ತಿನ ಮಗನ ಮನೆಯ ಕುಡುತೆ ಪಾಲನು ಸವಿದು
ವಿದುರನ ಶ್ಲಾಘ್ಯ ಮಾಡಿದ್ಯೊ ಜಯ ಪಾಂಡುರಂಗ ೭

ಎಲ್ಲರನುದ್ಧರಿಸಿದ್ಯೋ ಪುರಂದರವಿಠಲ ನೀ
ಯಾಕೆ ಎನ್ನನು ಮರೆತ್ಯೊ ಜಯ ಪಾಂಡುರಂಗ ೮

೨೧

ಪಿಲು ಏಕ

ಜಯದೇವ ಜಯದೇವ ಜಯ ಪಂಧರಿರಾಯಾ
ಜಯ ವಿಠಲರಾಯಾ ರುಕ್ಮಿಣಿರಾಧಾರಮಣಾ
ಶುಭ ಸುಂದರ ಕಾಯಾ ಪ

ಮಾತಾಪಿತೃಗಳ ಸೇವೆಯೆ ಹರಿಸೇವೆಯೆಂದು
ಅತಿ ಭಕುತಿ ಮಾಡಿದ ಶ್ರೀ ಪುಂಡರೀಕಗೆ ಒಲಿದು
ಆತಕೊಟ್ಟಿಟ್ಟಂಗಿಯ ರತ್ನದ ಪೀಠೆಂದು
ನಿಂತಿರುವಿಯಾ ಟೊಂಕದ ಮೇಲೆ ಕೈ ಇಟ್ಟುಕೊಂಡು ೧

ಬೆಟ್ಟದ ತುದಿಯಲಿ ನಿಂತನು ಕಾಂಚಾಣಬ್ರಹ್ಮ
ಘಟ್ಟದತಳ ಶರಧಿಯ ತಟದಲ್ಲಿ ಅನ್ನ ಬ್ರಹ್ಮ
ಘಟ್ಟದ ಬೆಟ್ಟದ ಮಧ್ಯದಿ ನೀ ನಾದ ಬ್ರಹ್ಮ
ವಿಠ್ಠಲ ಉಡುಪಿಯ ಕೃಷ್ಣಾ ಬೆಟ್ಟದ ತಿಮ್ಮಪ್ಪಾ ೨

ಶ್ರಾವಣದಲಿ ಜನ್ಮೋತ್ಸವ ಮನೆ ಮನೆಯೊಳು ಮಾಡಿ
ಅಶ್ವಿನದಿ ಬ್ರಹ್ಮೋತ್ಸವ ತಿರುಪತಿಯಲಿ ನೋಡಿ
ಕಾರ್ತಿಕದಿ ಪಂಥರಪುರದ ಯಾತ್ರೆಯನು ಮಾಡಿ
ಮುಕ್ತಿಯ ಪಡೆಯಿರಿ ಭಕುತರು ಶ್ರೀಹರಿಯ ಪಾಡಿ ೩

ಪಂಥರಿಕ್ಷೇತ್ರದ ಯಾತ್ರೆಯ ಮಾಡುವದಾನಂದಾ
ಚಂದ್ರಭಾಗಾ ತೀರ್ಥದ ಸ್ನಾನವು ಆನಂದಾ
ಬಂದಿಹ ಭಕ್ತರ ತಂಡದಿ ಭಜನೆಯು ಆನಂದಾ
ಪಾಂಡುರಂಗನ ಆಲಿಂಗನ ಮಹಾದಾನಂದಾ ೪

* ಈ ಕೀರ್ತನೆಗೆ ಅಂಕಿತ ಇಲ್ಲ

೨೨

ಜೈ ಜೈ ವಿಠ್ಠಲ ಪಾಂಡುರಂಗ
ಜೈ ಹರಿ ವಿಠ್ಠಲ ಪಾಂಡುರಂಗ ೧

ಮಕರಕುಂಡಲಧರ ಪಾಂಡುರಂಗ
ರಕುಮಾಯೀಧವ ಪಾಂಡುರಂಗ ೨

ರಾಧಾರಾಧಿತ ಪಾಂಡುರಂಗ
ಸಾಧುಜನಾರ್ಚಿತ ಪಾಂಡುರಂಗ ೩

ನೀಲಶರೀರ ಪಾಂಡುರಂಗ
ಕಾಲಾಂತಕಪ್ರೀಯ ಪಾಂಡುರಂಗ ೪

ಸರಸಿಜವದನ ಪಾಂಡುರಂಗ
ಕರಿರಾಜವರದ ಪಾಂಡುರಂಗ ೫

ವನಜಲೋಚನ ಪಾಂಡುರಂಗ
ವನಜಾಸನನುತ ಪಾಂಡುರಂಗ ೬

ಕಟಿಕರದ್ವಯ ಪಾಂಡುರಂಗ
ಕುಟಿಲಾಂತಕಹರೆ ಪಾಂಡುರಂಗ ೭

ಪಾವನಚರಣ ಪಾಂಡುರಂಗ
ಭಾವಜಪಿತಹರೆ ಪಾಂಡುರಂಗ ೮

ಮಣಿಮಕುಟಧರ ಪಾಂಡುರಂಗ
ಫಣಿಪತಿಶಯನ ಪಾಂಡುರಂಗ ೯

ಸಿರಿವತ್ಸಾಂಕಿತ ಪಾಂಡುರಂಗ
ದುರಿತವಿದೂರ ಪಾಂಡುರಂಗ ೧೦

ವನಮಾಲಾಂಕಿತ ಪಾಂಡುರಂಗ
ವನಜನಾಭಹರೆ ಪಾಂಡುರಂಗ ೧೧

ಪೀತಾಂಬರಧರ ಪಾಂಡುರಂಗ
ವಾತಾತ್ಮಜನುತ ಪಾಂಡುರಂಗ ೧೨

ಖಗಪತಿವಾಹನ ಪಾಂಡುರಂಗ
ಜಗದೋದ್ಧಾರ ಪಾಂಡುರಂಗ ೧೩

ಪಂಢರಾಪುರಾಧಿಪ ಪಾಂಡುರಂಗ
ಪುಂಡರೀಕವರದ ಪಾಂಡುರಂಗ ೧೪

ಮೀನಶರೀರ ಪಾಂಡುರಂಗ
ದೀನಮಂದಾರ ಪಾಂಡುರಂಗ ೧೫

ಮಂದರಧರ ಶ್ರೀ ಪಾಂಡುರಂಗ
ಸಿಂಧುಶಯನಹರೆ ಪಾಂಡುರಂಗ ೧೬

ಸೂಕರರೂಪಕ ಪಾಂಡುರಂಗ
ಶ್ರೀಕರಸೇವಿತ ಪಾಂಡುರಂಗ ೧೭

ನರಕಂಠೀರವ ಪಾಂಡುರಂಗ
ಸರಕಾಂತಕಹರೆ ಪಾಂಡುರಂಗ ೧೮

ವಾಮನವೇಷ ಪಾಂಡುರಂಗ
ಸಾಮಗಾನಪ್ರಿಯ ಪಾಂಡುರಂಗ ೧೯

ಕ್ಷಾತ್ರಕುಲಾಂತಕ ಪಾಂಡುರಂಗ
ಧಾತ್ರೀರಮಣ ಪಾಂಡುರಂಗ ೨೦

ರಾಮಚಂದ್ರಹರೆ ಪಾಂಡುರಂಗ
ಕಾಮಿತಫಲದ ಪಾಂಡುರಂಗ ೨೧

ದೇವಕಿನಂದನ ಪಾಂಡುರಂಗ
ಪಾವನಚರಿತ ಪಾಂಡುರಂಗ ೨೨

ಬತ್ತಲೆನಿಂದಿಹ ಪಾಂಡುರಂಗ
ಉತ್ತಮದೇವನೆ ಪಾಂಡುರಂಗ ೨೩

ತೇಜಿಯನೇರಿದ ಪಾಂಡುರಂಗ
ಸೋಜಿಗಪುರುಷನೆ ಪಾಂಡುರಂಗ ೨೪

ಗಾನವಿನೋದಿ ಪಾಂಡುರಂಗ
ಭಾನುಪ್ರಕಾಶ ಪಾಂಡುರಂಗ ೨೫

ಸುರನರವಂದಿತ ಪಾಂಡುರಂಗ
ಸುರಭಿನಿವಾಸ ಪಾಂಡುರಂಗ ೨೬

ಮುಕುತಿದಾಯಕ ಪಾಂಡುರಂಗ
ಭಕುತಪೋಷಕ ಪಾಂಡುರಂಗ ೨೭

ಅಗಣಿತಗುಣಗಣ ಪಾಂಡುರಂಗ
ತ್ರಿಗುಣಾತೀತಾ ಪಾಂಡುರಂಗ ೨೮

ಚಂದ್ರಭಾಗನುತ ಪಾಂಡುರಂಗ
ಚಂದ್ರಮೌಳಿಹಿತ ಪಾಂಡುರಂಗ ೨೯

ಸುರನದಿಜನಕ ಶ್ರೀ ಪಾಂಡುರಂಗ
ಸುರಮುನಿಸನ್ನುತ ಪಾಂಡುರಂಗ ೩೦.

ಜ್ಞಾನಿಗಳರಸನೆ ಪಾಂಡುರಂಗ
ದಾನವಾಂತಕ ಪಾಂಡುರಂಗ ೩೧

ಭಾಸುರಾಂಗ ಶ್ರೀ ಪಾಂಡುರಂಗ
ಭೂಸುರವಂದಿತ ಪಾಂಡುರಂಗ ೩೨

ಅಷ್ಟಕರ್ತೃಪ್ರಿಯ ಪಾಂಡುರಂಗ
ಸೃಷ್ಟಿಗೊಡೆಯ ಶ್ರೀ ಪಾಂಡುರಂಗ ೩೩

ಸರ್ವವ್ಯಾಪಕ ಪಾಂಡುರಂಗ
ಉರ್ವಿರಮಣ ಪಾಂಡುರಂಗ ೩೪

ಕೃತಿರಮಣಹರೆ ಪಾಂಡುರಂಗ
ಶ್ರುತಿತತಿವಿನುತ ಪಾಂಡುರಂಗ ೩೫

ಜೀವನಿಯಾಮಾಕ ಪಾಂಡುರಂಗ
ಜೀವೋತ್ತಮನುತ ಪಾಂಡುರಂಗ ೩೬

ಲೋಕನಾಯಕ ಪಾಂಡುರಂಗ
ನಾಕಾಧಿಪನುತ ಪಾಂಡುರಂಗ ೩೭

ವೇದವೇದ್ಯವಿಭೋ ಪಾಂಡುರಂಗ
ಮೋದದಾಯಕ ಪಾಂಡುರಂಗ ೩೮

ಯೋಗಿರಾಜ ಶ್ರೀ ಪಾಂಡುರಂಗ
ಭಾಗವತಪ್ರಿಯ ಪಾಂಡುರಂಗ ೩೯

ಪುರಾಣಪುರುಷ ಪಾಂಡುರಂಗ
ಕರುಣಿಗಳರಸನೆ ಪಾಂಡುರಂಗ ೪೦

ಪಾಪನಾಶಕ ಪಾಂಡುರಂಗ
ತಾಪತ್ರಯಹರೆ ಪಾಂಡುರಂಗ ೪೧

ಧರ್ಮಸ್ಥಾಪಕ ಪಾಂಡುರಂಗ
ಕರ್ಮಾಧಿಪತೆ ಪಾಂಡುರಂಗ ೪೨

ಕಪಿಲವತಾರ ಪಾಂಡುರಂಗ
ಕಪಟನಾಟಕ ಪಾಂಡುರಂಗ ೪೩

ಆದಿರಹಿತಹರೆ ಪಾಂಡುರಂಗ
ಬಾದರಾಯಣ ಪಾಂಡುರಂಗ ೪೪

ನೊಂದೆನೋ ಭವದೊಳು ಪಾಂಡುರಂಗ
ಮುಂದೆ ದಾರಿಯೇನೋ ಪಾಂಡುರಂಗ ೪೫

ದಾಸಜನಪ್ರಿಯ ಪಾಂಡುರಂಗ
ಪಾಶಪರಿಹರಿಸೊ ಪಾಂಡುರಂಗ ೪೬

ಎಷ್ಟು ಮಹಿಮೆಯೋ ಪಾಂಡುರಂಗ
ಎಷ್ಟು ಪೊಗಳಲೋ ಪಾಂಡುರಂಗ ೪೭

ಕಷ್ಟ ಬಿಡಿಸೋ ನೀ ಪಾಂಡುರಂಗ
ಇಷ್ಟದಾಯಕ ಪಾಂಡುರಂಗ ೪೮

ಜನಿಸಲಾರೆನೊ ಪಾಂಡುರಂಗ
ಜನುಮ ನೀಗಿಸೊ ಪಾಂಡುರಂಗ ೪೯

ನಿನ್ನ ನಂಬಿಹನೋ ಪಾಂಡುರಂಗ
ಘನ್ನಮಹಿಮನೆ ಪಾಂಡುರಂಗ ೫೦

ನೀನ್ನ ಗತಿಯೋ ಹೇ ಪಾಂಡುರಂಗ
ದೀನವತ್ಸಲನೆ ಪಾಂಡುರಂಗ ೫೧

ಬೇಡಿವೆನನುದಿನ ಪಾಂಡುರಂಗ
ನೀಡೊ ನಿನ್ನಯ ಪಾದ ಪಾಂಡುರಂಗ ೫೨

ಜಯಮಂಗಳಹರೆ ಪಾಂಡುರಂಗ
ಶುಭಮಂಗಳಹರೆ ಪಾಂಡುರಂಗ ೫೩

ದೋಷದೂರಹರೆ ಪಾಂಡುರಂಗ
ಶ್ರೀಶಕೇಶವ ಪಾಂಡುರಂಗ ೫೪

೨೩

**ಭೈರವಿ** **ಧ್ರುವ**

ತರುಣ ಅರುಣ ಕಿರಣದಂತೆ ಪೋಲುವ ಚರಣ
ತರಣಿ ಹರಿಣಾಂಕರನು ಧರಣ ಮಾಡುವ ಚರಣ
ವರುಣ ವಾರುಣ ನಿತ್ಯಾಚರಣೆ ಮಾಡುವ ಚರಣ
ತರುಣಿ ದ್ರೌಪದಿಯ ಭಯ ನಿವಾರಣ ಮಾಡಿದ ಚರಣ
ಧರಣಿಯೊಳು ಪುಟ್ಟಿ ಸಂಚರಣ ಮಾಡಿದ ಚರಣ
ಕರುಣಾದಲ್ಲಿ ದಾಸರನಾದರಣೆ ಮಾಡಿದ ಚರಣ
ಸ್ಮರಣೆ ಮಾಡುವವರಿಗೆ ಸಾಭರಣವಾಗುವ ಚರಣ
ಕರುಣಾಗತಿ ಸತತ ಪಂಢರಿಪುರವಾಸ
ವರಣವಾಗಿ ಎನ್ನ ಹರಣ ಉಳ್ಳನಕ ನಿನ್ನ
ಚರಣ ಸಂದರುಶನ ಲೇಸಾಗಿ ಈವುತ್ತ
ಶಿರದಲ್ಲಿ ಇಡುವುದು ಶಿರಿ ರಮೆಯ ಸಿರಿ
ವರ ಕರುಣಿ ವಿಜಯವಿಠಲರೇಯ ನಿರುತ
ಪರಣ ನಿನ್ನದು ಸದಾ ಪರಿಣಾಮನೆನಿಸೊ ೧

**ಮಟ್ಟ**

ಭಕುತರಾಪತ್ತು ಪರಿಹರಿಸುವ ಚರಣ
ಲಕುಮಿಯ ಮೊಗಕ್ಕೆ ಕನ್ನಡಿಯಾದ ಚರಣ
ತ್ವಕುವೇಂದ್ರಿಗಳನ್ನು ತುಳಿದು ನಿಲ್ಲಿಪ ಚರಣ
ಮುಕುತ ವಂದಿತ ವಿಜಯವಿಠಲ ನಿನ್ನ ಚರಣ
ಸಕಲ ಪಾಪಂಗಳಿಗೆ ಪ್ರಾಯಶ್ಚಿತ್ತದ ಚರಣ
ಭಕುತರಾಪತ್ತು ಪರಿಹರಿಸುವ ಚರಣ ೨

**ತ್ರಿವಿಡಿ**

ಕಂಸನ ಉದರದಲ್ಲಿ ನಾಟ್ಯವಾಡಿದ ಚರಣ
ಹಂಸಡಿಂಬರನಾ ಭೂತಳದಿ ಒರೆಸಿದ ಚರಣ
ಹಂಸವಾಹನನ ಮನದಲ್ಲಿ ಪೊಳೆವ ಚರಣ
ಸಂಸಾರಾಂಬುಧಿಯನ್ನು ಉತ್ತರಿಸುವ ಚರಣ
ಪುಂಸಪುಂಗವ ನಮ್ಮ ವಿಜಯವಿಠಲ ಕರುಣೀ
ಅಂಶಾದಿಂದಲಿ ಜಗವ ಬೆಳಗುವ ಸಿರಿಚರಣ ೩

**ಅಟ್ಟ**

ಇದೆ ಚರಣವು ಇದೆ ಚರಣವು
ಹೃದಯದೊಳಗೆ ಬಂದು ವದನಕ್ಕೆ ಒದಗಲಿ
ಇದೆ ಚರಣ ಸಕಲ ಸದಾ ಸಂಪದವಿಗೆ ಪರಿಪರಿ

ಸಾಧನ ತೋರಲು ಇದೆ ಚರಣವು
ಸದನವಾಗಲಿ ಎನಗೆ
ಅಧಿಕ ದೈವವೆ ರಂಗಾ ವಿಜಯವಿಠಲ ನಿನ್ನ
ಸದಮಲಚರಣ ಸದಾನಂದ ಚರಣ ೪

**ಆದಿ**

ಇಟ್ಟಿಗೆ ಗದ್ದಿಗೆ ಮೆಟ್ಟಿ ನಿಂದ ಚರಣ
ಜಟ್ಟಿಗಳೆಲ್ಲರ ಕುಟ್ಟಿ ಕೆಡಹಿದ ಚರಣ
ಪುಟ್ಟಗೆಜ್ಜೆ ಪೊನ್ನಂದಿಗೆಯಿಟ್ಟ ಚರಣ
ಕಟ್ಟುಗ್ರ ದೈವವೆ ವಿಜಯವಿಠಲ ನಿನ್ನ ಚರಣ

**ಜತೆ**

ಬೇಡಿದಿಷ್ಟಾರ್ಥವ ವೇಗ ಕೊಡುವ ಚರಣ
ಗೂಢ ಮಹಿಮ ವಿಜಯವಿಠಲ ರಂಗನ ಚರಣ

**೨೪**

**ವೃಂದಾವನಿ ಸಾರಂಗ** **ಭಜನಿ ಠೇಕಾ**

ಧನ್ಯನಾದೆ ಪಾಂಡುರಂಗನ ಕಣ್ಣಾರೆ ಕಂಡು
ತಂದೆ ತಾಯಿಯ ಸೇವೆಮಾಡಿದ ಪ

ಪುಂಡರೀಕನ ಭಕ್ತಿಗೊಲಿದು
ಚಂದ್ರಭಾಗಾ ತೀರದಲ್ಲಿ ಬಂದು ನಿಂತ ವಿಠ್ಠಲನ ಕಂಡು ೧

ವೆಂಕಟೇಶ ಅಲ್ಲಿ ಅವನು ಶಂಖ ಚಕ್ರ ಪಿಡಿದ ಕರವ
ಟೊಂಕದ ಮೇಲಿಟ್ಟುಕೊಂಡು ನಿಂತು ಇಲ್ಲಿ ವಿಠ್ಠಲನಾದ ೨

ಕಡಗೋಲ್ನಿಂದ ಗಡಿಗೆ ಒಡೆದು ತುಡುಗು ಮಾಡಿದ ಹುಡುಗ ಬಂದು
ಉಡುಪಿಯಲ್ಲಿ ಕೃಷ್ಣನಾಗಿ ಓಡಿ ಬಂದಿಲ್ಲಿ ವಿಠ್ಠಲನಾದ ೩

ಎಷ್ಟು ಜನ್ಮದ ಸುಕೃತವೋ ಶ್ರೀ ಕೃಷ್ಣ ವಿಠಲ ರೂಪದಿಂದ
ಭಕ್ತ ಜನರಿಗಾಲಿಂಗನ ಭೆಟ್ಟಿ ಕೊಡುತ ನಿಂತುಬಿಟ್ಟ ೪

ಅನ್ನಬ್ರಹ್ಮ ಉಡುಪಿಯಲ್ಲಿ ಚಿನ್ನಬ್ರಹ್ಮ ಬೆಟ್ಟದಲಿ
ಸಣ್ಣತುಳಸಿ ಮಾಲೆ ಸಾಕು ನಂದ ಬ್ರಹ್ಮಭೂಪತಿ ವಿಠ್ಠಲಗೆ ೫

೧೫

ಧನ್ಯನಾದೆನು ವಿಠಲನ ಕಂಡು ಓಡಿತು ಅಘದ್ದಿಂಡು ಪ

ಧನ್ಯನಾದೆನೂ ಕಾಮನ್ನ ಪಿತನ ಲಾ
ವಣ್ಯ ಮೂರುತಿಯ ಕಣ್ಣಿಲೆ ಕಂಡು ‖ ಅ.ಪ ‖

ದೇವವರೇಣ್ಯ ಸದಾ ವಿನೋದಿ ವೃಂ
ದಾವನ ಸಂಚರ ಗೋಪನ ಕಂಡು ೧

ಮಂಗಳಾಂಗ ಕಾಳಿಂಗ ಮಥನ ಮಾ
ತಂಗವರ ವರ ರಂಗನ ಕಂಡು ೨

ಹಾಟಕಾಂಬರ ಕಿರೀಟ ಸಾರಥಿ
ತಾಟಕಾರಿ ವೈರಾಟನ ಕಂಡು ೩

ಚಿಂತಿತ ಫಲದ ಕೃತಾಂತನಾತ್ಮ ಜಾ
ದ್ಯಂತರಹಿತ ನಿಶ್ಚಿಂತನ ಕಂಡು ೪

ಮಾತುಳಾಂತಕ ವಿಧಾತಪಿತ ಜಗ
ನ್ನಾಥ ವಿಠಲ ವಿಖ್ಯಾತನ ಕಂಡು ೫

೧೬

**ಪಂತುವಾರಾಳಿಧ್ರುವ**

ನಾನಾ ಪರಿಯಿಂದ ನಿನ್ನ ಚರಣಾಬ್ಜಾ
ಮಾನಸದಲ್ಲಿ ಧ್ಯಾನಿಸೆ ಕಾಣಿಸದಿಪ್ಪ ಕಪಟವೇನಯ್ಯಾ
ನಾನು ಬಲು ಅಪರಾಧಿಯೋ ಸ್ನಾನ ಸಂಧ್ಯಾವಿಲ್ಲದಿ ವಿಪ್ರ
ಯೋನಿಯಿಲ್ಲವೇ ? ಜಾತಿಯ ಭಾನುಕೋಟಿತೇಜಾ ಭಕ್ತರ
ಧೇನು ಸಂತತ ದಯಾಂಬುಧಿ
ಹೀನಯೋನಿಜ ಮಾನವರು ನಿನ್ನ ಏನು ತುತಿಪಾರು ಕೇಳೀದಯ್ಯಾ
ನೀನೆ ತಾವೆ ಎಂದು ಭಜಿಸಿ ಇಂಥ
ಅಜ್ಞಾನದಿ ಕುಣಿವಾರತಿ ಏನೆಂಬೆ ನಿನ್ನ ಮಾಯಾಶಕ್ತಿಗೆ
ಆನು ವಿಸ್ಮೃತನಾಗುವೆ ಶ್ರೀ ನಾರಿಪತಿ ಬೊಮ್ಮನಯ್ಯಾ ಕೃ
ಶಾನು ನೇತ್ರನು ತಾತನೆ ಅನಿರ್ಜರಾದಿ ವಂದ್ಯ ಮಮ ಸ್ವಾಮಿ
ಈ ನುಡಿ ನಿನಗದೋ ಮಾಣಿ ನಿನ್ನ ಸ್ವಭಾವ ಎಂದಿಗೂ
ಮಾಣಿಯಲ್ಲಾವೆ ಪಿರಿಯನೆ ಮಾಣಿತಾ ಕಾಣಿಕೆ ಇತ
ದೀನತನದಲ್ಲಿ ಬಾಯಿದೆರೆದು ಪ್ರಾಣನಾಗಿ ಇರು ಎಂದರೆ

ನಾನೊಲ್ಲೆನೆಂಬೋಗಾದಿಯೋ
ಕಾಣಿಗಾಗದ ಕಾಡಗಲ್ಲಾನು ಪಾಣಿಯೊಳು ತೋರಲು
ಮೌನದಲ್ಲಿ ಬಂದು ಅವನ ಬಳಿಯಲ್ಲಿ ಮಾನವಂತ ನಿಲವಂತೆ
ಹೊಂಣ ಕಂಕ ಕಿರಾತ ಪುಲಕಸ ಹೀನಜಾತಿಗಳಿಂದಾದ
ನೀನೆ ಪರದೈವ ಸರ್ವೋತ್ಕೃಷ್ಟನೆಂಬೋ
ಜ್ಞಾನ ಬಂದಿರಬ್ಯಾಡವೇ ನಾನಾ ಪರಿಯಲಿ ನಿನ್ನ ಚರಣಾಬ್ಜಾ
ಏನೂ ತಿಳಿಯದಾ ಪಶುಗಳಿಗೆ
ನೀನೆ ಒಲಿದೆದ್ದು ಎಂತಯ್ಯಾ ಆನಂದ ಪಂಢರಪುರಿರಾಯಾ
ಮಾನಿಸರೂಪ ವಿಜಯವಿಠಲ ನಾನು ನಿಗಲ್ಲದವನೇನೋ   ೧

**ಮಟ್ಟ**

ಭಕುತಿಬಾರಣೆಯಿಂದ ನಿನ್ನರ್ಚನೆ ಮಾಡಿದ
ಭಕುತಜನರಿಗಿಂತ ಮಾಯಾದ ನೊಬಗೆ
ಅಖಿಳ ಶಕ್ತಿ ಉಳ್ಳ ಅನಿಮಿತ್ತ ಬಂಧು
ಲಕುಮಿವಲ್ಲಭ ನಮ್ಮ ವಿಜಯವಿಠಲರೇಯಾ
ಮುಕ್ತಾ ಕೇಳಿಗೆ ಒಲಿದ ಪಂಢರಪುರಿರಾಯಾ   ೨

**ತ್ರಿವಿಡಿ**

ಎಲ್ಲಾರಿಗೆ ಇಂತು ಮೋಹಾವೆ ಕಲ್ಪಸಿ
ಗಲಭೆ ಎಬ್ಬಿಸಿ ನಾನಾ ಪರಿಯಿಂದ
ಸೊಲ್ಲುಗಳಾಡಿ ಕಂಡಲ್ಲೆ ತಿರುಗುತಿಹರು
ಎಲ್ಲಾ ಮಾತಂಬಿಯಾ ತ್ರಿವಿಧ ಜೀವರ ಭೇಧ
ಇಲ್ಲದಂತಾಗುವದಲ್ಲೋ ಜೀಯಾ
ಎಲ್ಲೆ ಸ್ತೋತ್ತರವಿದು ಕರ್ಣಕ್ಕೆ ಕಠೋರ
ನಿಲ್ಲಾದೆಯಾಗುತಿದೆ ನಿರ್ದೋಷನೆ
ಬಲ್ಲೆನೋ ನಾ ನಿನ್ನ ವಂಚಕತನವ ಶ್ರೀ
ವಲ್ಲಭ ಕೇಳಲೋ ಚಾರಚೋರ
ಕೊಲ್ಲುವ ಮೃಗಗಳಿಗೇ ಪರಿಪರಿವಿಧದಿಂದ
ಹುಲ್ಲು ನೀರೆರೆದು ಸಂತೋಷಬಡಿಸಿ
ಎಲ್ಲಾ ಪರಿಯಿಂದ ಮೆಚ್ಚಿಸಿ ಕೊನೆಗೆ ತಾ
ನೊಲ್ಲದೆ ಹಿಂಸೆಯಾ ಮಾಡುವಂತೆ
ಇಲ್ಲಿಗೆ ಬರುವ ಮಾನನರಿಗೆ ಇದರಂತೆ
ಮೆಲ್ಲನೆ ಸವಿತೋರಿ ಐಹಿಕ ಸುಖವ
ಅಲ್ಲಿಗಲ್ಲಿಗೆ ಇತ್ತು ಕಡಿಗೆ ಕೆಡಿಸುವ ಯೋಗಾ
ಮಲ್ಲಮರ್ದನ ನಿನ್ನದು ನಿಶ್ಚಯಾ

ಖುಲ್ಲಾ ಏಕಲವ್ಯ ಗುರುಭಕ್ತಿ ಮಾಡಿ ಘನ
ಬಿಲ್ಲು ವಿದ್ಯವ ಕಲೆತು ಕೆಡಲಿಲ್ಲವೇ
ಹೊಲ್ಲೆ ಜೀವರು ಭಕುತಿಮಾಡಿದರು ಫಲವಿಲ್ಲ
ಇಲ್ಲವೊ ಏಸು ಜನುಮಕ್ಕೆ ದೇವ
ಗೊಲ್ಲವಲ್ಲಭ ನಮ್ಮ ಸ್ವಾಮಿ ವಿಜಯವಿ
ಠಲ ಪಂಢರಿರಾಯಾ ನಿನಗೆ ನಮೋ ನಮೋ ೩

**ಅಟ್ಟ**

ಕಲಿಯುಗದೊಳಗಿಂದ ಧರ್ಮ ಹೆಚ್ಚಿತು ಕಾಣೋ
ತಲೆದೂಗಿ ಪಾಡೋದು ಪೂರ್ವೋತ್ತರೆ ಜ್ಞಾನ

ಕೆಲವು ಕೆಲವು ಇಲ್ಲದಲೆ ಸರಿ ಬಂದಂತೆ
ಜಲಜನಾಭನೆ ನೀನೇ ಇದರೊಳಗಾವವ
ನೆಲೆವಂತರಿಪ್ಪಾರೋ ತಿಳಿದಿಪ್ಪ ಚೆನ್ನಾಗಿ
ಚಲುವ ಅಪ್ರಾಕೃತಗಾತುರ ಎನಗಿಂತು
ತಿಳಿದಿಪ್ಪದು ಪಂಚಭೇಧ ತತ್ವಜ್ಞಾನ
ಒಳಿತಾಗಿ ಒಲಿಸಿ ಸಂಪಾದಿಸದೆ ಉನ್ನತ
ಸುಲಭ ಮುಕುತಿಯಾಗದೆಂದು ಅನುದಿನ
ಬಲವಂತ ವಿಜಯವಿಠಲ ಪಂಢರಿಪುರ
ನಿಲಯಾ ನಿನ್ನಿಚ್ಚೆ ಮತ್ತಾವುದೂ ಕಾಣೆ ೪

**ಆದಿ**

ಅವರಂತಿರಲಿ ನೀ ನನಗೆ ಸರಿಬಂದ ಗತಿಯಾ ಕೊಡು
ತವಕದಿಂದಲಿ ಎನ್ನ ಬಿನ್ನಪ ಲಾಲಿಸಯ್ಯಾ ದಿವಸ
ದಿವಸಕ್ಕೆ ಕ್ರಮಾನುಸಾರವಾಗಿ
ನವನವರೂಪವನ್ನು ತೋರುತ್ತ ಸಲಹಬೇಕೋ
ಅವಗುಣ ಎಣಿಸದೆ ಕರಪಿಡಿದು ಉದ್ಧರಿಸು
ಭವದೂರ ಭಕುತವತ್ಸಲಾ ದಿವಿಗಂಗಾಸ್ನಾನ ಪಾದದರುಶನ
ಲವಲವಿಕೆಯಿಂದ ಸುಜನರ ಸಂಗವಿತ್ತು
ಪವನಾಂತರಯಾಮಿ ಮಾಡಿಸೋ, ನಿರ್ವಿಘ್ನ
ಅವನಿ, ಜಲ, ತೇಜ, ವಾಯು, ಗಗನದಲ್ಲಿ ನೀನೆ
ವಿವರಿಸಿ ಪೇಳುವುದೇನು ವಿಶ್ವಂಭರ ಕೃಷ್ಣ
ಶಿವನಂದನ ವಾಸ ವಿಜಯವಿಠಲರೇಯ
ಕವಿ ಪುಂಡರೀಕ ವರದ ಪಂಢರಿಪುರರಾಯಾ ೫

**ಜತೆ**

ಶರಣು ಶರಣು ನಿನ್ನ ಚರಣಾಬ್ಜಯುಗಳಕ್ಕೆ
ಕರುಣ ಪಂಢರಿಪುರಿ ವಿಜಯವಿಠಲರೇಯಾ ೬

## ಹರಿದಾಸರ ಪಾಂಡುರಂಗ ವಿಠಲ (೪)

೧೭

ನೋಡಿದೆ ವಿಠಲನ ನೋಡಿದೆ ಪ

ನೋಡಿದೆನು ಕಂಗಗಳಲಿ ತನು
ವೀಡಾಡಿದೆನು ಚರಣಾಬ್ಜದಲಿ ಕೊಂ
ಡಾಡಿದೆನು ವದನದಲಿ ವರಗಳ
ಬೇಡಿದೆನು ಮನದಣಿಯ ವಿಠಲನ ‖ ಅ.ಪ ‖

ಇಂದಿರಾವಲ್ಲಭನ ತಾವರೆ
ಗಂಧನಂಜಿಸಿ ತಪತಪಾವೆಂ
ತೆಂದು ಪೇಳ್ದನ ಯುವತಿ ವೇಷದಿ
ಕಂದುಗೊರಳನ ಸ್ತುತಿಸಿದನ ಪು

ರಂದರಾನುಜನಾಗಿ ದಿವಿಯೊಳು
ಕುಂದದರ್ಚನೆಗೊಂ ಸನಕ ಸ

ಸಂದನಾದಿ ಮುನೀಂದ್ರ ಹೃದಯ ಸು
ಮಂದಿರನ ಮಮಕುಲದ ಸ್ವಾಮಿ ೧

ಯಾತುಧಾನರ ಭಾರ ತಾಳದೆ
ಭೂತರುಣಿ ಗೋರೂಪಳಾಗಿ ಸ
ನಾತನನ ತುತಿಸಲ್ಕೆ ಶೇಷ ಫ
ಣಾತಪತ್ರನು ನಂದಗೋಪ ನಿ
ಕೇತನದಲವತರಿಸಿ, ವೃಷ ಬಕ
ಪೂತನರಿಗೆ ಸದೆದು ಬಹುವಿಧ
ಚೇತನರಿಗೆ ಗತಿನೀಡಲೋಸುಗ
ಜಾತಿಕರ್ಮಗಳ್ವಹಿಸಿ ಮೆರೆದನ ೨

ತನ್ನ ತಾಯ್ತಂದೆಗಳ ಹೃದಯವೆ
ಪನ್ನಗಾರಿಧ್ವಜಗೆ ಸದನವೆಂ

ದುನ್ನತ ಭಕುತಿಭರದಿ ಅರ್ಚಿಪ
ಧನ್ಯಪುರುಷನ ಕಂಡು ನಾರದ
ಬಿನ್ನಯಿಸಿ ತುತಿಸಲ್ಕೆ ಕೇಳಿ ಪ್ರ
ಪನ್ನ ವತ್ಸಲ ಬಿರುದು ಮೆರೆಯಲು
ಜೊನ್ನೊಡಲ ಭಾಗದಿ ನೆಲೆಸಿದ ಜ
ಗನ್ನಾಥ ವಿಠ್ಠಲನ ಮೂರ್ತಿಯ ೩

೧೮

ನೋಡಿದೆ ವಿಠಲನ ದಣಿಯ ಪ

ನೋಡಿದೆನು ವಿಠ್ಠಲನ ರೂಪವ
ಪಾಡಿದೆನು ಮನದಣಿಯೆ ಹರುಷವು
ಮೂಡಿತಂಗದಿ ಮುಗಿದು ಕೈ ನಾ ಮಾಡಿ ಸಾಷ್ಟಾಂಗ
ಬೇಡಿ ಮನಸಿನಭೀಷ್ಟ ಸಂತತ
ನೀಡು ನಿನ್ನಯ ಚರಣ ಸ್ಮರಣಿಯ
ಪಾಡಿಪೊಗಳುವ ಭಾಗ್ಯಬೇಕೆಂದು ಕಾಡಿದೆನು ಹರಿಯಾ ೧

ಪಂಚ ಪಂಚ ಉಷಕಾಲದೀ
ಪಂಚಬಾಣನ ಪಿತಗೆ ಆರುತಿ
ಮುಂಚಿನೊಸನಗಳನೆಲ್ಲ ತೆಗೆಯುತ ತೈಲವೆರೆಯುವರೂ
ಪಂಚರೂಪಗೆ ಚಂದ್ರಭಾಗೆಯ
ಪಂಚ ಗಂಗೋದಕಗಳೆರೆಯುತ
ಪಂಚ ಅಮೃತ ಸ್ನಾನಗೈಸುವ ಸೊಬಗ ನೋಡಿದೆನು ೨

ಬೆಣ್ಣೆ ಬಿಸಿನೀರೆರೆದು ಕೃಷ್ಣಗೆ
ಸಣ್ಣ ವಸ್ತ್ರದಿ ವರಸಿ ಮೈಯನು
ಘನ್ನ ಪೀತಾಂಬರವನುಡಿಸುತ ಜರಿಯ ಶಾಲ್ಹೊದಿಸಿ
ಬಣ್ಣದೊಸ್ತ್ರದ ಪಾಗು ಸುತ್ತುತ
ಬೆಣ್ಣೆ ಕಳ್ಳಗೆ ಅಂಗಿ ತೊಡಿಸುತ
ಸಣ್ಣ ಮಲ್ಲಿಗೆ ಹಾರ ಉಪವೀತ ಸಡಗರವ ಕಂಡೆ ೩

ಗಂಧ ಅಕ್ಷತೆ ಪುನುಗು ಜವಾಜಿ
ಛಂದದಾ ಕಸ್ತೂರಿ ತಿಲಕವು
ಸುಂದರಾಂಗನೆ ಮುಖಕೆ ಕನ್ನಡಿ ತೋರಿಸುವರಿಂತೂ
ಅಂದದಾ ಪಕ್ವಾನ್ನ ತರುತಲಿ

ಇಂದಿರೇಶಗೆ ಅರ್ಪಿಸುತ್ತಲಿ
ಒಂದು ಧೂಪಾರತಿಯ ಬೆಳಗಿ ಒಂದು ಏಕಾರ್ತಿ ೪

ಮಾಡಿ ಪಂಚಾರ್ತಿಗಳ ವಿಠಲಗೆ
ಪಾಡುವರು ಮನದಣಿಯೆ ಭಕ್ತರು
ನೀಡುವರು ಪಂಚಾಮೃತಂಗಳ ಬೇಡುವರು ಹರಿಯ
ರೂಢಿಯೊಳು ಪಂಢರಿಯ ಕ್ಷೇತ್ರವ
ಮಾಡಿ ಮಂದಿರ ನೆಲಸಿ ರಂಗನು
ಬೇಡಿದವರನು ಪೊರೆವ ಗೋಪಾಲಕೃಷ್ಣ ವಿಠ್ಠಲನು ೫

೧೯

ನೋಡಿದೇ ಶ್ರೀ ವಿಠಲನ ನೋಡಿದೆ ಪ

ನೋಡಿದೆ ಲೀಲಾ ಮಾನುಷನ - ಕೊಂ
ಡಾಡಿದೆ ಕರುಣ ಸಾಗರನ - ಆಹ
ನಾಡೊಳಗಾವೆಡೆ ಈಡು ಇಲ್ಲದ ದೈವ
ಗಾಡಿಕಾರನು ಕೃಷ್ಣ ಜೋಡು ಕುಂಡಲ ಧರನ|| ಅ.ಪ ||

ದಾಸರಂದದಿ ಕಾವಿ ವಸನ ಹೊದ್ದು
ಭಾಸಿಸುತಿಹ ಸಿರಿವರನ ವಸನ
ಮೀಸಲನವನು ತೆಗೆಯಲದವನ ಕಂಡೆ
ಲೇಸಾದ ಶಾಲು ಹೊದ್ದವನ ಆಹ
ಕಾಶಮೀರದ ಶಾಲು ಭಾಸುರ ಜರಿ ಖಚಿತ
ಭೂಷಿತ ಹರಿ ಕುಳಿತು ತೋಪಿಪ ಭಕುತರನ ೧

ಸುತ್ತಿಹ ಪಾವಡೆ ಶಿರಕೇ ಬಲು
ಸುತ್ತು ಸುತ್ತಿರುವುದು ಅದಕೆ ಹರಿ
ಮಸ್ತಕ ಛಂದ ಕಾಂಬುದಕೆ ನೋಡಿ
ಭಕ್ತ ಸಂದಣಿಯ ತೋಷಕ್ಕೆ ಆಹ
ಸುತ್ತಿಹುದನು ಬಿಚ್ಚಿ ತುತ್ತಿಸುತಿರಲಾಗ
ಕೃತ್ತಿವಾಸನ ತಾತ ನೆತ್ತಿ ನೈಜವ ಕಂಡೆ ೨

ಪೂಜಾರಿ ತೆಗೆಯಲು ಜರಿಯ ಶಾಲು
ಮಾಜಾದೆ ವಿಠಲನ ಪರಿಯ ಕಂಡೆ
ನೈಜದ ಶ್ರೀವರನ ದ್ವಯಹಸ್ತ
ಯೋಚಿಸಿ ಕಟಿಲಿಹ ಪರಿಯ ಆಹ

ಸೋಜಿಗತನರೂಪ ನೈಜದಿ ತೋರುತ
ಪೂಜಾದಿ ಸ್ವೀಕಾರ ವ್ಯಾಜಾವ ಕಂಡನೆನು ೩

ನಿರ್ಮಾಲಾಕೃತಿ ಪೊದ್ದ ಹಾರ ತುಳಸಿ
ಕರ್ಮ್ಮಲಸ್ರೂಸುವಧಾರಾಕಾರ
ಒಮ್ಮೆಲಿ ತೆಗೆದರಪಾರ ದಯ
ಸುಮ್ಮನಸರಿಗೀವ ಪೋರ ಆಹ
ಅಮ್ಮಹ ದೈವನ ಇಮ್ಮಡಿ ಪ್ರಭೆ ಕಂಡ
ನಿರ್ಮಾಲ್ಯ ತೆಗೆಯುವ ಕರ್ಮಾಚರಿಸೂವಲ್ಲಿ ೪

ಲೌಕಿಕ ಪೂಜೆಗಳ ಮಮ ಪರ
ಲೋಕೈಕನಾಥಗೆ ಪರಮ ಪ್ರೀತಿ
ವಾಕು ಭಕ್ತಿಯುತ ಮರ್ಮ ತಿಳಿ
ಪ್ರಾಕೃತಕೊಳ್ಳುವ ನಮ್ಮ ಆಹ
ಶ್ರೀಕರಾರ್ಚಿತ ಪಾದ ಸ್ವೀಕಾರಿಸುವ ಭಕ್ತ
ತೋಕನ ಬಿಂಬೋದ ಶ್ರೀಕರ ದಳ ತುಳಸಿ ೫

ನಾಕ್ಷತ್ತು ಭವನಗಳ್ಜೋತಿ ಮತ್ತ
ನೇಕಾನೇಕಾಕಾರ ಜ್ಯೋತಿಗಳೊ
ಪ್ರಕಾಶಪ್ರದ ಪರಂಜ್ಯೋತಿ ಮುಕ್ತಿ
ಪ್ರಕಾರದೊಳಗಿವನೆ ಜ್ಯೋತಿ ಆಹ
ಏಕಮೇವ ಹರಿಗೆ ಕಾಕಡಾರುತಿ ಮಾಳ
ಲೋಕರ ಪೂಜೆಯ ಸ್ವೀಕರಿಪುದ ಕಂಡೆ ೬

ಪಂಚ ಮೋಕ್ಷಪ್ರದ ಹರಿಗೆ ಆಯ್ತು
ಪಂಚವಿಧಭಿಷೇಕ ಆವಗೆ ಶೇಷ
ಮಂಚಿಕೆ ಕ್ಷೀರಾಬ್ಧಿಶಯಗೆ ಮಧು
ಸಂಚನ ಮದ್ವಿದ್ಯ ಹರಿಗೆ ಆಹ
ಪಂಚಾಮೃತಭಿಷೇಕ ಸಂಚಿಂತಿಸುವನೀಗೆ
ಸಂಚಿತ ಕರ್ಮವ ಕೊಂಚವ ಮಾಡುವ ೭

ಮಂಗಳ ಮಹಿಮಗೆ ಸ್ನಾನಾ ಅವ
ಗಂಗಾ ಪಿತನೆಂಬುದೆ ಮಾನ ಹಾಗೂ
ಅಂಗಜನಯ್ಯಗೆ ಸ್ನಾನಾ ಆಯ್ತು
ಹಿಂದಗೆ ಲೋಕ ವಿಧಾನಾ ಆಹ
ಸಂಗೀತಲೋಲ ಸತ್ಸಂಗವು ತುತಿಸಲು
ಸ್ವಾಂಗಾಯನಾಮ ಶುಭಾಂಗನು ಮೆರೆದನು ೮

ವಸ್ತ್ರದಿಂದಲಿ ಕಾಯ ಮರೆಸಿ ಬಹು
ಶಾಸ್ತ್ರೋಕ್ತಿ ಉಡಿಗೆಯ ಉಡಿಸಿ ಮತ್ತೆ
ರತ್ನಧ್ಯಾಭರಣವ ತೊಡಿಸಿ ಚೆಲ್ವ
ಕಸ್ತೂರಿ ತಿಲಕವನಿರಿಸಿ ಆಹ
ವಿಸ್ತೃತಿಪರಿಯಲಿ ಸತ್ಯ ಷೋಡಶ ಪೂಜೆ
ಚಿತ್ತುರ ಮೊಗನಿಂದ ಕೃತ್ಯಾನುಸಂಧಾನ ೯

ವೇದ ಘೋಷ ಪೂಜಾ ಮಂತ್ರ ಬಹು
ನಾದ ವಿಠಲ ನಾಮ ಮಂತ್ರ ತುಂಬಿ
ಮೋದ ಪೂರೈಸಿತು ತಂತ್ರ ಘಂಟೆ
ನಾದದಿಂದಾರುತಿ ಕೃತ ಆಹ
ಆದರದಿಂದ ಪ್ರಸಾದವು ಸ್ವೀಕೃತ
ಮೋದದಿ ವಿಠಲನ ಪಾದಾಲಿಂಗಾತ್ಯವ ೧೦

ಉತ್ಕೃಷ್ಟ ಸುಕೃತದ ಭೋಗ ಹರಿ
ಇತ್ತನು ಅನುಗ್ರಹ ಯೋಗ ಸ್ವಂತ
ಹಸ್ತದಿ ಪೂಜಾದಿ ಯೋಗ ಮಾಳ್ವ
ಕೃತ್ಯ ಸಂಧಿಸಿದನು ಈಗ ಆಹ
ಚಿತ್ತಜ ಪಿತ ವಿಠಲ ಭಕ್ತವತ್ಸಲ ದೇವ
ನಿತ್ತಕಾರುಣ್ಯ ತುತಿಸಲೆನಗಳವೇ ೧೧

ಪಿತೃ ಸೇವಕ ಪುಂಡಲೀಕ ತನ್ನ
ಕೃತ್ಯದೊಳಿರೆ ನಿರ್ವಲ್ಮೀಕ ಹರಿ
ವ್ಯಕ್ತ ತನ್ಭಕ್ತ ಪರೀಕ್ಸಕನಾಗೆ
ಭಕ್ತನು ಮನಸ್ಥೈರ್ಯಾಲೋಕ ಆಹ
ಇತ್ತ ಇಟ್ಟಿಗೆ ಪೀಠ ಮೆಟ್ಟಿ ನಿಂತಿಹ ದೇವ
ಕೃತ್ತಿ ವಾಸಾದ್ಯರಿಂದ ಸ್ತುತ್ಯಶ್ರೀ ವಿಠಲನ ೧೨

ದಾಸೀಗೆ ಕಂಕಣವಿತ್ತು ಹರಿ
ದಾಸರ ರೂಪೀಲಿ ನಕ್ತ ಕಳೆ
ದಾಶು ದಾಶರ ಶಿಕ್ಷಕರ್ತ ಮತ್ತೆ
ದಾಸರ ನಿರ್ದೋಷ ವಾರ್ತ ಆಹ
ದಾಸನೋರ್ವಾ ವೇಷ ಭೂಷಣ ಕೇಳುತ್ತ
ವಾಸುಕಿ ಶಯನೊಲಿದ ದಾಸ ಪುರಂದರಗೆ ೧೩

ಮಯ್ಯಕೆ ಮುಯ್ಯ ತೀರಿತು ಜಗ
ದಯ್ಯ ವಿಠಲನ್ನ ಕುರಿತು ಪೇಳಿ

ಕಯ್ಯನೆ ಮುಗಿದರು ತ್ವರಿತು ದಾಸ
ಮೈಯ ಬಿಗಿದ ಕಂಬ ಒಳಿತು ಆಹ
ತ್ರಯ್ಯ ಲೋಕದಿ ದಾಸ ಅಯ್ಯನ ಪೆಸರಾಯ್ತು
ತ್ರಯ್ಯ ಗೋಚರ ಹರಿ ಪ್ರೀಯನಿಗೊಲಿದಂಥಾ ೧೪

ಅಂಡ ಬ್ರಹ್ಮಾಂಡಗಳೊಡೆಯ ಭಕ್ತ
ಪುಂಡಲೀಕನಿಗೊಲಿದ ಭಿಡೆಯ ರಹಿತ
ಚಂಡ ಕಿರಣಾನಂತ ಪ್ರಭೆಯ ಹರಿ
ಮಂಡಿ ತಿಂದುಭಾಗ ತಡಿಯ ಆಹ
ಹಿಂಡು ದೈವರ ಗಂಡ ಪುಂಡರೀಕ್ಷಾಕನೆ
ಪಿಂಡಾಂಡದೊಳಗಿಹ ಗಂಡನೆಂದೆನಿಸಿಹಗೆ ೧೫

ಪುರಂದರ ವಿಜಯ ಭಾಗಣ್ಣ ಮತ್ತೆ
ವರ ಜಗನ್ನಾಥವರ್ಯ ಬಹು
ಪರಿಠವಿಸಿತ್ತೆ ಮೃಷ್ಟಾನ್ನ ದಾಸ
ವರರ ಸೇವಕ ಸೇವಕನ್ನ ಆಹ
ಪುರಂದರದಾಸರ ದಿನ ದರುಶನವಿತ್ತಿಹೆ
ಅರಿದಾಯ್ತೆನ್ನಯ ಕುಲ ಪರಮ ಧನ್ಯವೆಂದು ೧೬

ಇಂದುಭಾಗದಿ ವಾಸ ಜಯ ಸಿರಿ
ಇಂದಿರಾ ಲೋಲನೆ ಜಯ ದಾಸ
ಮಂದಿಗಭಿಷ್ಟದ ಜಯ ಎನ್ನ
ತಂದೆ ತಾಯಿ ಬಂದು ಜಯ ಆಹ
ಸುಂದರ ಗುರು ಗೋವಿಂದ ವಿಠಲ ಹೃ -
ನ್ಮಂದಿರದೊಳು ತೋರಿ ಬಂಧನ ಬಿಡಿಸುವ ೧೭

೩೦

ನೋಡಿದೆನೊ ಸಿರಿ ಪಾಂಡುರಂಗನಾ
ಪಾಡಿದೆನೊ ಜಗದಂತರಂಗನ
ಕೂಡಿದೆನೊ ಮನ ಖಗ ತುರಂಗನ
ಬೇಡಿದೆನೊ ಗುಣಾಂತರಂಗನಾ ಪ

ಕಪಿಲ ವಿಭುಹರಿ ಸಾರ್ವಭೌಮಸು
ತಪನಂದನ ಕೃಷ್ಣ ಗೀರ್ವಾಣ
ತಪಯಜ್ಞ ಜಿತದತ್ತ ಧನ್ವಂತ್ರಿ
ತಪನಿವಾಸ ವಿನುತ ವೃಷಭ ಹಯ

ಲಪಲಪನ ವೈಕುಂಠ ಹಂಸ ತಪನಾ
ಕುಪಿತಜಿತ ಮುನಿ ನರನಾರಾಯಣ
ಅಪರಿಮಿತ ರೂಪ ಧರಿಸಿದಾನಂದ
ವಿಪುಳದೊಳಗೀ ಗುಪಿತ ಮಹಿಮನ ೧

ಮುನಿವನ ಜಿತ ಚಿತ್ತ ಶುದ್ಧದಿ
ಜನನಿ ಜನಕನ ಚರಣ ಸೇವೆಯ
ಅನುದಿನದಿ ಘನವಾಗಿ ಮಾಡುತ
ಗುಣಗಳಿಂದಲಿಯಿರಲು ಇತ್ತಲು
ಮುನಿ ನಾರದನು ಗಾಯನವ ಗೈಯುತ
ಇನಿತು ಸೋಜಿಗ ನೋಡಿ ತನ್ನಯ
ಜನಕಗರುಹಲು ನಗುತಲಾ
ಮನದಿ ಕೈಕೊಂಡ ಮೂಲ ಮೂರ್ತಿಯ ೨

ನುಡಿದ ಮಾತಿಗೆ ತೂಗಿ ಮಸ್ತಕ
ಪೊಡವಿಯೊಳು ನೀನವತರಿಸಿ ಆ
ದೃಡ ಭಕುತನಿಗೆ ದರುಶನವೆ ಇ
ತ್ತಡಿಗಡಿಗೆ ಸುಖಬಡಿಸಿ ಅಲ್ಲಲ್ಲಿ
ಬಿಡದೆ ನಿಲ್ಲುವೆ ನಿಮ್ಮ ಸಹಿತಲಿ
ಕೊಡುವೆ ವರಗಳ ವಿನುತ ಕಳುಹಿದ
ಒಡನೆ ಸಲ್ಲಿಪೆನೆಂದು ಯಮುನಾ
ತಡಿಯ ಜನಿಸಿದ ಜಗನ್ಮೋಹನಾ ೩

ಉದುಭವಿಸಿ ಕಿಶೋರತನದಲಿ
ನಿಧಿಯ ನೋಡುವೆನೆನುತ ಗೋವುಗಳ
ಮುದದಿ ಮೇಯಿಸಿಕೊಳುತ ಕಾವುತ
ಒದಗಿ ಗೋವಳರೊಡನೆ ಬಂದನು
ಮೃಡ ವಿಧಿ ಸಂಭವಾದ್ಯ ಭಕ್ತನ
ಎದುರಲಿ ನೋಡಿದನು ಹೋ ಹೋ
ಇದೇ ಸಮಯವೆಂದು ನಿಂದಾ ಹಿಂಭಾ
ಗದಲಿ ಭಕ್ತಿಗೆ ಮೆಚ್ಚಿ ಬಲು ವೇಗಾ ೪

ತಿರುಗಿ ನೋಡದಲಿರಲು ಭಕುತನ
ಮರಳೆ ಮಾತಾಡಿಸಲು ಇಟ್ಟಿಗೆ
ಭರದಿ ಹಿಂದಕೆ ಒಗಿಯೆ ವಿಠ್ಠಲ
ಹರುಷದಲಿ ವಶವಾಗಿ ನಿಲ್ಲಲು
ಕರುಣರಸ ಸಂಪೂರ್ಣ ದೇವನ

ನಿರೀಕ್ಷಿಸಿದ ಜಯವೆಂದು ಪೊಗಳಿ
ವರವ ಬೇಡಿದ ಪುಂಡರೀಕನು ಗಿರಿಯನೆತ್ತಿದ ಗೋಕುಲೇಶನ ೫

ಭಕುತ ಮನೋರಥ ಎನ್ನ ಪೆಸರಿಲಿ
ಪ್ರಕಟವಾಗಲಿ ಕ್ಷೇತ್ರದ ಸರ್ವದ
ಸಕಲ ಲೋಕದೊಳಗೆ ನೀನೆ
ಮುಕುತಿ ಕೊಡುತಲಿ ಇಲ್ಲೆ ನಿಲುವದು
ಅಖಿಳ ಬಗೆಯಿಂದ ಭಜನೆಗೊಳುತ ನೀ
ರುಕ್ಮಿಣಿಪತಿ ಒಲಿದು ಪಾಲಿಸಿ
ವ್ಯಕುತವಾದನು ಪೂರ್ವಮುಖನಾಗಿ
ಸುಖಪಯೋನಿಧಿ ಮೆರೆಯುತಲಿ ಇಂದೂ ೬

ಕ್ರೋಶ ಯೋಜನ ಯೋಜನತ್ರಯ
ದೇಶ ಪರಿಮಿತ ಕ್ಷೇತ್ರವಿಪ್ಪದು
ವಾಸ ಒಂದಿನಮಲ ಮನುಜರನ
ಲೇಸು ಪುಣ್ಯಗಳೆಣಿಸಿ ಸರಸಿ
ಜಾಸನನು ಬೆರಗಾಗಿ ನಿಲ್ಲುವ
ದೋಷವರ್ಜಿತ ಹರಿಯ ನೆನೆಸುತ

ಅಸೇತು ಮಧ್ಯದಲಿ
ವಿಶೇಷವಾಗಿದ್ದ ಈ ಕ್ಷೇತ್ರ ಮೂರ್ತಿಯಾ ೭

ನಂದಾ ಮಂದಾಕಿನಿ ಮಧ್ಯಾಹ್ನಕೆ
ನಿಂದಿರದೆ ಬರುತಿಪ್ಪ ಪ್ರತಿದಿನ
ಚಂದ್ರಭಾಗಾ ಪ್ರಸೂನುವತಿ ಅರ
ವಿಂದ ಕುಂಡಲ ಚತುರ ದಿಕ್ಕಿನಲ್ಲಿ
ಪೊಂದಿಪ್ಪವು ಓರ್ವನಾದರು
ಮಿಂದು ತೀರ್ಥದಲಿ ಆ
ನಂದ ಸತ್ಕರ್ಮ ಚರಿಸಲಾಕ್ಷಣ
ಇಂದಿರೇಶನು ಒಲಿವ ನಿಶ್ಚಯಾ ೮

ದ್ವಾರಸ್ಥ ಜಯ ವಿಜಯ ನಾರದ
ಭಾರತಿ ಪಂಚ ಕೋಟಿ ದೇವರು
ಶ್ರೀರಮಣಿ ಮಿಕ್ಕಾದ ಜನರೆಲ್ಲ
ಈರೆರಡು ದಿಕ್ಕಿನಲಿಯಿಹರು
ಸುತ್ತಲಿ ಪಾಡುತ್ತಕುಣಿಯುತ್ತ
ಹಾರುತಲಿ ಹಾರೈಸಿ ನಾನಾ ವಿ

ಹಾರದಲಿ ಪುರಿ ಪ್ರದಕ್ಷಿಣಡೆ ವಿ
ಸ್ತಾರ ಮಾಡುತಲಿಪ್ಪ ಸೊಬಗನಾ ೯

ಎರಡು ವಿಂಶತಿ ಗುದ್ದು ಮೊಳವೆ
ಕರಿಸಿ ಕೊಂಬೊದೊಂದೆ ನಿಷ್ಕವು
ಇರದೆ ಇವು ನಾನೂರುಯಾದಡೆ
ವರಧನಸ್ಸು ಪ್ರಮಾಣವೆನಿಸೊದು
ಗುರುತು ತಿಳಿವದು ಇಂಥ ಧನಸ್ಸು
ಅರವತ್ತು ಪರಿಮಿತಾ ಈ ಭೀಮಾ
ಸರಿತೆಯೊಳು ಪರಿಪರಿ ತೀರ್ಥಗಳಕ್ಕು
ನಿರೀಕ್ಷಿಸಿ ವಂದನೆಯ ಮಾಡುತ್ತಾ ೧೦

ಜಾತಿ ಗೋತುರ ಹತ್ತದೊಂದೆ
ಮಾತು ಮನ್ನಿಸಿ ಕೇಳಿ ಸುಜನರು
ವಾತದೇವನ ಕರುಣತನವನು
ನೀತಿಯಲಿ ಪಡಕೊಂಡು ಸತ್ವದಿ
ಜ್ಞಾತ ಅನುಷ್ಠಾನದಲಿ ನಡೆದು ಪು
ನೀತ ಮಾನವ ಬಂದರಾದಡೆ
ಆತುಮದೊಳು ಹರಿ ಪೊಳೆದು ಬಲು
ಕೌತುಕವ ತೋರಿಸುವ ರಂಗನಾ ೧೧

ಶಯ್ಯಾ ಹರಿ ದಿನದಲಿ ಮಾನವ
ಕಾಯ ನಿರ್ಮಳನಾಗಿ ಪಂಢರಿ
ರಾಯ ರಾಜೀವನೇತ್ರ ತ್ರಿಭುವನ
ನಾಯಕನ ಕ್ಷೇತ್ರಕ್ಕೆ ಮನಮುಟ್ಟಿ
ಗಾಯನವ ಮಾಡುತಲಿ ಬಂದ ನಿ

ರ್ಮಾಯದಲಿ ಕೊಂಡಾಡಿ ದಮ್ಮಯ್ಯ
ಕೈಯ ಪಿಡಿಯನೆ ಕರುಣದಿಂದ ಸಾ
ಹಾಯವಾಗುವ ವಾಣಿ ಜನಕನಾ ೧೨

ಮಕುಟ ಕುಂಚಿ ಕುಲಾಯ ಕುಂತಳ
ಮಕರ ಕುಂಡಲ ಮಣಿ ಕಿರಣ ಸ
ನ್ಮಖ ಮುಕರ ಸೋಲಿಸುವ ಕಾಂತಿ ಚಂ
ಪಕ ನಾಸಿಕ ಮುಖ ಮೃಗನಾಭಿ ಸಣ್ಣ ತಿ
ಲಕ ಕೌಸ್ತುಭಗಳ ತುಲಸಿ ಮಾಲಿಕಾ
ನಖ ಪದಕ ಕಟಿಕಂಬು ಕರದ್ವಯ

ಆಕಳಂಕ ನಖ ಪಾದ ಭೂಷಣ ಮಾ
ಣಿಕ ಇಟ್ಟಿಗೆ ಮೇಲೆ ನಿಂದ ವಿಠ್ಠಲನ ೧೩

ಸಂಗಮ ಸುರ ಮಥನ ಕಾಳಿಂಗ
ಭಂಗ ಭಾವುಕ ಭಕ್ತಜನಲೋಲ
ಶೃಂಗಾರಾಂಬುಧಿ ರೋಮ ಕೋಟಿ ಕೋಟಿ
ಲಿಂಗಧರ ಗೌರೀಶ ಸುರಪ
ನಂಗ ಮಿಗಿಲಾದ ಮುನಿವಂದಿತಾ ಮಾ
ತಂಗ ವರದ ಗೋವಿಂದ ವರದೇಶ
ಸಂಗ ನಿಃಸಂಗ ಸುಪ್ರಸನ್ನ ನೀ
ಲಾಂಗ ಗತಿ ಎಂದು ತುತಿಸೆ ಅನುದಿನ ೧೪

ಪೇಳಲೊಶವೇ ಲೋಹದಂಡಹಿ
ಯ್ಯಾಳಿ ಕ್ಷೇತ್ರದ ಮಹಿಮೆ ಸಾವಿರ
ನಾಲಿಗಿಂದಲಿ ಪೊಗಳಿ ಸುಮ್ಮನೆ
ವ್ಯಾಳಪತಿ ಬೆರಗಾಗಿ ನಿಲ್ಲುವ
ಸಲಿಗೆನಾ ಮಾಳ್ಪರು ವಿಲಿಂಗರು
ಮೇಲು ಮೇಲೀ ಭುವನದೊಳಗಿದ್ದು
ಹೇಳಿ ಕೇಳಿದು ಜನರಿಗಾನಂದಾ
ಬಾಲಾ ವಿಜಯವಿಠ್ಠಲರೇಯನಾ ೧೫

## ಹರಿದಾಸರ ಪಾಂಡುರಂಗ ವಿಠಲ (೫)

೩೧

ಪಂಢರಪುರವಾಸ ಪಾಲಿಸೋ ಶ್ರೀಶ ಪ

ಶ್ರೇಷ್ಟ ಭಕ್ತನು ಕೊಟ್ಟ ಇಟ್ಟಿಕಲ್ಲಿನ ಮ್ಯಾಲೆ
ಗಟ್ಯಾಗಿ ನಿಂತಿದ್ದ ವಿಠೋಬ್ಬ ದಯ ಮಾಡೊ ೧

ಪಾಂಡುರಾಯನ ಸುತ ಗಾಂಡೀವರ್ಜುನ ದೂತ
ಬಂಡಿ ನಡೆಸಿದಾತ ಪುಂಡರೀಕರದನೀತ ೨

ಮುಕುತಿದಾಯಕ ಮುದ್ದು ರುಕುಮಿಯ ರಮಣನೆ
ಭಕುತವತ್ಸಲಯೆನಗೆ ಸಕಲಾಭೀಷ್ಟವ ನೀಡೊ ೩

ಬುಕ್ಕಿಟ್ಟು ತುಳಸಿ ಮಾಲೆ ಕಟ್ಟಿ ಕೊರಳಿಗೆ ಹಾಕಿ
ಅಪ್ಪಿಕೊಂಡರೆ ಸಾರೂಪ್ಯ ಕೊಡುವ ದಾತ ೪

ಲೋಕ ಲೋಕದೊಳಗಿದ್ದಾನೇಕ ಜೀವರನೆಲ್ಲ
ಸಾಕಿ ಸಾಕಾಯ್ತೆ ಕರವೇಕೆ ಟೊಂಕದಲ್ಲಿಟ್ಟೆ ೫

ಸೃಷ್ಟಿ ಸ್ಥಿತಿಯ ಜನಸಂರಕ್ಷಣೆ ಮಾಡಿ ನಿನ್ನ
ರಟ್ಟೆ ಸೋತವೆ ಟೊಂಕಕಿಟ್ಟು ಕಯ್ಯನು ನಿಂತೆ ೬

ಕಂಬದೊಳಗೆ ನಿಂತ ಪುರಂದರದಾಸರು
ವಂದನೆ ಮಾಡೆ ಇವರೆ ನಾರದರೆಂದು ನಾ ತಿಳಿದೆ ೭

ರುಕ್ಮಿಣಿ ಸತ್ಯಭಾಮೆ ರಾಧೆ ಲಕ್ಷುಮಿಯೇರ
ಹತ್ತಿಲೆ ನಿಂತ ನಮ್ಮಪ್ಪ ವೆಂಕಟರಮಣ ೮

ಭೀಮರಥಿಯ ಸ್ನಾನ ಸ್ವಾಮಿ ನಿಮ್ಮ ದರುಶನ
ಭೀಮೇಶ ಕೃಷ್ಣನ ಧ್ಯಾನ ಮಾಡುವೋದ್ವೈಕುಂಠಸ್ಥಾನ ೯

೩೨

**ತಿಲಕ ಕಾಮೋದಭಜನಿಠೇಕಾ**

ಪಂಢರಿಯ ಬಿಟ್ಟಲ್ಲಿ ಹೆಂಡತಿಯ ಕರಕೊಂಡು
ಬಂದ ಕಾರಣ ತಿಳಿಯದೋ ಪ

ಹೆಂಡತಿಯ ಕಾಟವೋ ಇದು ನಿನ್ನ ಆಟವೋ
ಭಕ್ತಭೂಮಿಗೆ ಓಟವೋ ‖ ಅ.ಪ ‖

ಪಂಢರಿಯ ಬಿಟ್ಟಲ್ಲ ಬಂದ ಕಾರಣವೇನು
ಕೇಳಯ್ಯಾ ಪಾಂಡುರಂಗಾss
ಚಂದ್ರಭಾಗಾತೀರ ಸುಂದರ ಮಂದಿರವು
ಇಂದಿರಾರಮಣ ನಿನಗೆ ೧

ಒಂದಲ್ಲ ಎರಡಲ್ಲ ಪಂಚ ಪಕ್ವಾನ್ನಗಳು
ಪ್ರತಿನಿತ್ಯ ನೈವೇದ್ಯಕೆ
ಅಂದ ಚೆಂದದ ರತ್ನ ಮುತ್ತಿನಾಭರಣಗಳು
ಕಂದರ್ಪಜನಕ ನಿನಗೆ ೨

ಅರುಣೋದಯಕೆ ನಿತ್ಯ ಪಂಚಾಮೃತದ ಸ್ನಾನ
ನವನೀತ ಬಾಯಿ ತುಂಬಾss

ಜರತಾರಿಮುಂಡಾಸು ಭರ್ಜರಿ ನಿಲುವಂಗಿ
ಸೊಂಪಿನಂಚಿನ ಮಡಿಯು ನಿನಗೆ
ತರತರದ ಪುಷ್ಪಗಳು ಎಳೆ ತುಳಸಿ ವನಮಾಲಿ
ಕೊರಳೊಳಗೆ ವೈಜಯಂತಿ
ಪರಿಮಳದ ಗಂಧ ಕಸ್ತೂರಿ ಪಣೆಯಲ್ಲಿ ಇಟ್ಟು
ವೈಭವದಿ ಪೂಜಿಸುವರು ೩

ಸರಿಯಾಗಿ ಮಧ್ಯಾಹ್ನ ಮಹಾಪೂಜೆ ನಡೆಯುವುದು
ಭಕ್ತರಿಗೆ ಲೆಖ್ಖವಿಲ್ಲಾss

ಪಾದಕ್ಕೆ ಹಣೆಹಚ್ಚಿ ತಿಕ್ಕುವರು ಮೇಲೆದ್ದು
ಅಪ್ಪಿಕೊಳ್ಳುವರು ಸ್ವಾಮಿ ತಿರುಗಿ ಬರಲಾಗದೇ
ನಿಂತು ಬಿಡುವರು ಅಲ್ಲಿ ದಬ್ಬಿದರು ಎಚ್ಚರಿಲ್ಲಾ
ಇಂಥ ಭಕ್ತಿಯ ಭಾವ ಇನ್ನೆಲ್ಲಿಯ ಕಾಣೆ
ಭಕ್ತವತ್ಸಲ ವಿಠ್ಠಲಾss ೪

ಗೋಧೊಳಿಕಾಲಕ್ಕೆ ಪಾದಪೂಜೆಯ ಮಹಾ
ಧೂಪ ದೀಪೋತ್ಸವಗಳುss
ಆಪಾದಮೌಳಿಪರ್ಯಂತ ದರ್ಶನ ಪಾದ
ಸ್ಪರ್ಶದ ಆನಂದವೋss
ರಾತ್ರಿ ಹತ್ತಕ್ಕೆ ಶಯನೋತ್ಸವದ ವೈಭವವು
ನೋಡಿದವರೆ ಧನ್ಯರು
ಸಚ್ಚಿದಾನಂದ ಮೂರ್ತಿಯಲ್ಲಿ ಅಲ್ಲಿ ಪ್ರತ್ಯಕ್ಷ
ಭಕ್ತರಿಗೆ ಕಾಣುತಿಹನು ೫

ಸತ್ಯವಾದಿ ಜಗಕೆ ಪಂಚಭೇದವು ನಿತ್ಯ
ಸರ್ವತ್ರ ತಾರತಮ್ಯಾ
ಸೃಷ್ಟ್ಯಾದಿ ಅಷ್ಟ ಕರ್ತೃತ್ವ ವಿಠ್ಠಲಗುಂಟು
ವಿಠ್ಠಲನೇ ಸರ್ವೋತ್ತಮss
ಹರಿಯು ಸರ್ವೋತ್ತಮ ವಾಯುಜೀವೋತ್ತಮನು
ಮೂಲಗುರು ಮುಖ್ಯ ಪ್ರಾಣಾss
ವರಮಧ್ವಮತವೇ ಮತ ಸಕಲಶ್ರುತಿಸಮ್ಮತವು
ಸತ್ಯ ತತ್ವಜ್ಞಾನವುss ೬

ಅಣುರೇಣು ಪರಿಪೂರ್ಣ ಸರ್ವಗುಣ ಸಂಪನ್ನ
ನಿರ್ದೋಷ ನಿರ್ವಿಕಾರಾss
ಸರ್ವತಂತ್ರ ಸ್ವತಂತ್ರ ಸರ್ವರಂತರ್ಯಾಮಿ

ಸರ್ವಜ್ಞ ಸರ್ವಸ್ವಾಮಿss
ಸಚ್ಚಿದಾನಂದಾತ್ಮಾ ಪೂತಾತ್ಮ ಪರಮಾತ್ಮಾ
ನಿತ್ಯ ತೃಪ್ತನು ಶ್ರೀಹರಿss
ನಿರ್ಗುಣ ನಿರಾಕಾರ ಅಮಿತ ಗುಣ ಆಕಾರ
ತ್ರಿಗುಣ ವರ್ಜಿತ ತ್ರಿಧಾಮಾ ೭

ಕಾರ್ಯಕಾರಣ ಅಂಶಿ ಅಂಶಾವತಾರ
ಅಂತರ್ಯಾಮಿ ಆದಿ ಇದನುss
ಪ್ರೇರ್ಯ ಪ್ರೇರಕನಾಗಿ ಬಾಧ್ಯ ಬಾಧಕನಾಗಿ
ವ್ಯಾಪ್ಯ ವ್ಯಾಪಕನು ತಾನುss
ಯಾರು ತನ್ನನೇ ನಂಬಿ ಸರ್ವಸ್ವನು ನೀಡಿ
ದಾಸರಾಗುವರೋ ಅವರಾss
ಕ್ಲೇಶಗಳ ಕಳೆದು ಭವಪಾಶ ಬಂಧವ ಬಿಡಿಸಿ
ಶ್ರೀಶ ಕೈಪಿಡಿದು ಪೊರೆವಾss ೮

ವಿಷ್ಣುಸರ್ವೋತ್ತಮ ತತ್ವದ ಜ್ಞಾನ ಶೂನ್ಯರಿಗೆ
ಬೇಸತ್ತು ಇಲ್ಲಿಗೆ ಬಂದ್ಯಾss
ಭಕ್ತ ಪ್ರಹ್ಲಾದನವತಾರ ರಾಯರು ಇಲ್ಲಿ
ಬಂದದ್ದು ಕೇಳಿ ಬಂದ್ಯಾss
ಮಧ್ವಸಿದ್ಧಾಂತ ಪದ್ಧತಿಗೆ ಅನುಸರಿಸಿ
ಪೂಜೆಗೊಂಬಲು ಬಂದೆಯಾss
ಮುದ್ದು ಭೂಪತಿ - ವಿಠಲ ಬಿದ್ದಿರುವೆ ಪಾದಕ್ಕೆ
ಉದ್ಧಾರಮಾಡೋ ಸ್ವಾಮಿ ೯

**ಸಾಕ್ಷಿ**

ಚಿತ್ತ ನಿರ್ಮಲರಾಗಿ ಭಕ್ತಿಭಾವದಿ ನಿತ್ಯ
ವಿಠ್ಠಲಾಷ್ಟಕ ಪಠಿಸಲು
ವಿಠ್ಠಲನು ಕೈಪಿಡಿದು ಕಷ್ಟಗಳ ಪರಿಹರಿಸಿ
ಇಷ್ಟಾರ್ಥಗಳ ಕೊಡುವನುss
ಸತ್ಯವೀಮಾತಿದಕೆ ಸಾಕ್ಷಿ ಬೇಕಾದರೆ
ಪ್ರತ್ಯಕ್ಷ ಪಾಂಡುರಂಗಾss
ಕಾವೇರಿ ಶ್ರೀರಂಗ ಕಂಚಿವರದ ರಾಜ
ಗಲಗಲಿಯ ನರಸಿಂಗನೋss ೧೦

ಪುಂಡರೀಕರವರದ ಪಂಢರಿರಾಯನ ಕೇಳವ್ವ ಕೇಳೆ ಪ

ಗೋಕುಲದೊಳಗೆ ತಾನಿಪ್ಪ
ಮೂರು ಲೋಕಕೆ ತಾನಿಪ್ಪ
ಕೊಳಲಧ್ವನಿಯ ಮಾಡುತಲಿಪ್ಪ ನಮ್ಮ
ತುರುಗಳ ಕಾಯುತಲಿಪ್ಪ ೧

ವೃಂದಾವನದೊಳು ನಿಂದ
ನಂದನ ಕಂದ ಗೋವಿಂದ
ಕೊಳಲ ಧ್ವನಿ ಬಹು ಚಂದ ಮೂ
ಜಗವ ಪಾಲಿಪ ಮುಕುಂದ ೨

ಸುರತರುವಿನ ನೆರಳಲ್ಲಿ ಇವನ
ಹೆಗಲಿನ ಮೇಲೆ ಕೊಡಲಿ
ನೆರೆದಿಹ ಗೋಪಿಯರಲ್ಲಿ ಗೋಪಾಲ
ರಾಡುತ ಲೀಲೆಗಳಲ್ಲಿ ೩

ಕರ್ಪೂರ ವೀಳ್ಯವ ಮೆಲುವ ನಮ್ಮ
ಕಸ್ತೂರಿ ತಿಲಕ ಉಂಗುರವ
ಮುತ್ತಿನ ಓಲೆ ವರ ಚೆಲುವ ವಿಸ್ತರದಿ
ಹದಿನಾಲ್ಕು ಲೋಕ ಪೊರೆವ ೪

ಹಿಮಕರಚರಣದ ಕರನ ಮೂ
ಜಗ ಪಾಲಿಪ ಕರುಣ
ಅಮರರಿಗೆ ಒಲಿದವನ ನಮ್ಮ
ಪುರಂದರವಿಠ್ಠಲರಾಯನ ೫

ಪಾಂಡುರಂಗನೆ ಪಾಲಿಸೆನ್ನನು
ಬೇಡಿಕೊಂಬೆನು ವರವ ನೀಡಯ್ಯ ನೀನು ಪ

ಸಿರಿವಿರಿಂಚ್ಯಾದಿ ಸುರರು ನಿರುತ ನಿನ್ನನ್ನು ಬಿಡರು
ಕರಗಳನೆ ಜೋಡಿಸುವರು ವರಗಳನೆ ನೀಡೆಂಬರು
ಭರದಿ ಹದಿನಾಲ್ಕು ಜಗದ ಉದರದಿ ಇಂಬಿಟ್ಟ ಭೋಜ
ಸಿರಿಸ್ತುತಿಗೆ ಸಿಲ್ಕ ರಾಜವರ ರವಿಶತರ ತೇಜ
ಭೀಮರಥಿಯ ತೀರದಲ್ಲಿ ಮಾಹಾನಂದ ಭರಿತ ನಂದನ ಕಂದ
ಸ್ವಾಮಿ ನಂಬಿದೆ ಅಭಯನ ಕೊಟ್ಟು ವರಗಳನನಿಟ್ಟು
ಪೂರ್ಣಸುಖವನ್ನೆ ಕೊಟ್ಟು
ನಾಮ ಧ್ಯಾನಗಳ ಅನುದಿನ ಮಾಡುವ ಜ್ಞಾನ ಕೊಟ್ಟನಂತಾಸನ

ಧಾಮ ಶ್ವೇತದ್ವೀಪ ವೈಕುಂಠದಲ್ಲೆ ನಿನ ಭಂಟರೊಳು
ಸೇರಿಸೊ ವೈಕುಂಠ ೧

ಬಂದು ಕಂಡೆನು ನಿನ್ನ ಇಂದು ನಾ ಮಾಡ್ದ ಪುಣ್ಯ
ಬಂದು ಕೈಸೇರಿತಿನ್ನ ಸುಂದರಾಂಗನೆ ಎನ್ನ
ಬಂಧ ಪರಿಹರಿಸಿ ಬೇಗದಿಂದ ಉದ್ದರಿಸೋ ಈಗ
ನಂದನ ಕಂದ ರಂಗ ಬಂಧುವೇ ಪಾಂಡುರಂಗ
ನೀರೊಳು ಮಚ್ಛವತಾರನೆ ಕಮಠ ರೂಪನೆ
ವರಹ ವೇಷಧಾರಕನೆ
ನಾರಸಿಂಹನೆ ದೈತ್ಯ ಸಂಹಾರಿ ಗಂಗಾಪದಧಾರಿ ಕ್ಷತ್ರಿಯ ಕುಲವೈರಿ
ಶ್ರೀರಾಮ ಲಂಕಾಧೀಶನ ಕೊಂದಿ ಮಧುರಿಗೆ ಬಂದಿ
ಬೌದ್ದನೆನಿಸುತ್ತ ನಿಂದಿ
ಶೂರ ಕಲ್ಕಿಯೆ ನಿನ್ನ ಮಹಿಮೆಯ
ಪೊಗಳಲು ಜೀಯಾ ಶೇಷಗೊಶವಲ್ಲವಯ್ಯಾ ೨

ಪುಟ್ಟ ಧ್ರುವರಾಯಗಿನ್ನ ಕೊಟ್ಟೆ ಸ್ಥಿರ ಪಟ್ಟವನ್ನ
ಎಷ್ಟು ವರ್ಣಿಸಲಿ ನಿನ್ನ ಇಷ್ಟ ಫಲದಾಯಕನ್ನ
ಇಟ್ಟಿಗೆ ಪೀಠನಿಲಯ ದಿಟ್ಟ ಶ್ರೀಕೃಷ್ಣರಾಯ
ಕಷ್ಟಪರಿಹರಿಸು ಗೋಪಾಲಕೃಷ್ಣ ವಿಠ್ಠಲ ಜೀಯ
ನಿಲ್ಲಿಸೆನ್ನಯ ಮನ ನಿನ್ನೊಳು ಭಕ್ತಿ ಗುಣಗಳು
ಪಾಡಲಿ ಹಗಲಿರುಳು
ಒಲ್ಲೆ ನೀನೊಲ್ಲದ ಸುದ್ದಿಯ ದುರ್ಬುದ್ದಿಯ
ಕೊಡದಿರು ವಿಠ್ಠಲಯ್ಯ
ಮಲ್ಲಮರ್ದನ ಲಕುಮಿಯ ಕಾಂತರಂಗ
ಬಲವಂತ ರಕ್ಷಿಸೆನ್ನ ವಸಂತ
ವಲ್ಲಭ ಪುಂಡಲೀಕನ ವರದ ದಾಮೋದರ
ಶ್ರೀದ ಕೈಯ ಮುಗಿವೆ ಸರ್ವದಾ ೩

ಬಿಟ್ಟ ಕಣ್ಣು ಬೆಟ್ಟ ಸೊಟ್ಟಕೋರೆ ಬಹು
ದುಷ್ಟ ಘೋರರೂಪಿ ನೀನು ಪುಟ್ಟ ಬಾಲ
ದುಷ್ಟ ರಾಜರ ಕೊಂದ ದಿಟ್ಟ ರಾಮನೆ ಕೃಷ್ಣ
ಬಿಟ್ಟ ವಸ್ತ್ರದ ದುಷ್ಟಹನನ ಕಲ್ಕಿ ೪

ನೀರೊಳಿದ್ದು ಭಾರ ಪೊತ್ತು ಕೋರೆ ತೋರ್ದೆ ಬಹು
ಘೋರಾಕಾರ ಬಾಲರೂಪಿ ಕ್ರೂರ ರಾಮ
ನಾರಿಚೋರನ ಕೊಂದು ಜಾರ ಚೋರಮ ಆಗಿ
ಮೀರಿ ಬತ್ತಲೆ ನಿಂದು ಏರಿ ಕುದುರೆ ೫

ಕುಟ್ಟಿ ತಮನ ಕೊಟ್ಟು ಅಮೃತ ದಿಟ್ಟ ವರಹ ಹರಿ
ಸಿಟ್ಟು ನಿನಗೆ ಪುಟ್ಟಿ ಭಾರ್ಗವ ಶ್ರೇಷ್ಠ ಶ್ರೀ ರಾಮ
ಕೃಷ್ಣ ಮೂರುತಿ ಬುದ್ದ ಕೆಟ್ಟ ಕಲಿಯ ಗೆದ್ದ
ಶ್ರೇಷ್ಠ ಗೋಪಾಲಕೃಷ್ಣವಿಠ್ಠಲ ಈಗ ೬

**೩೫**

ಪಾಂಡುರಂಗನೆ ಈಕ್ಷಿಸುವ ಸುಖವೇ ಸಾಕೂ
ಅಪಾರ ಮಹಿಮ ಅನಂತನಾನಂತ ರೂಪನಾ ಪ

ಶಶಿ ನಖ ಸಾಲ್ಬೆರಳು ಪರಡು ಜಾನು ಜಂಘೀ
ಎಸೆವ ಊರು ಕಟಿ ನಾಭಿ ಉದರ ಉರುತರ ಕಂಠಾ
ಮಿಸಣಿಪ ವದನ ನಾಸ ಕದಪು ಕರ್ಣ ನಯನಾ
ನೊಸಲು ಶಿರ ಜಗವ ಜ್ಯಾಪಿಸಿದ ರಕ್ಕಸ ಹರನಾ ೧

ಮುಕುಟ ಮಣಿ ಕುಂಡಲ ತಿಲಕ ಸರಿಗೆ ಕೌಸ್ತುಭ
ವಿಕಸಿತ ಕಮಲ ತುಲಸಿಹಾರ ಮುತ್ತಿನ ಸರ ಪ
ದಕ ಅಂಗದ ಕಂಕಣ ಮುದ್ರೆ ಕಟಿಸೂತ್ರ
ಸುಖದಂದಿಗೆ ಪೆಂಡೆಗೆಜ್ಜೆ ಸುಕುಮಾರನಾ ೨

ಶ್ರುತಿ ತತಿಗೆ ದೂರ ಉನ್ನತ ಲೀಲ ಸಾಕಾರ
ಸತತ ಭಕ್ತರಾಧಾರ ಅಪ್ರಾಕೃತ ಶರೀರ
ಯತಿಗಳ ಮನೋಹರ ಮತಿಗೆ ಅಗೋಚರ
ಪತಿತಪಾವನ ಸಿರಿ ಪ್ರತಿ ವಿಜಯವಿಠಲನಾ ೩

**೩೬**

**ಯದುಕುಲಕಾಂಬೋಧಿಆಧಿ**

ಪಾಂಡುರಂಗ ತ್ವತ್ಪಾದ ಪಾಲಿಸಯ್ಯಾ ಕರುಣದಿ ಪಡಿಕೈಯ್ಯ ಪ

ಪುಂಢರೀಕಮುನಿವರದ ನಮಿಪೆ ನಿನಗೇ - ನೀ ತ್ವರಿತದಲ್ಲೆನಗೇ ಅ

ವನಜಭವಾದಿ ಸಮಸ್ತ ಸುರವ್ರಾತಾ - ವಂದಿತ ಶ್ರೀನಾಥಾ
ಪ್ರಣತಾರ್ಥಾಹರನೆ ಕಾಮಿತಫಲದಾತಾ - ಮುನಿಗಣಸಂಧ್ಯಾ ತಾ
ನೆನೆವ ಜನರ ಮನದೊಳಿಹ ವಿಖ್ಯಾತಾ - ಭುವನಾದಿನಾಥಾ
ಘನಮಹಿಮ ಒಲಿದು ಪಾಲಿಸೆನ್ನ ಮಾತಾ - ದಯಮಾಡಿ ತ್ವರಿತಾ ೧

ಸುರಚಿರ ಮಹಿಮನೆ ಭಜಕಾಮರಧೇನೂ - ವಸುದೇವರ ಸೂನೂ
ಧರಣಿಯೊಳಗೆ ನಮ್ಮ ಹಿರಿಯರನುದ್ಧಾರಾ - ಮಾಡಿದ ಗಂಭೀರಾ
ದೊರೆಯೇ ನಿನ್ಹೊರತನ್ಯರನಾನರಿಯೇ - ಕೇಳಲೋ ನರಹರಿಯೇ
ಕರೆಕರೆ ಭವದೊಳು ಬಿದ್ದು ಬಾಯ್ಬಿಡುವೇ - ಪೊರೆಯೆಂದು ನುಡಿವೇ ೨

ಬಂದ ಜನರ ಭವಸಾಗರದ ಪರಿಮಿತಿ - ತೋರಿಸುತಿಹ ರೀತೀ
ಚೆಂದದಿಂದ ಕರವಿಟ್ಟು ಕಟಿಗಳಲ್ಲಿ - ಈ ಸುಕ್ಷೇತ್ರದಲೀ
ನಿಂದಿಹ ಭೀಮಾತೀರ ಚಂದ್ರಭಾಗಾದಲ್ಲಿಯ ವೈಭೋಗಾ
ತಂದೆ ಶ್ರೀಪತಿ ವಿಠ್ಠಲ ಸುಖಸಿಂಧೋ - ಅನಾಥ ಬಂಧೋ ೩

೩೭

ಪಾಲಿಸೋ ಪಂಢರಿಪುರರಾಯಾ ಪಾವನ ಕಾಯಾ ಪ

ಶ್ಲೋಕ : ತರುಣ ತುಲಸಿಮಾಲಾ ತಪ್ತಗಾಂಗೇಯ ಚೇಲಾ
ಶರಧಿ ತನಯಲೋಲಾ ಶಕ್ವರೀಕಾರಿ ಫಾಲ
ಶಿರಿ ಅಜಭವ ಮೂಲಾ ಶುದ್ದ ಕಾರಣ್ಯ ಲೀಲಾ
ಪುರಹರ ಸುಖ ಲೀಲಾ ಪಾಹಿ ಗೋಪಾಲ ಬಾಲಾ

ಪದ: ನವ ಜಲಾಧರನಿಭ ಶಾಮಲ ವಪು
ಕೋಮಲ ವೈಜಯಂತಿ ಮಾಲಾ
ರವಿಯಂತೆ ಪೊಳೆವ ಕುಂಡಲ ಹಾರಾ ಧೃತ
ಕೇಯೂರ ಕೌಸ್ತುಭ
ಮಣಿರುಚಿರಾ ದಿವಿ ಭೂ ಪಾತಾಳ
ಲೋಕದಿ ವ್ಯಾಪ್ತಾ ದೋಷ ನಿರ್ಲಿಪ್ತ
ವಿಷಶ್ಚಿತಜನರಾಪ್ತ ಭವವನಧಿಗೆ ಕುಂಭ ಸಂಭವ
ದೇವರ ದೇವಾ ಧರುಮಾದ್ಯರ ಭಾವಾ ೧

ಶ್ಲೋಕ : ಅಮಿತ ಸುಗುಣಧಾಮ ಆತ್ಮಭೂಪೂರ್ಣ ರಾಮಾ
ಅಮರಕುಲಲಲಾಮ ಅಬ್ಜಧಾಮಾಭಿರಾಮಾ
ಯಮಿಕುಲೋದಧಿ ಸೋಮ ಯಜ್ಞ ಭೃದ್ಯಜ್ಞ ನಾಮಾ
ಸಮರವಲಯ ಭೀಮಾ ಸಾತ್ವತಾಂ ಸಾರ್ವಬೌಮಾ

ಪದ : ದಿತಿಜಮರ್ದನ ದೀನರಕ್ಷಕಾ ಕರ್ಮ ಸಾಕ್ಷಿಕಾ
ಸಂರಕ್ಷಿತ ಸರ್ವ ಲೋಕಾ
ವಿತತ ಮಹಿಮ ವಿಶ್ವನಾಟಕ ವತ್ಸಘೋಟಕಾ ಶೋ
ಭಿತ ರತ್ನಕಟಕಾ ನುತಿಸುವೆ ನಳಿನ
ಜಾಂಡೋದರಾ ಸರ್ವರಾಧಾರಾ

ಸಂತತ ನಿರ್ವಿಕಾರಾ ಮತಿ ಮಂದನಾಗಿ ನಿನ್ನನು ಬಿಟ್ಟೆ ಮ
ಮತೆಯ ತೊಟ್ಟೆ ಕಾಣೆನೋ ಪುಣ್ಯ ಬಟ್ಟೆ ೧

ಶ್ಲೋಕ : ಜನನ ಮರಣ ದೂರ ಜಂಗಮಾಚಾರ ವಿಹಾರಾ
ದನುಜವನ ಕುಠಾರಾ ದೀನಮಂದಾರ ಧೀರಾ
ಪ್ರಣತ ಭಯ ವಿಹಾರಾ ಪ್ರಾಕೃತಾತೀತ ಸಾರಾ
ದಿನಪನಿಭ ಶರೀರಾ ದುಃಖವಾರಿಹ ಸಮೀರಾ ೩

ಪದ : ವನಧಿ ಬಂಧನ ವನೌಕಪನಾಥಾ
ಜಿತಾಸುರಯೂಥ ನಿರ್ಮಲ ಶ್ರುತಿಗಾಥಾ
ಅನುದಿನದಲಿ ನಂಬಿದೆ ನಿನ್ನ ಪಾಲಿಸು
ಎನ್ನ ಸಂತತ ಸಂಪ್ರಸನ್ನಾ
ಮನೋವಾಕ್ಕಾಯದಿ ಮಾಡಿದ ಕ್ರಿಯೆ ನಿನ್ನದು
ಜೀಯ ಕರಣದಿ ಪಿಡಿಕಯ್ಯಾ
ನೆನೆಯೆ ನೀನಲ್ಲದೆ ಅನ್ಯರ ದುರ್ಜನ ದೂರಾ ನಂದ
ಗೋಪಕುಮಾರಾ ೩

ಶ್ಲೋಕ : ಶಫರ ಕಮಠ ಕೋಲಾ ಶತ್ರುಕಾಶ್ಯಪಿಬಾಲಾ
ನೃಪಕುಲ ಈರವಾಳಾ ನೀಲಕಂಠಾಸ್ತ್ರಕಾಲಾ
ದ್ರುಪದತನಯಪಾಲಾ ದುರವರ್ಜಿತದುಕೂಲಾ
ರಿಪುದಿತಿಸುರ ಬಾಲಾ ರಕ್ತಪದ ಭೇದ ಸಾಲಾ

ಪದ: ಕ್ಷೇತ್ರಜ್ಞಾ ಕ್ಷೇತ್ರನಾಮಕ ಕ್ಷೀರಾಬ್ಧಿನಿಜಾಗಾರ
ನಿರ್ಮಲ ಓಂಕಾರಾ
ಮಾತೃ ಪ್ರತಿಪಾದ್ಯ ಸ್ವರೂಪಾ ವರ್ಜಿತ ಪಾಪ
ಗುರುವೆನಿಪ ಸಾಂದೀಪ
ಪುತ್ರನ ತಂದ ಪರಾಕ್ರಮಿ ಎಲ್ಲರ ಸ್ವಾಮಿ
ಪರಮ ಪ್ರೀಯ ಜಾಮಿ
ಭಕ್ತಗೊಲಿದು ವಿಶ್ವರೂಪವಾ ತೋರಿ ಚಾಪವಾ ಕೊಟ್ಟು
ಕಳೆದ್ಯೊ ತಾಪವಾ ೪

ಶ್ಲೋಕ : ನಗಧರ ನಳಿನಾಕ್ಷ ನಾಕನಾಥದ್ಯ ಪಕ್ಷ
ನೃಗ ನಗಪತಿ ಶಾಪಾ ನಿರ್ವಹಕಾರ ಶ್ರೀಪಾದ
ಭೃಗು ಮುನಿಗೇಯಾ ಭೂತನಾಥ ಸಹಾಯ
ಅಗಣಿತ ಸುಮಹಾತ್ಮ ಸರ್ವ ಜೀವಾಂತರಾತ್ಮಾ

ಪದ : ರಜನೀಶ ಬಿಂಬವನಿಳುಹಿದಾ ಮಾವಕಳುಹಿದ
ಅಹಿತರನಳುಹಿದಾ
ದ್ವಿಜನ ಸಾಹನಾಂತಾಸನ ಪುರವೈದೆ ಸತ್ವರಾ
ತೋರಿದೆ ಸತ್ಪುತ್ರರಾ
ಭಜಗಮಾರ್ಗಣ ರವಿನಂದನಾ ಬಿಡೆ ಸ್ಯಂದನಾ
ವ ಒತ್ತಿ ಕುಂತಿನಂದನಾ
ನಿಜಭಾಪುರೆ ಕಾಯ್ದೆ ರಣದೋಳು ಬಾಣನ ತೋಳು
ಖಂಡಿಸಿದ್ಯೋ ಕೃಪಾಳು ೫

ಶ್ಲೋಕ : ಶುಭತನು ಸುಖತೀರ್ಥಾರಾಧ್ಯ ಸದ್ದಾನಪಾತ್ರಾ
ಇಭವರರಿಪು ಹತಾನ ವಿಶ್ವಜನ್ಮಾವಿಕರ್ತ
ಅಭಯದ ತವಪದಾಂಭೋಜಾತ ಯುಗ್ಮ ಪ್ರಸಾದಾ
ನಭದನುಷಿತ ದೇಹಿ ನಿಶ್ಚಲಾನಂತ ಪಾಹಿ

ಪದ : ವಸುಪತಿಸುತ ನಳಕೂಬರಾ ಮಣಿಗ್ರೀವರಾ
ತರುಜನ್ಮ ವಿದೂರಾ
ವೃಷಭ ಶಕಟ ಬಕಭಂಜನಾ ಜನರಂಜನಾ
ನಿರ್ಗುಣ ನಿರಂಜನಾ
ವಸುದೇವನಿಗೆ ಮಗನಾಗಿದ್ದೆ ಬೆಣ್ಣೆಯ ಕದ್ದೆ
ಗೋಪರೊಡಗೂಡಿ ಮೆದ್ದೆ
ಬಿಸಜಾಂಡವ ವದನದೊಳಂದು ಸಜ್ಜನಬಂಧೂ
ತೋರಿದೆ ದಯಾಸಿಂಧೂ ೬

ಶ್ಲೋಕ : ಅತಿವಮಲ ಸುಗಾತ್ರ ಅಖಿಲಳೋಕೈಕ ಪಾತ್ರಾ
ಷತತಿಜದಳ ನೇತ್ರಾ ವೃತ್ತ ಹಾದ್ಯ ಮರಮಿತ್ರಾ
ಶ್ರುತಿಕಮಂಜ ಸೂತ್ರಾಸ್ತುತ್ಯ ಪಾವನ ಪವಿತ್ರಾ
ಪ್ರತಿಹಯ ಸುಚರಿತ್ರಾ ಪಾತು ಲಕ್ಷ್ಮೀ ಕಳತ್ರ

ಪದ : ಏಳು - ಘೊಳಿಯ ಗೆದ್ದ ಯದುಪತಿ ಸುಪರಂಜ್ಯೋತಿ
ನಿನ್ನಯ ದಿವ್ಯ ಖ್ಯಾತಿ ಈ
ರೇಳು ಜಗದೊಳು ನುತಿಸೋರು ನಿತ್ಯ
ಸುಖಿಸೋರು ಆನಂದಾಬ್ದಿ ಸದ್ಗತರೋ
ಕೀಳು ಮಾನವ ನಾ ಬಲ್ಲೆನೆ ನಿನ್ನಾ ನಿರುತಾ ಪನ್ನ
ಜನಕ್ಲೇಶ ಭಂಜನಾ
ತಾಳಿದೆ ನರರೋಳು ನರವೇಷಾ ಮಂಜುಳ
ಭಾಷಾ ಎನ್ನಯ ಅಭಿಲಾಷಾ ೭

ಶ್ಲೋಕ : ವನರುಹಭವತಾತಾ ವೀತ ತನ್ಮಾ ತ್ರಭುತ
ದ್ಯುನದಿ ಜಲವಿಧೂಪ ದಿವ್ಯ ಪಾದಾಂಬುಜಾತಾ
ಅನಿಲತನಯ ಪ್ರೀತಾ ಅತ್ರಿ ಸದ್ವಂಶ ಜಾತಾ
ಅನಿಮಿಷ ಜಯಸೂತಾ ಆನತೇಷ್ಟಪ್ರದಾತಾ

ಪದ : ಕರದಂಡ ಧರ ಕಟಿಸ್ಥಿತಿ ಪಾಣಿ
ಮಂಗಳ ಶ್ರೇಣಿ ಲೋಕೈಕ ಸತ್ರಾಣಿ
ಶರಣು ಹೊಕ್ಕರ ಕಾಯುವ ಛಲದಂಕಾ ಕಾಳಿಂಗನ
ಬಿಂಕಾ ಬಿಡಿಸಿದ್ಯೋ ವಿಷ್ಕಳಂಕಾ
ಮುದ ಶಿಶುಪಾಲ ಧೇನುಕಾಹಂಸಾ ವತ್ಸಾಸುರ ಕಂಸಾ
ದಂತವಕ್ತ್ರದ್ಯರ ಹಿಂಸಾ
ಪರನಾಗಿ ಕೊಟ್ಟೆ ಧಾರಿಣಿಷ್ಟು ಸುಜನರ ಕಷ್ಟಾ
ಬಿಡಿಸಿದೆಯೋ ಜಜಿಷ್ಠಾ ೮

ಶ್ಲೋಕ : ಹನುಮನತ ಪಾದಬ್ಜಹಂಸ ಸಂವಕ್ತ್ರ ಕುಬ್ಜಾ
ತನುವಿಕೃತಿ ವಿನಾಶಿತ ಕಾಳಿ ಜಿಹ್ವಾಸುದೇಶ
ದನುಜ ಡಿಬಿಕ ಸಾಲ್ವ ಮತ್ತು ಪೌಂಡ್ರೇಶ್ವರಾಳ್ವ
ಹಮ ವಿದುರವಂದ್ಯ ಹೇಮಗರ್ಭಾಂಡ ವಂದ್ಯ

ಪದ : ಇಟ್ಟಿಗೆ ಪೀಠಸಂಸ್ಥಿತ ಪಾದ ಮಂಗಳಪ್ರದಾ
ಶಾಶ್ವತ ಮೋದ ಸುಪದ
ಕೊಟ್ಟು ಪಾಲಿಸೋ ಅನಿಮಿಷತರು ನಿನ್ನಯ ಚಾರು
ಮೂರುತಿಯನ್ನು ತೋರು
ಪುಟ್ಟಲಾರೆನೋ ಜಗದೊಳು ದಾತಾ ಎನ್ನಯ ಮಾತಾ
ಲಾಲಿಸು ಜಗನ್ನಾಥ
ವಿಠ್ಠಲ ವೃಂದಾರಕರರಸಾ ಸಂತತ ಲೇಸಾ

ನಿನ್ನವರಿಗೀಯೋ ಶ್ರೀಶಾ ೯

## ಹರಿದಾಸರ ಪಾಂಡುರಂಗ ವಿಠಲ (೬)

**೩೮**

**ಭೈರವಝುಪತಾಲ**

ಪುಂಡರೀಕ ವರದಾ ವಿಠ್ಠಲಾ ಪ

ಚಂದ್ರಭಾಗ ತಟ ಸುಂದರ ಮಂದಿರಾ
ಪಾಂಡುರಂಗ ಶ್ರೀ ಪುರಂದರ ಮಂದಿರಾ
ಅಜಭವಸುರನುತ ತ್ರಿಜಗದೊಡೆಯ ಹರಿ
ವಿಜಯಪದ ಶ್ರೀ ವಿಜಯ ವಿಠ್ಠಲಾ ೧

ಗೋಪವೇಷಧರ ಗೋಪಕಿಶೋರಾ
ಗೋಪಿ ಮನೋಹರ ಗೋಪಾಲ ವಿಠ್ಠಲಾ
ಜಗದೋದ್ಧಾರಾ ನವನೀತ ಚೋರಾ
ಜಗದೀಶಾ ಶ್ರೀ ಜಗನ್ನಾಥ ವಿಠ್ಠಲಾ ೨

ಭಕ್ತವತ್ಸಲಾ ಭವರೋಗವೈದ್ಯಾ
ಕರುಣಾಸಾಗರ ಪ್ರಾಣೇಶ ವಿಠ್ಠಲಾ
ಧರ್ಮ ಸಂಸ್ಥಾಪಕ ಗೀತೋಪದೇಶಕ
ಪಾರ್ಥಸಾರಥೀ ಶ್ರೀ ಭೂಪತಿ ವಿಠ್ಠಲಾ ೩

೩೯

**ಜೋಗಿಯಾತ್ರಿತಾಲ**

ಪೋಗಿ ಬರುವೆ ನಾ ಪಂಢರಿರಾಯ
ಶ್ರೀ ಗೋವಿಂದನೆ ನೀಢೋ ಅಭಯಾ ಪ

ಮೊಲೆಯ ಕೂಸು ನಾ ಸಲುಹು ನೀ ತಾಯಿ
ಎಳೆಯ ಕರುವನಾ ತೊರೆಬಿಡು ತಾಯಿ ೧

ಮೂಢ ಅನಾಥಾ ಅಪರಾಧಿಯ ನಾ
ಕಡು ದಯಾನಿಧಿ ಸಲಹೋ ಎನ್ನಾ ೨

ಎನ್ನ ಹೃದಯವನು ನಿರ್ಮಲ ಮಾಡು
ಭೂಪತಿ ವಿಠ್ಠಲ ಅಲ್ಲೆ ಕುಳಿತು ಬಿಡು ೩

೪೦

ಪ್ರಥಮ ದೈವವೇ ಪಂಡರಿರೇಯಾ
ಪೃಥ್ವಿಯೊಳಗೆ ಭಾಗೀರಥಿಗೆ ಪಥವ ತೋರೊ ಪ

ಸಕಲಭಯನಾಶ ಸಾತ್ವಿಕ ಮೂರುತಿ
ಭಕ್ತಜನಪೋಷಕ ನೀನಲ್ಲವೆ

ತ್ವಕ್ಕು ಇಂದ್ರಿಯಗಳು ನಿನ್ನಾಧೀನವೋ
ಅಖಿಳ ಬಗೆಯಿಂದ ಮಾತು ಮನ್ನಿಸಿ ಕಾಯೊ ೧

ಸರ್ವರಂತರಿಯಾ ಸಿದ್ದ ಫಲದಾಯಕ
ಸರ್ವರಲಿ ಸ್ವಾಮಿಯೆಂದೆನಿಪ
ಸರ್ವವಿಘೋಪಶಾಂತ ವೇದಾಂತನೆ
ಗೀರ್ವಾಣ ಮುನಿಸುತ ಗಿರಿಧರ ದೇವಾ ೨

ಸಾಧು ಮೂರುತಿ ಸಿದ್ಧ ಫಲದಾ
ಬೋಧ ಕೀರುತಿ ಆದಿಪರಬೊಮ್ಮ
ವಿಜಯವಿಠಲರೇಯಾ ನೀನು
ಈ ಜಗದೊಳು ಭೀಮಾತೀರನಿವಾಸಾ ೩

**೪೧**

**ಯಮುನತ್ರಿತಾಲ**

ಪ್ರತಿ ಮನೆಯೊಳು ಶ್ರೀ ತುಲಸಿ ವೃಂದಾವನ ಬೇಕು
ಪ್ರತಿ ಮನೆಯೊಳು ಗೋಮಾತೆಯ ಸಂರಕ್ಷಿಸಬೇಕು
ಪ್ರತಿದಿನ ಮನೆಯೊಳು ಗೀತಾಪಾರಾಯಣ ಬೇಕು
ಅತಿ ಪ್ರೀತಿಯು ಶ್ರೀಹರಿಗೆ ಈ ಸೇವೆಯು ಸಾಕು ೧

ಉತ್ಥಾನ ದ್ವಾದಶಿ ದಿನ ತುಲಸಿಯ ಲಗ್ನವನು
ಅತಿ ಸಂಭ್ರಮದಲ್ಲಿ ಮಾಡಿ ಪಡೆಯಿರಿ ಸೌಖ್ಯವನು
ರಾಧಾದಾಮೋದರನೆ ಅಪ್ರಾಕೃತ ವರನು
ತಿಳಿಯಿರಿ ಕೃಷ್ಣನ ಲೀಲಾ ಮಹಿಮೆಯ ಮರ್ಮವನು ೨

ಇಂದ್ರಾದ್ಯಮ ಪ್ರಾರ್ಥಿತ ಸುಂದರ ಶುಭಕಾಯಾ
ವೃಂದಾವನ ಪ್ರಿಯಸ್ವಾಮಿನ ತಿಳಿಯದು ತವಮಾಯಾ
ಪೊಂದಿದೆ ನಿನ್ನಯ ಪಾದದ್ವಯ ಪಂಢರಿರಾಯಾ
ವಂದೇ ಭೂಪತಿ ವಿಠ್ಠಲನ ನೀಡೈ ನಮಗಭಯಾ ೩

**೪೨**

**ವಸಂತಧ್ರುವ**

ಬಂದೆನೊ ಎಲೆ ಹರಿಯೆ ಪಂಢರಿಪುರಿಧೊರಿಯೆ
ಇಂದೆನ್ನ ಪಾಲಿಸೊ ಬಿನ್ನಪವ ಲಾಲಿಸೋ
ಮಂದನು ನಾನಯ್ಯಾ ಮಹಾತ್ಮ ನೀನಯ್ಯಾ

ಮಂದಾಕಿನಿ ಜನಕ ಲಿಂಗ ಭಂಗದ ತನಕ
ಒಂದು ಸಾಧನ ಕಾಣೊ ನಿನ್ನ ಸ್ಮರಣೆ ಮಾಣೆ
ಬಂಧು ಬಳಗ ನೀನೆ ಭಕ್ತಾರಮರಧೇನು
ಎಂದೆಂದಿಗೆ ನಿನ್ನ ಪಾಡಿದವಗೆ ಬನ್ನಾ
ಪೊಂದಪ್ಪವೆಂದು ಪ್ರತಿದಿನದಲಿ ನಿಂದು
ವೃಂದಾರಕ ವೃಂದ ಪೊಗಳೀದರಾನಂದ
ನಂದನಾಗಿ ಕೇಳಿ ಘನಸಂತಸ ತಾಳಿ
ಬಂದಿನೊ ಎಲೊ ಹರಿಯೆ ಪಂಢರಿಪುರಿ ಧೊರಿಯೆ
ಬಿಂದು ಮಾತುರ ಪುಣ್ಯ ಇಲ್ಲವೊ ಕಾರಣ್ಯ
ಸಿಂಧು ಪುಂಡರೀಕವರದ ನಿಷ್ಕಳಂಕ
ಚಂದಿರ ಭಾಗ ಭೀಮಾತೀರ ಗೋವಗಾ
ನಂದ ವಿಗ್ರಹ ವಿಜಯವಿಠಲ ಮುನಿಗೇಯ
ವಂದಿಸುವೆನು ನಾರಂದಮುನಿ ಹೃದ್ಯಾನು ೧

**ಮಟ್ಟ**

ದೋಷಿ ಮಾನವರಿಗೆ ದಯಮಾಡುವೆನೆಂದು
ದೇಶದೊಳಗೆ ನಿನ್ನ ಕೀರ್ತಿ ವ್ಯಾಪಿಸಿ ಇಪ್ಪದು
ದೋಷ ವಿದೂರ ದುರ್ಜನದೂರ
ದೋಷ ಭಾವಗಳೆಲ್ಲ ನರರಂತೆ ಕೈಕೊಂಡು
ದೋಷಿ ಜನರ ಸಂಗಡ ಮಾಡಿ ಅವರ ಪಾಪ
ಲೇಶ ಉಳಿಯದಂತೆ ಅಪಹರಿಸಿದೆ ದೇವ
ಲೇಸು ನಿನ್ನ ಮಹಿಮೆ ಪೊಗಳಲು ಅತಿ ಚಿತ್ರಾ
ಏಸು ಬಗೆಯಿಂದ ಒಲಿಸಿದ ಕಾಲಕ್ಕು
ಆಶೆ ತೀರದು ಕಾಣೊ ಅನಿಮಿತ್ಯ ಬಂಧು
ವಾಸ ಪಂಢರಪುರಿ ವಿಜಯವಿಠಲ ಗೋವ
ಳೇಶ ಇಟ್ಟಗಿ ಮೇಲೆ ನಿಂದ ಮುಕ್ಕಂದ ೨

**ತ್ರಿವಿಡಿ**

ದೇವರೆಂಬುವರೆಲ್ಲ ನಿನ್ನ ತರುವಾಯ
ಆವಾವ ದೇಶದಲ್ಲಿ ನೋಡಿದರು
ಕಾವ ನೀತಿಯಲ್ಲಿ ಕೊಡುವಲ್ಲಿ ಕೊಂಬಲ್ಲಿ
ಭೂವಲಯದಲ್ಲಿ ಸರಿಗಾಣೆನೋ
ಪಾವನ್ನ ಮೂರ್ತಿಯೆ ನಿನ್ನ ನಂಬಿದೆ ಇನ್ನಾವ
ದೈವದಗಳನ್ನು ಸ್ತುತಿಸಲರಿಯೆ
ಪೂವಿನೊಳಗೆ ಇಟ್ಟು ನಮ್ಮನ ಸಲಹುವ

ಗೋವರ್ಧನುದ್ಧರಣ ಕಲಿಹರಣ
ಭಾವೆ ವಂದನೆ ಕೇಳೊ ನಿರ್ವಿಘ್ನದಾಯಕನೆ
ದೇವನಂದನ ಪಂಢರಪುರಿರಾಯನೆ
ಶ್ರೀವತ್ಸಲಾಂಛನ ವಿಜಯವಿಠಲ ಎನ್ನ
ಜೀವನೋಪಾಯವೇ ಜೀವ ಜೀವೇಶಾ ೩

**ಅಟ್ಟ**

ಹೂಣ, ಪುಳಿಂದ, ಪಲ್ಕಸ, ಕುಂಕ, ಕಿರಾತ
ಕಾಣ, ಅಭೀರ, ಯವನ, ನಾನಾ ವಿಜಾತಿ
ಯೋನಿ ಜನರಿಗೆ ನೀನೆ ಒಲಿದಂತೆ ಕರುಣಾಳೆ
ನಾನಂತು ವೈಷ್ಣವ ಸತ್ಕುಲ ಪ್ರಸೂತ
ಆನಂದತೀರ್ಥರ ಮತದಲ್ಲಿ ಪೊಂದಿಪ್ಪೆ
ಏನಾದರವಗುಣ ಇದ್ದರಾದಡೆ ನೀನೆ
ಎಣಿಸಾದೆ ಎನ್ನ ಪಾಲಿಸು ಪರದೈವ
ಕಾಣಿ ಮಿಕ್ಕಾ ದ್ರವ್ಯದಿಂದ ನಿನ್ನಂಘ್ರಿ
ಮಾನಸದಲಿ ಪೂಜೆ ಮಾಡಲಿಲ್ಲ ಪ್ರಭುವೆ
ಮಾನಿಸವೇಷನೆ ವಿಜಯವಿಠಲರೇಯಾ
ಜ್ಞಾನವಕೊಡುವೆ ಮಹಭಾಗ್ಯವ ಕೊಡುವೆ ೪

**ಆದಿ**

ನಿನ್ನ ನುಡಿದೆ ನಾನು ನಿನ್ನ ಪಾಡಿದೆ ನಾನು ನಿನ್ನ ಕಾಡಿದೆ ನಾನು
ನಿನ್ನ ಮುಂದೆ ಎನ್ನ ಬಡತನ ಪೇಳಿಕೊಂಡು
ಅನಂತ ಬಗೆಯಿಂದ ಕೊಂಡಾಡುವೆನೊ ವಿಠಲಾ
ಎನ್ನಭಾರ ನಿನ್ನದು ಕ್ಷಣ ಅನಂತ ಕ್ಷಣಕ್ಕೆ
ಮುನ್ನೆ ಪೇಳುವದೆಲ್ಲಾ ಉಪಚಾರವೊ ಸ್ವಾಮಿ
ಘನ್ನ ಪಂಢರಿರಾಯ ವಿಜಯವಿಠಲರೇಯಾ
ರನ್ನ ಪ್ರಸನ್ನ ಸಂಪನ್ನ ಮತಿಯ ಕೊಡು ೫

**ಜತೆ**

ಮನೋರಥ ಸಿದ್ಧ ಮಾಡಯ್ಯ ಮನ್ಮಥನಯ್ಯಾ
ಅನುಭವದಿಂದಲಿ ವಿಜಯವಿಠಲ ಪಂಢರಿ ೬

ಬಂದಾ ನೋಡೇ - ವಿಠಲಾ ಮನಗೇ
ಬಂದಾ ನೋಡೇ - ವಿಠಲಾ ಪ

ನಂದನ ಕಂದನ ಯಶೋದೆಯಾನಂದ ಅರ
ವಿಂದ ನಯನ ಗೋವಿಂದ ಮುಕುಂದನು|| ಅ.ಪ ||

ಇಂದುಭಾಗದಿ ವಾಸಾ ಧೂರ್ಜಟಿ
ಇಂದು ಮೌಳಿಯ ಪೋಷಾ
ತಂದೆ ಸೇವಕ ಭಕ್ತ ನಿಂದಿರೆ ಪೇಳಲು
ಅಂದ ಇಟಗಿ ಮೇಲೆ ನಿಂದ ಆನಂದದಿ ೧

ಪಂಢರಪುರೆಯಲ್ಲಿಹ ತನ್ನಯ
ತೊಂಡ ಜನರ ದೋಷ ಆಹ
ಪಾಂಡವ ಪ್ರಿಯ ಪದ ಬಂಡುಣಿಯೆನಿಸಿಹ
ಪುಂಡಲೀಕನಿಗೊಲಿಯೆ ಗೊಂಡು ಮಾನುಷ ವೇಷ ೨

ಕುಂಡಗೋಳಕರ ಸಖ ಅವರ್ಗಳ
ದಿಂಡುಗಳ ಪೋಷಕ ಆಹ
ಭಾಂಡಕಾರಕ ಮಣ್ಣು ಉಂಡು ಒಡವೆಗಳ
ಗೊಂಡು ಅವನ ಕಾಯ್ದ ಪುಂಡರೀಕಾಕ್ಷ ಶ್ರೀಶ ೩

ಗೊಂಡು ಮತ್ಸ್ಯದ ಕಾಯ ಬೆನ್ನಲಿ
ಅಂಡ ಪೊತ್ತಿಹ ರಾಯ
ಭೂ-ಮಂಡಲ ಪೊತ್ತೆ ದಾಡೆ ತೊಂಡ ಪ್ರಹ್ಲಾದ ವರದ
ದಂಡ ಕಮಂಡಲಜಿನ ಭಂಡ ಕ್ಷತ್ರಿಯಮರ್ದನನ ೪

ಹೆಂಡತಿಗಾಗಿ ತಿರುಗಿ ಕಾನನ
ಕೌರವರಸು ನೀಗಿ ಆಹ
ಶೌಂಡನು ತ್ರಿಪುರರ ಹೆಂಡರ ವಂಚಿಸುತು
ದ್ದಂಡ ಹಯವನೇರಿ ರುಂಡ ಮ್ಲೇಂಛರ ತರಿದೆ ೫

ಮಕರ ಕುಂಡಲಿಧಾರೀ ಶೋಭಿತ
ಪ್ರಖರ ಕಿರೀಟ ಮೌಳೀ
ವಿಖನಸಾಂಡಧಿಪ ವಿಕಸಿತ ಕೌಸ್ತುಭ
ಪ್ರಕಟ ಕೊರಳ ಮಾಲೆ ನಿಕಟ ಶ್ರೀವತ್ಸಕೆ ೬

ಕೊರಳೊಳು ವೈಜಯಂತೀ ರೂಪದಿ
ಶಿರಿಯೇ ಶೋಭಿತ ಕಾಂತೀ

ಧರಸಿಹ ತುಳಸಿಯ ಪರಿಪರಿ ವನಮಾಲೆ
ಬೆರಳೊಳು ಉಂಗುರ ವರ ರತ್ನ ಖಚಿತವು ೭

ಗೆಜ್ಜೆ ಸರಪಳಿ ಸುಂದರ ಸೊಂಟವು
ಗೆಜ್ಜೆ ಕಾಲಲಿ ನೂಪುರ
ಕಜ್ಜಲ ಕಂಗಳು ಗೆಜ್ಜೆ ನಾದದಿ ಒಪ್ಪ
ಬೊಜ್ಜೇಲಿ ಬ್ರಹ್ಮಾಂಡ ಸಜ್ಜುಗೊಳಿಸಿ ಇಹ ೮

ಚಕ್ರಶಂಖವು ಶೋಭಿತ ಕೈಗಳು
ನಕ್ರ ಹರಗೆ ಕಟಿತಟ
ವಕ್ರ ಮನದವರ ಸೊಕ್ಕನು ಮುರಿಯುತ
ಅಕ್ಕರ ಭಜಿಪರ ಸಿಕ್ಕನು ಬಿಡಿಸುವ ೯

ಮಾಸ ಮಾಗಶೀರ್ಷವು ನವಮಿ ತಿಥಿ
ಆಸಿತ ತಾರೆಯ ಚಿತ್ತವು
ವಾಸರ ಭಾರ್ಗವು ನಿಶಿಯೋಳ್ನಗುತ ಪ್ರ
ವೇಶಿಸಿದನು ಗೃಹ ವಾಸವಾನುಜ ಶ್ರೀಶ ೧೦

ಭಾವುಕರ ಪರಿಪಾಲ ಬಂಡಿಯ
ಬೋವನಿದ್ದ ಸುಶೀಲ ಆಹಾ
ದೇವಾದಿ ದೇವನು ಮಾವಿನೋದಿಯ ಗುರು
ಗೋವಿಂದ ವಿಠಲನು ತೀವ್ರ ಫಲಪ್ರದ ೧೧

**೪೪**

**ಶುದ್ಧ ಸಾರಂಗಭಜನಿಠೇಕಾ**

ಬಂದಾನು ಪಾಂಡುರಂಗಾ ವಿಠಲರಾಯಾ
ವೈಭವದಿಂದ ಬಂದಾ ಗಲಗಲಿಗೆಂದು ಪ

ಒಂದೇ ಮನದಿ ಆನಂದದಿಂದ ಭಜಿಪ ಭಕ್ತರ ಪೊರೆಯಲು
ಗುರುಸಾರ್ವಭೌಮನು ಐರಾವತದ ಮೇಲೆ
ಸಿರಿಸಹಿತ ಹರಿಯನ್ನು ಕರೆದುಕೊಂಡು ಬಂದಾ
ಪುಂಡಲೀಕವರದ ಪಾಂಡುರಂಗ ಬಂದಾ ೧

ಪ್ರಹ್ಲಾದ ವರದ ನರಸಿಂಗನ ಕ್ಷೇತ್ರಕೆ
ವಿಷ್ಣು ಭಕ್ತರಿಗೆಲ್ಲಾ ಇಷ್ಟ ದೇವರು ನಮ್ಮ
ಇಟ್ಟಂಗಿ ಮೇಲ್ನಿಂತ ವಿಠ್ಠಲರಾಯನು ೨

ಎಡ ಭಾಗದಲ್ಲಿ ತನ್ನ ಮಡದಿಯಿಂದೊಡಗೂಡಿ
ಸಡಗರದಲಿ ಬಂದು ಬಡಭಕ್ತರೂರಿಗೆ
ಗುರ್ವಂತರ್ಗಗತ ಭಾರತಿ ರಮಣ ಸರಿಸಹಿತ
ಭೂಪತಿ ವಿಠ್ಠಲ ಬಂದನು ೩

೪೫

**ದೇಶಏಕತಾಲ**

ಬಂದ್ಯಾ ವಿಠ್ಠಲ ಆನಂದವಾಯಿತು ನಂದಕಂದ
ಗೋವಿಂದ ಮುಕುಂದಾಪ

ಹಿಂದಿನ ಹಿರಿಯರ ಪುಣ್ಯ ಫಲಿಸಿತು
ಮುಂದಿನವರಿಗೆ ಅಭ್ಯುದಯವಾಯಿತು
ತಂದೆ ತಾಯಿ ಬಂಧು ಬಳಗವು ನೀನೇ
ಪುಂಡರೀಕ ವರದ ಪಂಡರಿರಾಯಾ ೧

ಪತಿತ ಪಾವನ ಪಾದ ಶತಕೋಟಿ ರವಿತೇಜ
ಟೊಂಕದ ಮೇಲೆ ಕೈಯಿಟ್ಟು ಇಟ್ಟಿಗೆ ಮೇಲೆ ನಿಂತಾ
ಸತ್ಯ ಸಂಕಲ್ಪ ನೀ ನಿತ್ಯ ತೃಪ್ತನು ನಿನ್ನ
ಭಕ್ತ ವಾತ್ಸಲ್ಯಕ್ಕೆ ಮಿತಿಯಿಲ್ಲವಯ್ಯಾ ೨

ಇನ್ನು ಎನ್ನಯ ಬಂಧವು ತೀರಿತು
ಮುನ್ನ ಬರುವ ಕ್ಲೇಶವು ದೂರಾಯಿತು
ಧನ್ಯನಾದೆ ನರಜನ್ಮ ಸಾರ್ಥಕವಾಯ್ತು ಪ್ರ
ಸನ್ನ ಭೂಪತಿ ವಿಠ್ಠಲ ರುಕ್ಮಿಣಿ ರಮಣಾ ೩

೪೬

**ಹಿಂಡೋಲಭಜನಿಠೇಕಾ**

ಬಾರೋ ಪಾಂಡುರಂಗಾ ಕೆಂಹ್ವಾ ಭೇಟ್ಟಿ ದೇಗಿ
ಚಂದ್ರಭಾಗ ವಾಸಿ ಭಕ್ತ ಜನ ಪೋಷಿಪ

ಆಹ್ಮಿ ಭಕ್ತಜನ ಆಲೋ ಪಂಢರಿಲಾ
ಗೋಪಾಲಬಾಲಾ ತವದರ್ಶನಾಲಾ ೧

ದೇಹಿ ದರುಶನ ರುಕ್ಮಿಣಿ ರಮಣಾ
ತೋರೊ ತವಚರಣಾ ಕರುಣಾಪೂರ್ಣಾ ೨

ಪುರಂದರ ವಿಠ್ಠಲಾ ಪಹಾ ಭಕ್ತ ಆಲಾ
ಆಲಿಂಗನ ತುಜಲಾ ಭೂಪತಿ ವಿಠ್ಠಲಾಲಾ ೩

೪೭

ಬಿಟ್ಟ್ಯಾಗೆ ಇರಲಿನ್ನೀ ಚರಣ ರಂಗ ಪ

ವಿಠ್ಠಲನಾ ಪುಟ್ಟಿ ಚರಣ
ಬಿಟ್ಟು ಗೋಕುಲ ಪುಂಡರೀಕನಿಗೊಲಿಯುತ
ಇಟ್ಟಿಗೆ ಮೇಲ್ನೊಂದಿ ನಿಂತಂಥ ಚರಣ‖ ಅ.ಪ ‖

ಭಕ್ತರಿಗೊಲಿಯುವ ಚರಣಾ ವೇದ
ಉಕ್ತಿಗೆ ನಿಲುಕದ ಚರಣಾ
ಹತ್ತಿ ಪಾರ್ಥನ ರಥ ಮತ್ತೆ ಭೀಷ್ಮನಿಗೊಲಿದ
ಹಸ್ತದಿ ಚಕ್ರವ ಪಿಡಿದು ಬಂದಾ ಚರಣ ೧

ಬಲಿಯನ್ನು ತುಳಿದಂಥ ಚರಣಾ ಮೂರು
ಇಳೆಯನಳೆದ ಪುಟ್ಟ ಚರಣ
ಕುಲಕೋಟಿ ಉದ್ಧಾರಗೈವಂಥ ಗಂಗೆಯ
ಚಲುವ ಉಂಗುಟದಲ್ಲಿ ಪಡೆದ ಕೋಮಲ ಚರಣ ೨

ಹಸ್ತಿ ಕರೆಯೆ ಬಂದ ಚರಣಾ ಲಕ್ಷ್ಮಿ
ಒತ್ತುವೋ ಮೃದತಳ ಚರಣಾ
ಚಿತ್ತದೆ ಚಿಂತಿಪ ಭಕ್ತರ ಮನದೈವ
ತೆತ್ತಿಗನಾಗಿ ಐವರ ಪೊರೆದಾ ಚರಣ ೩

ಭೀಮ ತೀರಾವಾಸ ಚರಣಾ ಭಕ್ತ
ರಾಮಯ ಹರಿಸುವ ಚರಣಾ
ಕಾಮಜನಕ ಪಾಂಡುರಂಗವಿಠ್ಠಲನೆಂದು
ಪ್ರೇಮದಿಂ ಭಜನೆಗೊಂಬುವ ಸ್ವಾಮಿ ಚರಣಾ ೪

ಬಿಟ್ಟಿರಲಾರೆ ನೀ ಚರಣ ಮನದಿ
ಕಟ್ಟಿ ಹಾಕೂವೆ ನಾ ನೀ ಚರಣ
ದಿಟ್ಟ ಶ್ರೀ ಗೋಪಾಲಕೃಷ್ಣ ವಿಠ್ಠಲ ಚರಣ
ಇಟ್ಟು ಹೃತ್ಕಮಲದಿ ಪೂಜಿಪೆ ನೀ ಚರಣ ೫

**೮೪**

ಮಂಗಳ ಪಂಢರಿವಾಸನಿಗೆ ಜಯ
ಮಂಗಳ ಇಟ್ಟಿಗೆ ನಿಲಯನಿಗೆಪ

ಗೋಕುಲವಾಸಗೆ ಆಕಳ ಪಾಲಗೆ
ಲೋಕ ಲೋಕಗಳನ್ನು ಪೊರೆವನಿಗೆ
ಪಾಕಶಾಸನ ವಂದ್ಯ ರುಕ್ಮಿಣಿ ಪೊರೆವನಿಗೆ
ಪಾಕಶಾಸನ ವಂದ್ಯ ರುಕ್ಮಿಣಿ ರಮಣಗೆ
ಲೋಕಮೋಹನ ಪಾಂಡುರಂಗನಿಗೆ ೧

ಪಾಂಡವ ಪಾಲಕ ಪುಂಡಲೀಕನಿಗೊಲಿದು
ಪುಣ್ಯಕ್ಷೇತ್ರದಿ ನೆಲಸಿದಗೆ
ತಂಡ ತಂಡದ ಭಕ್ತ ಮಂಡೆ ಸೋಕಿಸಕೊಂಬ
ಪುಂಡರೀಕ ಪಾದಯುಗಳನಿಗೆ ೨

ಕಟಿಯಲ್ಲಿ ಕರವಿಟ್ಟು ಕೈಲಿ ಶಂಖವ ಪಿಡಿದು
ನಟನೆಗೈಯ್ಯುವ ವೇಷಧಾರಕಗೆ
ತಟಿನಿ ಚಂದ್ರಭಾಗ ತೀರದಿ ಮೆರೆಯುವ
ವಟುರೂಪಿ ಗೋಪಾಲಕೃಷ್ಣ ವಿಠ್ಠಲಗೆ ೩

**೮೫**

ರಕ್ಷಿಸೆನ್ನನು ಶ್ರೀ ಪಂಢರೀನಾಥಾ ದೀನಜನದಾತ ವಿಶ್ವ
ಕುಕ್ಷಿ ವಿಖ್ಯಾತಾಪ

**ಶ್ಲೋಕ :**

ಭರ್ಮ ವಸನಧರ ವಿಷ್ಣು ಸೌಂದರ್ಯ ಸಾರ
ಧರ್ಮ ಪ್ರಮುಖ ವೀರ ವಂದ್ಯ ಲೋಕೈಕ ದೀರ
ಕರ್ಮ ವಿತತ ನಾರಾಯಣನೆ ಸುಖ ಪಾರಾವಾರ
ನಿರ್ಮಲ ದಧಿಚೋರ ವಾರಿದ ವಿಭಾಂಗ ಜಾರಾ ೧

**ಪದ**

:ಮಾ-ತಾ-ಪೀ-ಫಣಿ ಫಣಿಧರ ನುತ ದಿವ್ಯಚರಿತ
ವೃಂದಾರಕ ವೃಂದನಾಥಾ

ನೇಕ ತಾಪಸರಿಗೆ ಸುಳಿಯೆಯಲ್ಲ ತ್ವರಿಯ ಈ ಗೊಲ್ಲ
ರಿಗೊಲಿದೆಯೊ ಸತ್ಯಾನಲ್ಲ
ಬೇಕೆಂದು ಶ್ರೀ ದೇವಕಿಯ ಪೊಟ್ಟೆಯಲ್ಲಿ ನೀ ಪುಟ್ಟಿ ವೃಂದಾಔ
ನಕಾಗಿ ಅಟ್ಟಿಸಿಕೊಂಡು ನಂದನ ಮನೆಯಲ್ಲಿ ಕ್ಷೀರ ಘೃತ ಚೆಲ್ಲಿ
ಮೆದ್ದೆ ಪರಿಪರಿಯಲ್ಲಿ ೨

**ಶ್ಲೋಕ:**

ಮೀನ ಕಮಠ ಕೋಲ, ಮರ್ತ್ಯ ಮೃಗರೂಪ ಬಾಲ
ಕ್ಷೋಣಿಪಹ ಸುಶೀಲ ವೇಣುಗಾನ ವಿಲೋಲ
ಮಾನವಹವಿದುಕೂಲ ಹಯವದನ ಸುಜನಪಾಲ
ಹೀನ ಶಕಟ ಕಾಲನೇಮಿ ಮುಖ ದನುಜ ಕಾಲ ೩

**ಪದ:**

ನದೀ ಪಿತ ನೀ ಭಾಂಡಜಲದಿ ಮಿಂದೆ ಈ ಲೋಕದ ಮಂದಿ
ಯಂತೆ ಫಲವನ್ನು ತಿಂದೆ
ಸದಾ ತೃಪ್ತ ನಿನ್ನ ಬಂಧಕದೊಳು-ಜಗ, ಕೈಕಾಲು
ನೀ ಕಟ್ಟಿಸಿಕೊಂಬೆ ಮೇಲು
ಬೆದರರೊ ನಿನಗೆ ಕಮಲೆ ವಿಧಿ, ಆ ಗುಮ್ಮನ ಬಾಧೆ
ತೋರಿಸುವಳೊ ಯಶೋದೆ
ಮದನ ಪಿತನೆ ಕೌಸ್ತುಭಕಿಂತ ಗುಂಜಿಯತ್ಯಂತ ಪ್ರೀತೆ
ಶಾರ್ಙ್ಗ ಅನಂತ ೪

**ಶ್ಲೋಕ:**

ತಪನ ಸಖ ಸುನೇತ್ರ ಪರಿಮಳ ಭೂಷ ಗಾತ್ರ
ಕರುಣಾಂಬುಧಿಯೊ
ಬಲವಿಂದೆರಡು ಕೈಯ ಮುಗಿಯೆಂದಿ ಕೊಡುತಿಹೆನೆಂದಿ
ಸರ್ವರನು ಕರತಂದಿ
ಮಳಲಿಂದ ಕರೆಗಟ್ಟಿ ನಾರೇರ ಕೂಡಿ ವಿಹಾರ ಮಾಡಿ
ದೆಯಾ ವಾರಂ ವಾರಾ
ಫಲ ಭಕ್ಷಕರ ಕೊಡಂದಿಂದ್ರನ ಗರ್ವ ಬಿಡಿಸಿದೆ ಸರ್ವ
ರುಳಿಸಿದೆ ಪೂಜಿಗರ್ಹಾ ೬

**ಶ್ಲೋಕ:**

ಕಲ್ಪಸ್ವಚ್ಛಂದ ಭಾಸ ಅಣು ಮಹತ್ಪೂರ್ಣ ಶೇಷ
ತಲ್ಪ ವಿಗತದೋಷ ಭಕ್ತ ಜನರಾಭಿಲಾಷಾ
ಕಲ್ಪತರುವೆ, ಶ್ರೀಶ, ಅಚ್ಯುತ, ಭೀರು ವೇಷ
ಸ್ವಲ್ಪ ಇತರ ಕ್ಲೇಶನಾಶನಾನಂದ ಲೇಶ ೭

**ಪದ:**

ಕರೆಸಲು ಬಿಲ್ಲು ಹಬ್ಬದ ಬಗೆಯಿಂದ ಮಧುರೆಗೆ
ಅಕ್ರೂರನ ಕೈಯ ಪೋಗೆ
ಕರಿಯ ಸಂಹರಿಸಿ ಮಲ್ಲರಗುದ್ದಿ, ಕುಬುಜೆಯ ತಿದ್ದಿ
ದುಷ್ಟ ಕಂಸನ ವದ್ದಿ
ಹಿರಿಯಗ್ರಸೇನಗೆ ಅಭಿಷೇಕ ಮಾಡೆ ನಿಃಶೋಕ
ವೆನಿಸಿದೆ ಭೂಮೀ ನಾಶ
ವರ ಸಾಂದೀಪಿ ಬಳಿಯೊಳೋದಿದೆ, ತಂದು ತೋರಿದೆ
ಪುತ್ರನಾಘಪನೋದಿ ೮

**ಶ್ಲೋಕ :**

ಜನನೀ ಜನಕ ಭಂಗ ಮೋಚಕ ಪಾಂಡುರಂಗ
ಅನುಪಮನೆ ಭುಜಂಗ ದರ್ಪಹಾ ಸಾಧು ಸಂಗ
ಅನವರತ ಅಸಂಗವೀತ ಭೂತಾ ಕೃಪಾಂಗ
ದಿನಪನಿಭ, ವಿಹಂಗ ವಾಹನ, ಜಗದಂತರಂಗ೯

**ಪದ :**

ಲಾಲಿಸೆನ್ನಯ ಮಾತ ಭಗವಂತ
ಶ್ರೀ ರುಕ್ಮಿಣೀ ಕಾಂತ ನಿತ್ಯಾನಂದ ನಿಶ್ಚಿಂತ
ಬಾಲಕ ಸ್ತ್ರೀ ಪೋಷಣೆಗೆ ಎಂದೂ ದೇಹ ಬಹು
ನೊಂದು ವೇಷ ತಪ್ಪಿಸಿ ತಂದು
ನಾಲೇಶ ಸುಖವನ್ನು ಬಡಲಿಲ್ಲಾ
ಒಂದು ದಿವಸನೂ ನಿನ್ನ ಪೂಜಿಸಲಿಲ್ಲ
ಕಾಲನವರಿಗೆನ್ನ ಭಿಡೆಯವೆ ನುಡಿ
ತಡೆಯವೆ ಎಳ್ಳಿನಷ್ಟು ಸಾಧನವೇ ೧೦

**ಶ್ಲೋಕ :**

ಕಟಿ ಸ್ಥಿತ ಕರಧಾರಿ ಜಲಜಧರ ಪೂತನಾರಿ
ಪಟುತರ ಭುಜ ಶಾರಿ ಚಕ್ರಿ, ಚೈದ್ಯಪಹಾರಿ

ಕಠಿಣ ಶುಭವ ವಾರಿನಿಧಿ ಕರಿರಜ - ಉದಾರಿ
ವಿಠಲ ಸುಗದಿದಾರಿ ಕಾಣನ್ಯೋ ಕರೆಯಾ ಸಾರಿ ೧೧

**ಪದ:**

ಒಡಲಿಗೆರಡು ಕೈಯಾ ಇಕ್ಕುತ - ನುಡಿಗುಕ್ಕುತ
ಕಂಠ ಜಿಗಿದು ಬಿಕ್ಕುತ
ಕೊಡುವನ ಮೊಗ ನೋಡಿ ನಾಚುತ ಬಾಯ್ದೆರೆಯುತ
ಮರಳೊಮ್ಮೆ ಮುಚ್ಚುತ
ಅಡಗಿಸಿ ಕಾಯ ಕಟಕನಲ್ಲಿ ನಾಯಿ ತೆರದಲ್ಲಿ
ಸುಳಿದಾಡುತ ಅಲ್ಲಿ
ಕಡೆಗೆ ನಿಷ್ಫಲವಾಗಲು ಸತಿ ಮುಂದೆ ಅನ್ನಲೇನಂದೆ
ಇಂಥ ಶ್ರಮಗಳೊಂದೊಂದೇ ೧೨

**ಶ್ಲೋಕ :**

ಶಾತ ಮುಕುಟವಿಟ್ಟ ಮಧು ಕೈಟಭಾರಿ ಕೃಷ್ಣಾ
ಖ್ಯಾತಿಗವನಿ ಕೊಟ್ಟಾ ಬಲಿಯ ರಸಾತಳದೊಳಿಟ್ಟ
ವೀತಭಯ ವಿಶಿಷ್ಟ ನಾಮ ಮೂರ್ತಿ, ಚತುಷ್ಟ
ವಾತ ವಿನುತ ದುಷ್ಟದೂರ ಸರ್ವತ್ರ ಚೇಷ್ಟಾ ೧೩

**ಪದ :**

ಎನ್ನ ದೋಷಕ ವಂದು ನೆಲೆಗಾಣೆ ಪರಮಾತ್ಮನೆ
ಸ್ನಾನ ಸಂಧ್ಯಾವಂದನೆ
ಯನ್ನು ಗೃಹಸ್ಥಾಶ್ರಮದ ಕರ್ಮ ಮಾಡಿದೆನೆ ಧರ್ಮ
ಯಮ ತೆಗೆಸಾನೆ ಚರ್ಮ
ಅನ್ಯ ಸ್ತ್ರೀಯರ ಮೆಚ್ಚಿ ಕಟ್ಟೆನೋ
ನಿನ್ನ ಬಿಟ್ಟೆನೋ ಮುಂದುಪಾಯವಿನ್ನೇನೋ
ಪನ್ನಗ ಶಯನನೆ ಈ ಪರಿ ಮಾಡುವರೆ
ದೊರೆ ಜನುಮಗಳೇಸು ಬಾರಿ ೧೪

**ಶ್ಲೋಕ** :

ಶತಕ್ರತು ಅನುಜಾತ ವಾಮನ ಪಾರ್ಥಸೂತ
ಕ್ಷಿತಿವರ ಯದುನಾಥ ಧಾತ ತಾಪ ವಿಧಾತ
ವ್ರತಿ ಮನ ನತ ಪ್ರೀತಿ ಅತ್ರಿ - ಅನಸೂಯಾ ಜಾತ
ಸತೀ ಪತಿ ವಿಧು ಸಹಿತ ಗುಣಪೂರ್ಣ ತ್ರಿಗುಣರಹಿತ ೧೫

**ಪದ :**

ಧರೆಯೊಳು ವೇಷಕ ಕಾಪುರುಷರು
ಒಂದೆರಡು ಮೂರು ಆಟ ತೋರಲಳುವರು
ಮರಳೊಮ್ಮೆ ತರಿಸದೆ ಸಮ್ಮಾನ ಮಾಡಿ ಬಹುಧನ
ಕೊಡುವರೊ ಮೂರು ಭುವನ
ದೊರೆ ವಿರ್ಜರಾರಾಧ್ಯ ನಿನ್ನ ಮುಂದೆ, ವೇಷ
ಬಹು ತಂದೆ ಕಾಸ ಕೊಡದಿರೊ ತಂದೆ
'ನರ ನಿನ್ನ ವೇಷವು ಸಾಕೆನ್ನಬೇಕೋ'
ಪಾನ್ನ ಮೂರ್ತಿ ದಣಿಸದಿರೆನ್ನ ೧೬

**ಶ್ಲೋಕ :**

ಗಜ ದ್ರುಪ ತನುಜಿ ರಕ್ಷ ಬಾಲ ಪಾಲನಾಪೇಕ್ಷ
ದ್ವಿಜ ಕುಲವರ ತ್ರ್ಯಕ್ಷ ದುರ್ಯೋಧನಾದಿ ಶಿಕ್ಷ
ವಿಜಯ ಪ್ರಮುಖ ಪಕ್ಷ ಸ್ವಾಮಿ ಶ್ರೀವತ್ಸ ವೃಕ್ಷ
ಅಜುಮಿಳನಿಗೆ ಮೋಕ್ಷವಿತ್ತ ಪಾಪಹಿತಾರ್ಕ್ಷ್ಯ ೧೭

**ಪದ :**

ಪುಂಡರೀಶವಗಲೀದಿಲ್ಲಿಗೆ ಬಂದೆ
ಬಹು ಬೇಗ ಭಕ್ತರೆಂಬುದು ಹೀಗೆ
ಕಂಡ್ಯಾ ಯನ್ನವರೊಳು ಕೂಡಿಸೊ ನಿನ್ನ ಪಾಡಿಸೋ
ಆಶೆಯೆಂಬುದ ಬಿಡಿಸೋ
ದಂಡಜ ವರದ ಶ್ರೀ ಪ್ರಾಣೇಶ ವಿಠ್ಠಲ ನಿರ್ದೋಷ
ನಿನ್ನವರಿಗೀಯೋ ಲೇಸಾ
ಮಂಡಲದೊಳು ನಿನ್ನ ವ್ಯತಿರಿಕ್ತಾರಿಲ್ಲಾಮಿತ ಶಕ್ತ
ಪಾಹಿ ಸರ್ವೋದ್ರಕ್ತ ೧೮

**೫೦**

**ಭೈರವಿಧ್ರುವ**

ವ್ಯಕ್ತನಾಗಿ ಶಕ್ತನಾಗಿ ವ್ಯಾಪಕ ಪಾಂಡುರಂಗ
ಭಕ್ತರಿಗಾಗಿ ಭಾಗ್ಯನಾಗಿ ಬಂದಾ ಬಂದಾ ಪಂಢರಿರಾಯ
ಉಕ್ತಿಗಳೊಂದಂದು ಲಾಲಿಸಿದರೆ
ಮುಕ್ತರು ಬೆರಗಾಗುತಿಪ್ಪಾರು
ಮುಕ್ತಿ ಕ್ರೀಡೆ ಇಲ್ಲೆ ತೋರಿದಾ ತವಕಾದಿಂದಲಿ ಕುಣಿವುತ್ತ

ಮೌಕ್ತಿಕಹಾರಾ ನಾನಾಭರಣಾ ಧರಿಸೀಗೋವಳರೊಡಗೂಡಿ
ತ್ಯಕ್ತಾ ವೈದಿಕ ಮಿಕ್ಕಾದವರು ನೆರೆದು ಜಯಜಯಾವೆನುತಿರೆ
ಯುಕ್ತಿವಂತರು ಯುಗಯುಗದಲ್ಲಿ ಇದೆ ಪರಿ ನೋಳ್ಪರು
ಭಕ್ತಿಗೊಲಿಪಾದು ಈ ಪರಿ ಭಕ್ತಿ ಮಾಡಿದಾ ಜನಕ್ಕೆ
ಮನಸಿನಲ್ಲಿ ಕನಸಿನಲ್ಲಿ
ಭುಕ್ತಿ ಮೊದಲಾದಾ ಸಂಪತ್ತು ನೀ ವಸುರಧೇನು ಇದ್ದಂತೇವೆ
ಭಕ್ತಿಗೊಲಿದುದು ಈ ಪರಿ ರಿಕ್ತಾ ರಿಗತಿ ಪ್ರಿಯಾ ಪ್ರತಿಕಾದೊಳಗೆ ಇದ್ದಾ
ಶಕ್ತಿಪ್ರದಾ ಚಂದ್ರಭಾಗ ನಿವಾಸಾ ವಿಜಯವಿಠಲ ಸಕಲಾ
ಭಕ್ತಿಗೊಲಿದು ಈ ಪರಿ ೧

**ಮಟ್ಟ**

ಎಣೆಗಾಣೆನು ರಂಗನ ಕರುಣಾಕಟಾಕ್ಷಕ್ಕೆ
ಮನದಲ್ಲಿ ನೆನಿಸಿದ್ದು ಸಲಿಸುವ ಸಂಭ್ರಮದಿ
ಕುಣಿಕುಣಿದಾಡುವನು ಪದಗತಿಯನು ಬಿಡದೆ
ಮಣಿಭೂಷಣದಿಂದ ಗೋಪಿರೆಡಬಲದಿ
ಮಿನುಗುತಿರೆ ಗೋಗಳು ಸುತ್ತಲು ಒಪ್ಪೆ
ಮುನಿ ಪುಂಡರೀಕನಿಗೆ ಅಂದೊಲಿದು ಬಂದಾ
ತನೆ ಈತನೆ ಕಾಣೊ
ಅನುಮಾನಗೊಳದೀರಿ ಆರ್ತಿಯ ಪೋಗಾದಿ
ಘನಮಹಿಮಾ ನಮ್ಮ ವಿಜಯವಿಠಲಾ
ಮನುಜರೊಳಗೆ ಮನುಜರೂಪ ಧರಿಸಿ ಮೆರೆವ ೨

**ತ್ರಿವಿಡಿ**

ಎಲ್ಲಿದ್ದರೇನಯ್ಯಾ ಭಕ್ತರಿಗೆ ಒಲಿವ ಶ್ರೀ
ವಲ್ಲಭನ ಪ್ರೀತಿ ಅತಿ ಮಿಗಿಲೂ
ಕಲ್ಲು ಎನಿಸಲ್ಲಾ ಅದರಲ್ಲಿ ಪ್ರಲ್ಹಾದನ್ನಾ
ಸೊಲ್ಲಿಗೆ ಬಂದಂತೆ ಬಂದ ಕಾಣೋ
ಎಲ್ಲಾವ ಜಾತಿಗಳು ಸುತ್ತಾ ಚಪ್ಪಳೆನಿಕ್ಕಿ
ನಿಲ್ಲಾದೆ ಕುಣಿವಾರು ದೇವನೊಡನೆ
ಬಲ್ಲಿದಾ ಹರಿಕಾಣೊ ಎಲ್ಲಿ ನೋಡಿದರೀತಗೆ
ಇಲ್ಲವೋ ಸಾಮ್ಯವಾಧಿಕ್ಯ ಇಹಪರದಲ್ಲಿ
ಎಲ್ಲಾ ಕ್ಷೇತ್ರದಕ್ಕಿಂತ ಇದೆ ಉತ್ತಮಾವೆನ್ನಿ
ಬಲ್ಲಾರು ಬೊಮ್ಮಾದಿ ಭಕ್ತರೆಲ್ಲ
ಗಲ್ಲಾ ಎರಡರ ಬೆಳಕು ಸೂರ್ಯ ಚಂದ್ರರಂತೆ
ಅಲ್ಲೆಲ್ಲ ತುಂಬಿದ ವೈಚಿತ್ರಿಕ

ಮಲ್ಲಾ ಮರ್ದನ ನಮ್ಮ ವಿಜಯವಿಠಲ ವಿಠಲಾ
ಎಲ್ಲೆ ಮಾಯಾದಾ ಬೊಂಬಿಯೊ ವರ್ಣಿಸಲಾರಿನೊ ೩

**ಅಟ್ಟ**

ನಿತ್ಯಸತ್ಯ ಕಾಮಾ ಪರಿಪರಿರೂಪದಲಿ
ಭೃತ್ಯರ ಸತ್ಯಕಾಮರಮಾಡಿ ಮನ್ನಿಸಿ
ಅತ್ಯಂತವಾಗಿ ಆಶಿಯ ಬಿಡಿಸಿ ಕೂಡ
ಹತ್ತೊಂದು ಇಂದ್ರಿಯಾ ಸುಖ ಬಿಡಿಸುವ ಜಾಣಾ
ತೊತ್ತಿನ ತೊತ್ತಿನ ಮಗನ ಮೊಮ್ಮಗ ನಾನು
ಎತ್ತಿ ಭವದಿಂದ ಕಡೆಗೆ ಹಾಕುವದಯ್ಯಾ
ಮೃತ್ಯು ನಿವಾರಣಾ ವಿಜಯವಿಠಲಾ ವಿಠಲಾ
ಸತ್ಯಸಂಕಲ್ಪಾ ನೀನಬಹುದೊ ಮತ್ತಹುದೊ ೪

**ಆದಿ**

ಪಾವನ್ನ ನಾನದೆ ಪೂವನ್ನ ನಾನಾದೆ
ಪಾವನ್ನ ಮೂರುತಿಯಾ ಪಾದದರುಶನದಿಂದ
ಭಾವದಲಿ ಇಂದು ನೆನೆಸಿದ ಯಾತ್ರಿಫಲ
ಪೂವಿನೊಳಗೆ ಇಟ್ಟುಕೊಟ್ಟಂತಾಯಿತೊ ಎನಗೆ
ದೇವನ್ನ ನಿಜರೂಹಾ ಸ್ವಪ್ನದಲ್ಲಿ ಕಂಡೆ
ಆವಜನ್ಮದ ಪುಣ್ಯ ಬಂದೊದಗಿತೊ ಸಿದ್ಧ
ಜೀವನ್ನಾ ಮುಕ್ತರೆಲ್ಲ ನಲಿದಾಡುವರು ಬಂದು
ಕೈವಲ್ಲ್ಯಾಗುವಕ್ಕೆ ಸಂಶಯ ಇನ್ನುಂಟೆ
ಗೋವಗೋವಳರಾಯಾ ವಿಜಯವಿಠಲಾ ವಿಠಲಾ
ಕಾವ ಕಲ್ಮಷ ಕಳೆದು ಕಳೇವರದೊಳಗಿದ್ದೂ ೫

**ಜತೆ**

ಕಂಡು ಧನ್ಯ ನಾನಾದೆ ಕುಲಕೋಟಿಗಳ ಸಹಿತ
ಪುಂಡರೀಕವರದಾ ವಿಜಯವಿಠಲಾ ವಿಠಲನಾ ೬

**೫೧**

**ಚಂದ್ರಕೌಂಸತ್ರಿಕಾಲ**

ವಂದೇ ಗೋವಿಂದ ಮಹಾನಂದಂ
ಸಿಂಧುಶಯನನಂದ ಕಂದ ಮುಕುಂದಂಪ

ಚಂದ್ರಭಾಗಾತಟ ಸುಂದರ ಮಂದಿರಾ
ಪುಂಡಲೀಕವರದ ಶ್ರೀ ಪಾಂಡುರಂಗ ೧

ಶೇಷಾಚಲವಾಸ ಶ್ರೀಶ ಸರ್ವೇಶಂ
ವಾಸವಾದಿ ವಂದ್ಯಾ ಶ್ರೀ ವೆಂಕಟೇಶಂ ೨

ಮಂಥದಾಮಧರ ಶ್ರೀ ಬಾಲಕೃಷ್ಣ
ಶಾಂತ ಮೂರ್ತಿ ಶ್ರೀ ಭೂಪತಿ ವಿಠ್ಠಲಮ್ ೩

೫೨

ವಂದೇ ವಿಠಲರಾಯ ಇಂದಿರೆ ಬಂದು
ನಿಂದು ಪಾಲಿಸೋ ಎನ್ನ ಇಂದ್ರನ ಇಂದ್ರಪ

ಪೂರ್ಣ ಜ್ಞಾನುತ್ಮ ಸುಪೂರ್ಣೈಶ್ವರ್ಯನೆ
ಪೂರ್ಣ ಪ್ರಭಾತ್ಮ ಸುಪೂರ್ಣ ಆನಂದ
ಪುರ್ಣ ತೇಜಾತ್ಮನೇ ಪೂರ್ಣ ಅದೋಷನೆ
ವನರುಹಭವನಿಂದರ್ಚಿತಧ್ಯೇಯ ವಿಭುವೆ ೧

ಶರಣು ಸರೋಜಮ ಸಮಕಟಿ ಕರಗಳು
ಸುರಪನೀಲಾಭ ಶ್ರೀ ತುಳಸಿಯ ಹಾರ
ಪುರುಷೋತ್ತಮ ವಿಭು ಖರದಕ್ಷ ವಾಮದಿ
ಪದಾರವಿಂದವು ಸರಸಿಜ ನಯನ ೨

ವೃತತಿಜಾಸನಪಿತ ಪ್ರಸನ್ನ ಶ್ರೀನಿವಾಸ
ಪ್ರಪತ ಪರಾತ್ಪರ ಹೃತ್ತಿಮಿರಾರ್ಕ
ನುತ ಜನಹಿತ ಕರಧನ ಭಕ್ತಿಪದ ಜಗನ್
ಮಾತೆ ರುಕ್ಮಿಣಿ ಸತ್ಯಭಾಮಾಪತೇ ನಮೋ ೩

೫೩

ವಿಠಲಯ್ಯ ವಿಠಲಯ್ಯ ಪ

ತಟಿತ್ಕೋಟಿ ನಿಭಕಾಯ ಜಗನ್ನಾಥ ವಿಠಲಯ್ಯಾ ‖ ಅ.ಪ ‖

ಭಜಿಸುವೆ ನಿನ್ನನು ಅಜಭವ ಸುರನುತ
ಭಜಕಾಮರ ತರು ಕುಜನ ಕುಠಾರಾ ೧

ನೀ ಕರುಣಿಸದೆ ನಿರಾಕರಿಸಲು ಎನ್ನ
ಸಾಕುವರಾರು ದಯಾಕರ ಮೂರುತಿ ೨

ಶರಣಾಗತರನು ಪೊರೆವನೆಂಬ ತವ
ಬಿರುದು ಕಾಯೋ ಸಿರಿವರ ಜಗನ್ನಾಥ ೩

## ಹರಿದಾಸರ ಪಾಂಡುರಂಗ ವಿಠಲ (೮)

**೫೪**

ವಾಯುಸುತನ ತಂದು ಪೂಜಿಪ ತಂದೆ ಮುದ್ದು
ಮೋಹನ ವಿಠ್ಠಲದಾಸರಿಗೆರಗಿ
ಪ್ರೇಮದಿಂದ ಉರಗಾದ್ರಿವಾಸ ವಿ -
ಠ್ಠಲದಾಸರ ಪಾದಕೊಂದಿಸುತ ೧

ಇಂದಿರೇಶನನು ಚಂದದಿ ಪೂಜಿಸಿ
ಮಂದಮತಿಗಳನುದ್ಧರಿಪ
ತಂದೆ ವೆಂಕಟೇಶ ವಿಠಲದಾಸರಿ -
ಗೊಂದಿಸಿ ಬೇಡುವೆನನವರದ ೨

ಕಲಿಯುಗದಲಿ ಹರಿಲೀಲೆ ಪೊಗಳಲು
ಸುಲಭ ಮಾರ್ಗವನು ತೋರಿರುವ
ಪವನಾಂತರ್ಗತ ಕಮಲನಾಭ ವಿ-
ಠ್ಠಲನ ಪ್ರಾರ್ಥಿಸುತಲನುದಿನವು ೩

ವರಗಣಪತಿ ನಿನ್ನ ಚರಣಕೆ ನಮಿಸುವೆ
ಕರುಣದಿ ವರಗಳ ಕರುಣೆಸೆಂದೆನುತಪ

ಇನಕುಲತಿಲಕನು ವನಧಿಯ ಬಂಧಿಸೆ
ಘನಮಹಿಮನು ನಿನ್ನ ಒಲಿಸಿದೆನೆನುತ ೧

ಪಾಂಡುನಂದನ ನಿನ್ನ ಛಂದದಿ ಸ್ತುತಿಸಲು
ಛಂದದ ವರಗಳ ಅಂದು ನೀಡಿದನೆ ೨

ಕಮಲನಾಭ ವಿಠ್ಠಲನೊಲಿದ ಸಚ್ಚರಿತ್ರವ
ಸುಲಭದಿ ನೀ ನುಡಿಯ್ಯ ಸಮಿಸುವೆ ನಿನಗೆ ೩

**ಆರ್ಯ**

ಒಂದಾನೊಂದಿನ ಪಂಢರಿಪುರದಲಿ
ಇಂದುಮುಖಿಯೊರ್ವಳು ತಾನು
ಕುಂದರಿಲ್ಲದಲೆ ತವಕಿಸುತಲಿ ಗೋ -
ವಿಂದನ ಮುದದಿಂದ ಪ್ರಾರ್ಥಿಪಳು

ಬಾಲಗೋಪಾಲ ಸುಶೀಲ ಸಜ್ಜನ ಪಾಲಪ

ಶ್ರೀಲೋಲ ಗುಣಶೀಲ ಶ್ರೀ ತುಳಸಿಯ ಮಾಲ
ಶ್ರೀ ಲಕುಮಿಯ ಲೋಲ ಬಾಲ ಸುರಮುನಿ ಪಾಲ|| ಅ.ಪ ||

ಕುಂದರಿಲ್ಲದ ಬಹುನಿಂದ್ಯದ ಜನುಮವ
ಪೊಂದಿದೆ ವ್ಯರ್ಥದಿ ಇಂದಿರೆ ರಮಣನೆ ೧

ಬಾಲಲೀಲೆಗಳಿಂದ ಬಾಲ ಹಾಡುತಲಿರೆ
ಲಾಲಿಸಿ ಹರುಷಿನ ಕಾಲ ಕಾಣೆನೊ ದೇವ ೨

ಅಂಬೆಗಾಲಿಕ್ಕುತ ಕಂದರಾಡುತ ಬರೆ
ಚಂದದಿಂದೆತ್ತುವಾನಂದವಿಲ್ಲವೋ ದೇವ ೩

ಕಡಗ ಗಗ್ಗರಿಗೆಜ್ಜೆ ಘಲುರೆಂಬೊನಾದವ
ಧ್ವನಿ ಕೇಳದ್ಹೋದ ಈ ಕಿವಿಗಳು ವ್ಯರ್ಥವು ೪

ಪಾಂಡುರಂಗನೆ ನಿನ್ನ ನಂಬಿ ನಾ ಸ್ತುತಿಸುವೆ
ನಿಂದೆಯ ಕಳದೆನ್ನ ಚಂದದಿಂ ಪಾಲಿಸೊ ೫

ಶ್ರೀಶ ಶ್ರೀಮಾಧವ ಕೂಸಿನ ಪಾಲಿಸಿ
ದಾಸಿಯ ಮನದಾಸೆ ನೀ ಸಲಿಸೈ ದೇವ ೬

ಬಾಲಕನದಾರೆ ಆಳನು ಮಾಡುವೆ
ಬಾಲಕಿಯಾದರೆ ಧಾರೆಯನೆರೆಯುವೆ ೭

ಸಾಸಿರ ನಾಮನೆ ಭೂಸುರ ಪಾಲನೆ
ಕ್ಲೇಶ ನಾಶಕ ಕೃಷ್ಣ ನಾಸಿರಬಾಗುವೆ ೮

ಕಮಲನಾಭ ವಿಠ್ಠಲ ನಮಿಸಿ ಬೇಡುವೆ ನಿನ್ನ
ಶ್ರಮವ ಪರಿಹರಿಸೆನ್ನ ಭ್ರಮೆಯ ತಪ್ಪಿಸೊ ದೇವ೯

**ಭಾಮಿನಿ ಷಟ್ಪದಿ**

ಕಂದರಾಡುತ ಬರಲು ಮೋದದಿ
ಚಂದದಿಂ ಮುದ್ದಿಸುತ ಹರುಷದಿ
ಅಂದವಾಗಿಹ ಮುಖವ ನೋಡುವ ಭಾಗ್ಯವಿಲ್ಲೆನಗೆ
ಅಂದಿಗೆ ಕಾಲ್ಗೆಜ್ಜೆ ಘಲುರೆನೆ
ಮಂದಹಾಸಿದಿ ಬರುವ ಶ್ರೀಹರಿ
ಅಂದತೋರುವ ಪುತ್ರರಿಲ್ಲದ ಜನ್ಮವಿದು ವ್ಯರ್ಥ

**ಆರ್ಯ**

ಈ ಪರಿ ಬಳಲುತ ಪ್ರಾರ್ಥಿಪ ಬಲೆಯ
ಆ ಪರಮಾತ್ಮನು ನೋಡುತಲಿ
ಶ್ರೀಪತಿ ದಯ ಮಾಡಿತ್ತನು ವರವನು
ಆ ತರುಣಿಯು ಹರುಷವ ತಾಳಿ
ನೋಡಿ ಮಾಯವ ಪಾಂಡುರಂಗ ಆಡಿದಾಟವ
ಆಡಿಪಾಡಿ ಪೊಗಳುವರಿಗೆ ಬೇಡಿದಿಷ್ಟ ಕೋಡುತಲಿಹನುಪ

ಸೋಸಿನಿಂದ ಬಂದನಾಗ
ಮಾಸ ಮೂರರಲ್ಲಿ ಹರಿಯು
ಆ ಸತಿಯಳ ಮಂದಿರದಿ ಉ-
ಲ್ಲಾಸದಿಂದ ಮೆರೆಯುತಿಹನು ೧

ವಾವೆ ವರಸ ಇಲ್ಲದ್ದರಿಯು
ಮಾಮಿ ಮಾಮಿ ಎಂದು ಬಂದು
ಕಾಮಿನಿಯಳ ಮನ ಭಾವ
ಸ್ವಾಮಿ ತಿಳಿದು ನಿಂದನಾಗ ೨

ಮಾರಜನಕ ಮನ ಹರುಷದಿ
ಆರು ಮಾಸದಲ್ಲಿ ತ್ವರದಿ
ಮಾರಮಣನ ವರ ಎಚ್ಚರದಿ
ಸಾರುತಿಹೆನು ಸಲಿಸು ಮುದದಿ ೩

ಶ್ರೀ ರಮೇಶ ಬಿಡದೆ ತಿರುಗೆ
ಮೂರು ಮೂರು ಮಾಸವಾಗೆ
ಸಾರಿ ಪೇಳಿ ನುಡಿದ ಹೀಗೆ
ಭಾರಿ ವರವ ಸಲಿಸು ಕೊನೆಗೆ ೪

ಸರಸಿಜಾಕ್ಷ ಬಂದು ತನ್ನ
ಸರಿಯ ಗೆಳೆಯರಂತೆ ಇರಲು

ಕಮಲನಾಭ ವಿಠ್ಠಲನೆಂದು
ಕಮಲ ಮುಖಿಯ ತಿಳಿಯದಿರಲು ೫

**ಆರ್ಯ**

ಮಧುಸೂದನ ಈ ಪರಿ ಕ್ರೀಡಿಸುತಿರೆ
ಸುದತಿ ಮಣಿಯ ಶುಭಲಗ್ನದಲಿ
ಪಡೆದಳು ಶಿಶುರತ್ನವನೆಂದೆನುತಲಿ
ಸಡಗರದಲ್ಲಿ ಬಂದನು ಹರಿಯು

ಮಾತನಾಡ ಬಂದ ಗೋವಿಂದ
ಮಾತನಾಡಿ ಬಂದಪ

ಮಾತರಿಶ್ವಪ್ರೀಯ ಮಾತುಳಾಂತಕ ಹರಿ
ಸೋತನೊ ಭಕ್ತರ ಪ್ರೀತಿಗೆನ್ನುವ ಹರಿ॥ ಅ.ಪ ॥

ಸುಂದರಾಂಗ ಅರವಿಂದ ಮುಕುಂದನು
ಒಂದು ತಿಂಗಳಲಿ ಬಂದು
ಸುಂದರಿ ಕೊಡು ನಿನ್ನ ಛಂದದ ಶಿಶುವೆನೆ
ನಿಂದರೆ ಕೊರಳು ಚಂದದಲಿ ಕೊಡುವೆ ನೆನೆ ೧

ಕೆಲವು ದಿನವು ಕಳೆಯಲು ಕಮಲಾಕ್ಷನು
ಕಳುಹಿ ಕೊಡೆಲೆ ಶಿಶುವೆಂದ
ನಳಿನಾಕ್ಷಿಯು ನುಡಿದಳು ಶ್ರೀಕೃಷ್ಣಗೆ
ಕುಳಿತಾಡುವ ಹರುಷವ ನೋಡುವೆನೆನೆ ೨

ಖಗವರವಾಹನ ಅಗಣಿತ ಮಹಿಮನು
ಮಗುವನು ಕೇಳಲು ಬಂದ
ನಗರಧರನಿಗೆ ವಂದಿಸುತಲಿ ನುಡಿದಳು
ಬಗೆ ಬಗೆ ಆಟವ ನೋಡುವೆನೆನುತಲಿ ೩

ಕಡಲಶಯನ ಹರಿ ಸಡಗರದಿಂದಲಿ
ಗಡಿ ಬಿಡಿ ಮಾಡುತ ಬಂದ
ಪೊಡವಿಗೊಡೆಯನ್ನು ಅಡಿಗಳಿಗೆರುಗುತ
ನಡೆದಾಡಲಿ ಶಿಶುವೆನ್ನಲು ಹರುಷದಿ ೪

ಕಮಲಾಕ್ಷನು ಕರೆಕರೆಯನು ಮಾಡದೆ
ಕನಿಕರ ತೋರಿದನಂದು

ಕಮಲನಾಭ ವಿಠ್ಠಲನೆಂದರಿಯದೆ
ವನಿತೆಯು ಕಾಲವ ಕಳೆಯುತಲಿರಲು ೫

**ಆರ್ಯ**

ತರಳೆಯ ಆಡಿದ ಗರುವದ ಮಾತನು
ಪರಮಾತ್ಮನು ಕೇಳುತಲಾಗ
ಕರೆ ಕರೆ ಮಾಡದೆ ತೆರಳಿದನೀಕೆಯ
ಗರುವವ ಮುರಿಯುವೆನೆಂದೆನುತ ೧

ಈ ಪರಿ ವರುಷಗಳಾಗಲು ತರಳೆಗ
ಶ್ರೀಪತಿ ನೋಡುತ ಸುಕುಮಾರಿಗೆ
ಆಕೆಯ ಪಿತ ನೋಡುತ ಸುಕುಮಾರಿಗೆ
ವಿವೇಕದಿ ವರವ ವಿಚಾರಿಸಲು ೨

**ಕಂದ**

ನುಡಿದರು ಭೃತ್ಯರು ನಮಿಸುತ
ಹುಡುಗಿಗೆ ತಕ್ಕವರವಿಹುದೆನುತ
ನುಡಿಯಲು ಹರುಷವ ತಾಳುತ
ನಡೆಸಲು ನಿಶ್ಚಯಿಸಿದ ಲಗ್ನವು ತಾ

**ಆರ್ಯ**

ಈ ಪರಿ ವರ ನಿಶ್ಚಯವನು ಮಾಡುತ
ಭೂಪನು ಬಲು ಸಂತೋಷದಲಿ
ಆ ಪರಮಾತ್ಮನ ಮಹಿಮೆಯ ತಿಳಿಯದೆ
ಈ ಪರಿ ವಿವಾಹೋತ್ಸವ ನಡೆಸೆ ೧

ಬರೆಸಿದ ಲಗ್ನಪತ್ರಿಕೆಗಳ ತವಕದಿ
ವರನ ಬಂಧು ಜನಗಳಿಗೆಲ್ಲಾ
ಪರಮೋಲ್ಲಾಸದಿ ಬರಬೇಕೆನುತಲಿ
ತ್ವರಿತದಿ ಲಗ್ನವ ಇಡಿಸಿದನು ೨

ಬಂದರು ಬೀಗರು ಪರಮಾನಂದದಿ
ಚಂದದ ಪಂಢರಾಪುರದಲ್ಲಿ
ಮಂದಿಗಳೆಲ್ಲರು ನೆರೆದ ಸಮಯದಿ ಗೋ-
ವಿಂದ ಯೋಚಿಸುತ ಮನದಲ್ಲಿ ೩

ಏನಿದು ಮಾಮಿಯೆ ಈ ವಿಧ ಸೌರಣೆ
ಯಾರಿಗೆ ನೀಡುವೆ ಕನ್ಯೆಯನು
ಆಡಿದ ಮಾತನು ನಡೆಸದಿರುವದು
ನಾರಿ ನಿನ್ನಪರಾಧವಿದು ೪

ಕಮಲಾಕ್ಷಿಯ ಕಣ್ತೆರದು ನೋಡಿದಳು
ಕಮಲಾಪತಿ ಶ್ರೀಹರಿಯನ್ನು
ಭ್ರಮೆಗೊಳ್ಳುತ ನಿರ್ಭಯದಿಂ ನುಡಿದಳು
ಕಮಲನಾಭ ವಿಠ್ಠಲನೊಡನೆ ೫

**ಕಂದ**

ಕೇಳಲೊ ನಿಮ್ಮ ಮಾವನನು
ತಾಳದೆ ನೀಡುವ ಕನ್ಯೆಯನೆನಲು
ಕೇಳುತ ಕೋಪದಿ ನುಡಿದನು
ಕಾಳಾಹಿವೇಣಿಯನಪಹರಿಸುವೆನೆನುತಾ

**ಆರ್ಯ**

ಇಂದಿರುಳೇ ಲಗ್ನವು ನಡೆಯುವದು
ಎಂದೆನುತಲಿ ಬಲು ಸಂಭ್ರಮದಿ
ಮಂದಿಗಳೊಳು ಆನಂದದೊಳಿರುತಿರೆ ದೇ-
ವೇಂದ್ರನಿಗಾಜ್ಞಾಪಿಸಿದ ಹರಿಯು
ಹರಿಯಾಜ್ಞೆಯಂತೆ ಚರಿಸುವುದಿದು
ಪರಮ ಧರ್ಮವುಪ

ಇರುಳು ಲಗ್ನ ಸಮಯಕೆ
ಭರದಿ ಮಳೆಯ ಕರೆಯುತಿರೆ
ಹರಿಯು ವರನ ರೂಪದಿಂದ
ಭರದಿ ಬಂದನು ೧

ಮೀರುವದು ಶುಭ ಮುಹೂರ್ತವು
ಮೂರುಜನವು ಬಂದಿಹೆವು
ಧಾರೆಯೆರೆದು ಧನ್ಯರಾಗಿ
ರೆಂದು ನುಡಿದನು ೨

ಕಮಲಮುಖಿಯರೆಲ್ಲರು
ಕಮಲನಾಭ ವಿಠ್ಠಲನಿಗೆ

ನಮಿಸಿ ಪಾದವ ತೊಳೆದು
ಕನ್ಯದಾನ ಮಾಡಲು ೩

ಧಾರೆಯನೆರೆದರಂದು ಶ್ರೀಧರಗೆ ಕನ್ಯೆಯಪ

ಗಂಗೆಯುದಕದಿ ಪಾದಂಗಳ ತೊಳೆಯುತ
ಶೃಂಗರಿಸಿದ ಮುದ್ದುಮಂಗಳ ಮೂರುತಿಗೆ ೧

ತಂಗಿ ಸುಭದ್ರೆ ಕಳಸಗಿತ್ತಿ ಪೂಜಿಸೆ
ಮಂಗಳಾಷ್ಟಕವು ಆಚಾರ್ಯರು ಪಠಿಸಲು ೨

ಮಂಗಳಸೂತ್ರವ ಕಟ್ಟಿ ಮಂಗಳಾಂಗಿಗೆ ಕಾ -
ಲುಂಗುರ ಮುಡಿ ಉಂಗುರಗಳ ಅಲಂಕರಿಸುತ ೩

ಗುಡಿಜೀರೆಗೆಯು ವಧುವರರ ಸೆರಗಿಗೆ ಕಟ್ಟಿ
ಮದವಣಿಗರ ಸೆರಗಿಗೆ ಸೆರಗ ಗಂಟನೆ ಹಾಕಿ ೪

ಶಾವಿಗೆ ಪರಮಾನ್ನ ಮೊದಲಾದ ಭಕ್ಷ್ಯಗಳಿಂದ
ಬೇಗ ಭೂಮ ಮಾಡಿ ಆಗ ಪವಡಿಸಿದರು ೫

ಪುಣ್ಯದಂಪತಿಗಳು ಧನ್ಯರಾದೆವು ಎಂದು
ಕನ್ಯೆಯ ವರನಿಗೊಪ್ಪಿಸಿದರು ಹರುಷದಿ ೬

ಕನಕ ಗರ್ಭನಿಪಿತ ಕಮಲನಾಭ ವಿಠ್ಠಲ
ವನಿತೆಯನೊಡಗೂಡಿ ಘನಹರುಷದೊಳಿರೆ ೭

**ಆರ್ಯ**

ನಾಕೇಶನು ವೃಷ್ಠಿಯ ನಿಲಿಸಲು
ಭೀಕರ ಶಬ್ದಗಳಡಗಿದವು
ಆ ಕಾಲದಿ ಬಂದರು ಬೀಗರು ಬಹು
ಜೋಕಿನಿಂದ ವಧು ಮಂದಿರಕೆ
ಹೊರಟಿತು ನಿಬ್ಬಣ ಸಮರಾತ್ರಿಯೊಳು
ಪರಿ ಪರಿ ವಾದ್ಯದ ಪರಿ ವರ್ಣಿಸಲು
ಪರಶಿವನೊಬ್ಬನೆ ಬಲ್ಲನು ಈ ಪರಿ
ಅರುಹುವದಸದಳವು ೧

ಆನೆ ಮೇಲಂಬಾರಿಗಳಲ್ಲಿ
ಮೇನೆ ಪಲ್ಲಕ್ಕಿಗಳೊಳು ಸಹಿತ

ಭಾಳಜನ ಕುಳಿತಿರುವ ರಥಗಳು
ಸಾಲಲಿ ಬರುತಿರಲು ೨

ಮದ್ದು ಬಾಣ ಬಿರುಸಿನ ಧ್ವನಿಗೆ ಆ
ಲ್ಲಿದ್ದ ಶುಕಪಿಕ ಪಕ್ಷಿಗಳೆಲ್ಲ
ಎದ್ದು ತಮ್ಮ ಸ್ಥಳಗಳ ಬಿಟ್ಟು
ಬಿದ್ದವು ಎಲ್ಲೆಲ್ಲೊ ೩

ಬೇರಿ ಸೌಬತ್ತಿನ ಧ್ವನಿ ಕೇಳಿ
ಊರವರೆಲ್ಲಾ ಚೋದ್ಯವ ಪಟ್ಟು
ನಾರಿಯರುಪ್ಪರಿಗೆಗಳನೆ ಏರಿ
ನೋಡುತ ನಿಂದಿರಲು ೪

ರಂಭೆಯೂರ್ವಶಿ ಮೇನಕೆಯರನು
ನಿಂದಿಸುವಂಥ ಸುಂದರಿಯರನು
ಕಂಡು ಮೋಹಿತರಾದರು ಪುರದ
ಮಂದಿಗಳಾಕ್ಷಣದಿ ೫

ನೂರಾರು ಕೈದೀವಟಿಗೆಗಳು ಆ-
ಪಾರದಂದಣ ಸಂದಣಿಯಿಂದ
ಸಾಲು ಸಾಲಗೈತಂದರು ಮ-
ದ್ದಾನೆಗಳಂದದಲಿ ೬

ಈ ಪರಿ ವೈಭವದೊಳು ಬರುತಿರಲು
ಭೂಪನು ನಿದ್ರೆಯ ಸುಖದೊಳಗಿರಲು
ಶ್ರಿ ಪತಿ ಕಮಲನಾಭ ವಿಠ್ಠಲ
ಈ ಪರಿ ಪೊಗಳಿದರು ೭

**ಭಾಮಿನಿ ಷಟ್ಪದಿ**

ದೇಶ ದೇಶದೊಳಿಹ ಜನಂಗಳ
ಆಸು ಕಳುಹುತ ಕರೆಯ ಕಳಿಸಿ ಉ-
ದಾಸೀನವ ಮಾಡುವದು ಧರ್ಮವೆ ಲೇಸು ತೋರುವದೆ
ಭಾಸುರಾಂಗಿಯ ಕೊಡುವ ಜನರಿಗೆ
ನೀತಿ ಕಲಿಸುವದಾತ ನಿಶ್ಚಯ
ಯಾತಕೀಪರಿ ಮಾಡಿದಿಯೋ ಬಲುಮೂರ್ಖ ನೀನೆಂದೂ

ಪೊರೆಯೊ ದೇವನೇ ನೀ ಪೊರೆಯೊ ದೇವನೆ
ಉರಗಾದ್ರಿವಾಸನೆಪ

ದಿಟ್ಟ ಮನವಿ ನಿನ್ನ ಮುಟ್ಟಿ ಭಜಿಪರನು
ಶ್ರೇಷ್ಠರ ಮಾಡುತ ಕಷ್ಟಗಳ್ಹರಿಸುವ
ದುಷ್ಟರ ಮರ್ದಿಸಿ ಶಿಷ್ಟರ ಪೊರೆಯುವ
ಇಟ್ಟಿಗೆ ಮೇಲೆ ನಿಂತ ವಿಠ್ಠಲ ಮೂರುತಿ ೧

ಆಕಳಂಕ ಮಹಿಮನೆ ಶುಕಮುನಿಸೇವ್ಯನೆ
ಶುಕ ಶೌನಕ ನಾರದ ಮುನಿವಂದ್ಯನೆ
ಭಕುತಿಯ ಮಾರ್ಗವನರಿಯೆನು ಶ್ರೀಹರೆ
ಶುಕಭಾಷಣದಿಂ ಸ್ತುತಿಸುವೆ ನಿನ್ನನು ೨

ಮಾನಾಪಮಾನವು ನಿನ್ನದೊ ಮಾಧವ
ಜ್ಞಾನಿಗಳರಸನೆ ಭಾನುಪ್ರಕಾಶನೆ
ಶ್ರೀನಿಧೆ ಕಮಲನಾಭ ವಿಠ್ಠಲ ಹರೇ
ಧ್ಯಾನಿಸುವ ಹೃದಯಾಬ್ಜ ಮಂದಿರನೆ ೩

**ಆರ್ಯ**

ಈ ವಿಧದಿಂದ ನರಹರಿಯನು ಭಜಿಸುತ
ಆ ವಧುವಿನ ಜನರನು ಜರಿದು
ಕೋಪತಾಪಗಳ ಸಹಿಸದೆ ಹೊರಟರು
ಆ ಪುರ ಬಿಡುತ ಬೇಗರು ಜವದಿ ೧

ಮದುವೆಯ ಕಾರ್ಯವ ನೆರವೇರಿಸಿ ಆ-
ಮುದದಿಂದಲಿ ಮಲಗಿದ ನೃಪನು
ಉದಯವಾದನಂತರದಲಿ ನೋಡಲು
ವಧುವರರನು ಕಾಣದೆ ಇರಲು ೨

ಕಮಲಾಕ್ಷಿಯೆ ಕಣ್ಮರೆಯಾಗಲು ಕಾ-
ರಣವೇನಿದು ಬಲ್ಲೆಯ ಎನುತ
ಕಳವಳ ಪಡುತಿಹ ದಂಪತಿಗಳ ಮನ
ಕಮನಾಭ ವಿಠ್ಠಲ ತಿಳಿದ ೩

**ಭಾಮಿನಿ ಷಟ್ಪದಿ**

ಅಷ್ಟರಲ್ಲಿಯೆ ವಿಠ್ಠಲನ ಗುಡಿ
ಮೆಟ್ಟಲೇರುತ ಅರ್ಚಕನು ಕದ
ಮುಟ್ಟಿ ತೆಗೆಯುವ ಸಮಯದಲಿ ಆಶ್ಚರ್ಯವನೆ ಕಂಡು
ಮೆಟ್ಟಿ ಬೀಳುತ ಒದರಿದನು ಬಲು
ಗಟ್ಟಿ ಸ್ವರವನ್ನು ಕೇಳುತಲಿ ಆ
ಪಟ್ಟಣದ ಜನರೆಲ್ಲ ಬಂದು ವಿಚಾರ ಮಾಡುತಿರೆ

ನೋಡಿರಿ ನೋಡಿರಿ ನೋಡಿರಿ ಹರಿ ಶರ-
ಣಾಗತ ಜನರನು ಪೊರೆವದನುಪ

ಪಾಡಿ ಪೊಗಳಿ ಕೊಂಡಾಡುವವರ ಮುಂ-
ದಾಡುತ ನಲಿಯುವ ಪರಿ ಇದನು॥ ಅ.ಪ ॥

ಬಂದರು ಆ ಪುರ ಮಂದಿಗಳೆಲ್ಲಾ ಗೋ-
ವಿಂದನು ಆಲಯದಲಿ ನಿಂದು
ಇಂದು ವದನೆಯಳ ಚಂದವ ನೋಡುತ
ವಂದಿಸಿ ದೇವನ ನಮಿಸುತಲಿ ೧

ಈ ಪರಿ ವಾರ್ತೆಯ ಕೇಳುತ ತ್ವರದಲಿ
ಆ ಸತಿ ಪತಿಯರು ನಡೆ ತಂದು
ಶ್ರೀ ಪತಿಯನು ಒಡಗೂಡುತ ನಿಂದಿಹ
ವೈಖರಿ ನೋಡುತ ಬೆರಗಾಗಿ ೨

ಏನಿದು ಕೌತುಕ ಮಾನಿನಿಯಳ ಮದು-
ವ್ಯಾದನು ಎನುವರು ಪುರಜನರು
ಶ್ರೀವರ ನಿನಗೀಕೆಯ ಕೊಡುವದು
ಹೀನತೆಯಲ್ಲವೆ ಮಾಧವನೆ ೩

ಗುಡ ಜೀರಿಗೆ ಸೆರಗಿಗೆ ಕಟ್ಟಿರುವದು
ಸೆರಗಿಗೆ ಸೆರಗಗಂಟ್ಹಾಕಿಹನು
ವದನ ಹೃದಯ ಶಾವಿಗೆ ಪರಮಾನ್ನ ಪಾ
ದದ ಅರಿಶಿನ ಹೊಳೆ ಹೊಳೆಯುವದು ೪

ಕರತಂದವರ್‍ಯಾರಿಲ್ಲಿಗೆ ನಿನ್ನನು
ಸುಮನಸ ವಂದ್ಯನ ಬಳಿಯಲ್ಲಿ
ಕಮಲ ಮುಖಿಯೆ ಸರಿಯಲ್ಲವು ಈ ಪರಿ
ಕಮಲನಾಭ ವಿಠ್ಠಲ ಬಲ್ಲ ೫

ಈ ಪರಿಯಿಂದಲಿ ಮಾತಾಪಿತೃಗಳು
ಆ ತರುಣಿಯು ಕೇಳುತಲಿರಲು
ಆ ಪುರಜನಗಳು ಚೋದ್ಯವ ಪಡುತಲಿ
ಶ್ರೀ ಪತಿಯು ನೋಡುತಲಿರಲು
ನೀವೇ ಧಾರೆಯನೆರಿದಿಹಿರಿನ್ನು ನಿರ್ಭಯದಿಂ
ನಿದ್ರಿಸುತಿಹ ಸಮಯದಿ ಶ್ರೀವರ ಎನ್ನನು
ಕರೆ ತಂದಿಹನು ತೋರದೆ ನಿಮಗಿನ್ನು

**ಆರ್ಯ**

ನಡಿ ನಡಿ ಸುಕುಮಾರಿಯೆ ನಿನಗಿದು
ತರವಲ್ಲವು ಇಂದಿನ ಕಾರ್ಯ
ಮದುವೆಯ ಗಂಡನು ಶಿಲೆಯಾಗಿರುತಿರೆ
ಮುದ ತೋರುವುದಿಲ್ಲವು ಎನಗೆ

ಪತಿ ನುಡಿಗಳ ಕೇಳುತಲಾಕ್ಷಣದಿ
ಸತಿಗಾಕ್ಷಣ ಜ್ಞಾಪಿಸಿದನು ಹರಿಯು
ಮತಿಹೀನಗಳು ನಾ ಮಾಡಿದ ತಪ್ಪು
ಅತಿಶಯವಾಗಿಹುದು

**ಆರ್ಯ**

ಏನಿದು ನಿನ್ನಯ ನುಡಿಗಳು ಎನಗದು
ಮಾನಿನಿ ಬಿಡದಲೆ ತಿಳುಹುವದು
ಮಾನಾಪಮಾನವು ಸಮವು ಇಬ್ಬರಿಗು
ಮಾಣದೆ ಸಂಶಯ ಬಿಡು ಮನದಿ

ಕೇಳುತಲಾ ನುಡಿ ಪೇಳಿದಳೆಲ್ಲವು
ಬಾಲಕಿ ಉದಿಸಲು ಬೇಡಿದ ವರಗಳ
ಆಡಿದ ನುಡಿ ನಡೆಸದಿರಲು
ಶ್ರೀಧರ ಮಾಡಿದ ಮಾಯವನು

**ಆರ್ಯ**

ಹಾಗಾದರೆ ಈಗೇನು ಮಾಡುವಿ
ಬಾಲಕಿಯನು ಕರತರದಿರಲು
ನಾವಿನ್ನಾದರು ಲಾಲಿಸಿ ಕಾಲವ
ಸುನುರಾಗದಲಿ ಕಳೆಯುವುದು

ಹಾಗೆನ್ನಲು ಬಾರದು ಮಾಧವನಿಗೆ
ಬಾಲಕಿಯನು ಅರ್ಪಿಸುತಲಿ ಮುದದಿ
ಬಾಲಗೋಪಾಲನ ಚರಣವ ನಂಬಲು
ತಾ ಒಲಿವನು ಭಕ್ತಿಗೆ ಮೆಚ್ಚಿ

**ಆರ್ಯ**

ಕಡು ಹರುಷದಿ ಕಾಮನ ಪಿತನಿಗೆ ತನ್ನ
ಸುದತಿ ಮಣಿಯನರ್ಪಿಸಿ ಮುದದಿ
ಕರಗಳ ಜೋಡಿಸಿ ಕಮಲನಾಭ ವಿ
ಠ್ಠಲನ ಸ್ಮರಿಸುತ ಕೊಂಡಾಡಿದನು

**ಭಾಮಿನಿ ಷಟ್ಪದಿ**

ಪಾಪ ರಹಿತನೆ ಪರಮ ಪುರುಷನೆ
ಆ ಕಮಲ ಸಂಭವನ ಜನಕನೆ
ನಾಕ ಪಾಲಕ ವಂದ್ಯ ಚರಣನೆ ನವನೀತ ಕದ್ದವನೆ
ನರಕ ಮರ್ದನ ಯದುಕುಲೇಶನೆ
ಮದನ ಮೋಹನ ರುಕ್ಮಿಣಿ ಪ್ರಿಯ
ಖಗನ ಹೆಗಲು ಏರಿ ಮೆರೆದನೆ ಕರುಣಿಪುದು ಎನ್ನ

ಪಂಢರಿಪುರ ಪಾಂಡುರಂಗ ಪಾಲಿಪುದು
ಭಂಗವ ಬಿಡಿಸಿ ಉದ್ಧರಿಸಿ ರಕ್ಷಿಪುದುಪ

ತಂಡ ತಂಡದ ಜನ ಬಂದು ಸೇವಿಸುವರು
ಪುಂಡರೀಕಗೊಲಿದವ ನೀನಹುದು॥ ಅ.ಪ ॥

ವಾರಿವಿಹಾರನೆ ಭಾರ ಪೊತ್ತವನೆ
ಕೋರೆ ತೋರುವನೆ ಕರುಳ್ಹಾರ ಹಾಕಿದನೆ
ಮೂರಡಿ ಭೂಮಿಯ ಬೇಡಿ ಶೂರರ ಗೆಲಿದು
ವಾರಿಧಿಯನೆ ಕಟ್ಟಿ ನಾರಿಯ ತಂದು
ಹಾರುತ ಕಾಳಿಯ ಮಡುವೆ ಕಲಕಿ ತ್ರಿಪು-

ರಾರಿ ಎನಿಸಿಹ ಹಯವೇರುತ ಮೆರೆದೆ ೧

ಅಗಣಿತ ಮಹಿಮ ಶ್ರೀ ಅನಿರುದ್ಧದೇವ
ಪರಮ ಪುರುಷ ಕಾಯೊ ಪ್ರದ್ಯುಮ್ನದೇವ
ಸರ್ವವ್ಯಾಪಕನೆ ಸಂಕರ್ಷಣದೇವ

ವಿಶ್ವ ಮೂರುತಿ ಶ್ರೀಶ ಶ್ರೀವಾಸುದೇವ
ನಾರದ ಮಂದ್ಯ ನಾರಾಯಣ ರಕ್ಷಿಸು
ಶಾಂತಿ ಕೃತಿ ಜಯ ಮಾಯ ಲಕ್ಷ್ಮೀರಮಣನೆ ೨

ಇಟ್ಟಿಗೆ ವಾಸ ಶ್ರೀ ವಿಠ್ಠಲಮೂರ್ತಿ
ಮುಟ್ಟಿ ಭಜಿಪರಘ ನಷ್ಟವ ಮಾಳ್ವೆ
ಸೃಷ್ಟಿಯೊಳಗೆ ಮಹಶ್ರೇಷ್ಠನೆಂದೆನಿಪೆ
ವಿಠಲ ವಿಠಲ ವಿಠೋಬ ಎಂದೆನಿಪೆ
ಇಷ್ಟ ಭಕುತರಿಗೆ ಕೊಟ್ಟು ವರವ ಕಾಯ್ವೆ
ರಕ್ಷಿಸಿ ಕಮಲನಾಭ ವಿಠ್ಠಲನೆ ೩

**ಆರ್ಯ**

ಗರುಡಗಮನ ನಾರಾಯಣ ರಕ್ಷಿಸು
ಅರಿಯದ ಅಜ್ಞಾನಿಯನೀಗ
ಸ್ಮರಪಿತ ವಂದಿಪೆ ಕರುಣಿಸು ಎನ್ನನು
ಪರಿ ಪರಿ ಅಪರಾಧವ ಕ್ಷಮಿಸು ೧

ಪತಿ ಈ ಪರಿ ಹರಿಯನು ಪ್ರಾರ್ಥಿಸುತಿರೆ
ಸತಿ ಬೇಗದಿ ಕರಗಳ ಮುಗಿದು
ಅತಿ ಭಕ್ತಿಲಿ ಸಿರಿ ವಾಗುತಲಾಕ್ಷಣ
ಪತಿತ ಪಾವನನ ಸ್ಮರಿಸಿದಳು ೨

ವಂದಿಸಿ ಬೇಡುವೆನು ವೈಕುಂಠಪತಿ ನಿನ-
ಗೊಂದಿಸಿ ಬೇಡುವೆನುಪ

ಹಿಂದೆ ಮುಂದೆಂದಿಗೂ ಗೋ-
ವಿಂದ ನೀಗತಿಯೆಂದು ನಂಬಿದೆ
ಇಂದಿರಾಪತಿ ಬಂದು ರಕ್ಷಿಸೊ
ನಂದ ಗೋಪಿಯ ಕಂಡ ಮಾಧವ|| ಅ.ಪ ||

ಸುಂದರ ಚರಣಗಳ ಸುಮನಸರು ಕೃನ್ಮನ-
ಮಂದಿರದೊಳು ಧ್ಯಾನಿಸೆ ಸನಕಾದಿ ಮುನಿಗಳು
ಚಂದದಲಿ ಪ್ರಾರ್ಥಿಸೆ
ಮಂದರೋದ್ಧರ ಮದನ ಮೋಹನ
ನಂದ ವ್ರಜದೊಳು ಚಂದ ತೋರಿದೆ
ಇಂದು ನಿನ್ನ ಪೋಲುವವರ ಕಾಣೆನೊ
ಬಂಧ ಮೋಚಕನಹುದೊ ಶ್ರೀವರ

ಅಂದು ಗೋಪೇರ ವೃಂದ ವೃಂದ ಕೂಡಿಸಿ
ಚಂದದಿಂ ಕೊಳಲೂದಿ ನಲುಯುವ
ಮಂದಹಾಸದ ಮುಗುಳುನಗೆ ಗೋ-
ವಿಂದ ನಿನ ಪಾದಾರವಿಂದಕೆ ೧

ಶಾಮಸುಂದರ ನಿನ್ನಯ ಕೋಮಲ ಕರದಿ
ತೋರು ಚಕ್ರ ಗದ ಶಂಖವು ಪದುಮವು
ತೋರ ಮುತ್ತಿನ ಹಾರವು
ವಾರಿಜಾಕ್ಷಿಯ ಲಕ್ಷ್ಮಿ ಉರದೊಳು
ತೋರುತಿಹ ವೈಜಯಂತಿ ಮಾಲೆಯ
ಶ್ರೀಶನಿಗೆ ಶ್ರೀವತ್ಸ ಕೌಸ್ತುಭ
ಮಾಲೆ ಥಳಥಳ ಹೊಳೆವ ಕಾಂತಿಯ
ಸೂರ್ಯಕೋಟಿ ಪ್ರಕಾಶದಂದದಿ
ತೋರಿ ಮೆರೆವ ಕಿರೀಟ ಹೊಳೆಯಲು
ಲಲಾಟ ಕಸ್ತೂರಿ ತಿಲಕ ಶೋಭಿಸೆ
ಹಾಟಕಾಶ್ಯನ ಒದೆದ ಪಾದಕೆ ೨

ಇಷ್ಟ ಭಕುತರುಗಳೆಲ್ಲ ನಿನ್ನನು ಮನ
ಮುಟ್ಟಿ ಪೂಜಿಸೆ ಶ್ರೀನಲ್ಲನೆನುತ ಬಲು
ಶ್ರೇಷ್ಠನೆಂದರಿತರೆಲ್ಲ
ಇಟ್ಟಿಗೆ ಕೊಟ್ಟಾತನಿಗೆ ಬಲು
ಕಷ್ಟ ಪಡಿಸದೆ ಕೊಟ್ಟು ದರ್ಶನ
ದಿಟ್ಟತನದಲಿ ಪುಟ್ಟ ಪಾದದ
ದೃಷ್ಠಿ ಅವನಿಗೆ ಕೊಟ್ಟು ಸಲಹಿದಿ
ಅಷ್ಟು ಇಷ್ಟೆಂದ್ವೇಳ್ವ ಮಹಿಮೆಯು
ತುಚ್ಚ ಮನಜರಿಗಳವೆ ಶ್ರೀಹರೆ
ಇಷ್ಟದೈವ ಶ್ರೀ ಕಮಲನಾಭ-
ವಿಠ್ಠಲ ನಿನ್ನ ಪುಟ್ಟ ಪಾದಕೆ ೩

**ಆರ್ಯ**

ಸತಿ ಈ ಪರಿಯಲಿ ಸ್ತುತಿಸಲು ಹರಿಯನು
ಪತಿ ನೋಡುತ ಬೆರಗಾಗುತಲಿ
ಅತಿ ಹರುಷದಿ ಸತಿ ಪತಿಯರು ಕೂಡುತ
ಪತಿತ ಪಾವನನ ಪೊಗಳಿದರು

ಪರಿ ಪಾಲಿಸು ಶ್ರೀಶನೆ ಭೂರಮಾನಾಥನೆ
ಪರಿ ಪಾಲಿಸು ಶ್ರೀಶನೆಪ

ಶರಧಿ ಶಯನನೆ ಗರುಡಗಮನನೆ
ಪರಮ ಪುರುಷನೆ ಪಾಪ ದೂರನೆ
ಶರಣಜನ ಸಂರಕ್ಷ ಶ್ರೀ ಹರಿ
ವರದ ಪಂಢರಿವಾಸ ಶ್ರೀಶನೆ|| ಅ.ಪ ||

ಮಂದಿಗಳೆಲ್ಲ ನಿಂದಿಸೆ ನಿನ್ನನು ಬಲು
ಚಂದದಿಂದಲೆ ಪ್ರಾರ್ಥಿಸೆ ತಡಮಾಡದಲೆ ನೀ
ನಂದನೆಯನು ಪಾಲಿಸೆ
ಅಂದು ಆಡಿದ ವಚನ ಮೀರಲು
ಚಂದದಿಂದಲಿ ಬಂದು ನೀನು
ಸುಂದರಿಯ ಕರ ಪಿಡಿದು ಬೇಗದಿ
ಬಂದು ನಿಂತೆಯಾ ಕಪಟ ವೇಷದಿ ೧

ಪೊಕ್ಕಳಿಂದಲಿ ಬೊಮ್ಮನ ಪಡೆದವನಿಗೆ
ಲೆಕ್ಕವ ಇಲ್ಲ ಜನ ಶ್ರೀ ಲಕುಮಿಯನು ಸಹ
ಲೆಕ್ಕಿಸದಿಹ ದೇವನ
ಕಕ್ಕುಲಾತಿಯ ಜನರ ತೆರದಿ
ಚಿಕ್ಕವನಿತೆಯ ಕೂಡಿಕೊಂಡು
ಮಿಕ್ಕಜನರಿಗೆ ಮೋಸಗೊಳಿಸುತ
ಭಕ್ತರನು ಉದ್ಧರಿಸುತಿರ್ಪೆಯೊ ೨

ಮಾಯಾರಮಣ ನಿನ್ನಯ ಮಾಯಕೆ ಸಿಲುಕಿ
ಬಾಯ ಬಿಟ್ಟರೊ ದುರ್ಜನ ಸಜ್ಜನರಿಗೆ
ನೀಡಿದೆ ಅಭಯವನು
ಮಾರಜನಕನೆ ಮದನ ಮೋಹನ
ಸಾರಿದೆನೊ ಪಾದಾರವಿಂದವ
ಪಾರುಗಾಣಿಸಿ ಪೊರೆಯೊ ಕಮಲ
ನಾಭ ವಿಠ್ಠಲನೆ ಪೊರೆಯೊ ಸಂತತ ೩

ಪಾರ್ಥಸಾರಥೇ ಪಾಲಿಸೆನ್ನ
ಪಾರ್ಥಸಾರಥೇಪ

ಪಾರ್ಥಸಾರಥೆಯೆ ದೇವ
ಕೀರ್ತಿಸುವೆನು ನಿನ್ನ ಗುಣವ

ಕುಕ್ಷಿಯೊಳಗೆ ಸರ್ವ ಜಗವ
ಇಟ್ಟು ಪೊರೆವೊ ದೇವ ದೇವ ೧

ಕರುಣಾಸಾಗರನೆ ದೇವ
ಶರಣ ಜನರ ರಕ್ಷಿಸುವ
ಬಿರುದು ಕೇಳಿ ನಲಿವೆ ಭವ
ಶರಧಿಯಿಂದುದ್ಧರಿಸು ದೇವ ೨

ಹರಿಯೇ ನೀ ಸರ್ವೋತ್ತಮನು
ಸಿರಿಯು ನಿನ್ನ ಮಡದಿ ಪವನ-
ತನಯ ಜೀವರೊಳುತ್ತಮ ಭವನು
ಪರಮ ವೈಷ್ಣವನೆನಿಸುತಿಹನು ೩

ಸುರರು ನಿನ್ನ ಕಿಂಕರರು
ಸರ್ವಕಾಲದಲ್ಲಿ ಅವರು ಬಿಡದೆ
ನಿನ್ನ ಸೇವಿಸುವರು ವರದ
ಕಮಲನಾಭ ವಿಠ್ಠಲ ೪

**ಆರ್ಯ**

ಅರಿಯದ ಅಜ್ಞಾನಿಯನೀಪರಿ ಸು
ಮ್ಮನೆ ಬಳಲಿಸುವುದುಚಿತವಲ್ಲ
ಸರಸಿಜಭವಮುಖರಿಗೆ ಒಲಿದಂದದಿ ದಾ
ಸ್ಯವ ಕೈಗೊಳ್ಳುತೆನ್ನನು ರಕ್ಷಿಪುದು

ಸಂಬಳಕಿಟ್ಟುಕೊ ನಿನ್ನಂಬಲ ಬಿಡಿಸದೆ
ಶಂಬರಾರಿಯ ಪಿತ ನಂಬಿದೆ ನಿನ್ನ ಸೇವಾ‖ ಅ.ಪ ‖

ಸತ್ಯ ಸಂಕಲ್ಪ ನಿನ್ನಯ ದ್ವಾರದ ಹೊಸ
ಮುತ್ತಿನ ಕದ ತೆಗೆಯುವ
ವಿಶ್ವಮೂರುತಿ ನಿನ್ನ ದರ್ಶನನಾಂತರದಿ
ಮುತ್ತಿನ ಗದ್ದುಗೆಯನಿಟ್ಟು
ಮತ್ತೆ ಚಾಮರ ಬೀಸಿ ನಲಿಯುವೆ
ಸತ್ಯ ಭಾಮೆಯ ರಮಣ ಶ್ರೀಹರೆ
ಉತ್ತಮರ ಸೇವೆಯನು ಮಾಡುವ ೧

ಸರ್ಪಶಯನ ನಿನಗೆ ಮುತ್ತಿನ ಸು-
ಪ್ಪತ್ತಿಗೆಸೇವೆ ಮಾಡುವೆ

ಸತ್ಯ ಸಂಕಲ್ಪ ನಿನ್ನ ಇಚ್ಛಾನುವರ್ತನಾಗಿ
ಉತ್ತಮ ಪಾದಗಳನೊತ್ತಿ
ಮತ್ತೆ ನೀ ನಿದ್ರಿಸುವ ಸಮಯದಿ
ಮುತ್ತಿನ ವ್ಯಜನದಲ್ಲಿ ಬೀಸುತ
ಮತ್ತೆ ನಿನ್ನ ಕೀರ್ತನೆ ಮಾಡುವೆ ೨

ಗರಡಗಮನ ನಿನ್ನ ಒಡಗೂಡಿ ಬಂದು
ಬಿಡದೆ ಛತ್ರಿಯನ್ಹಿಡಿಯುವೆ
ಕಡಲಶಯನ ನಿನಗೆ ಸಡಗರದಿಂದ ಬಂದು
ನಡೆಮಡಿಯ ಹಾಸುತ್ತ ನಿನ್ನನು
ಅಡಗಡಿಗೆ ವಂದಿಸುತ ಸ್ತುತಿಪೆನು
ಕಡಲೊಡೆಯ ಶ್ರೀಕಮಲನಾಭ ವಿಠ್ಠಲನೆ
ಸರ್ವದ ನಿನ್ನ ಸ್ಮರಿಸುವ ೩

**ಆರ್ಯ**

ಇಂತೀಪರಿ ಸತಿಪತಿಗಳು ಲಕ್ಷ್ಮಿ
ಕಾಂತನ ಗುಣಗಳ ಪೊಗಳುತಿರೆ
ಸಂತೋಷದಿ ಶ್ರೀ ಹರಿ ಅವರನು ಬಹು
ಸಂವಿಡುತ ನುಡಿದನು ಅಂದು ೧

ಒಲ್ಲೆನು ಮಾನವ ವಲ್ಲಭೆಯನು ನಾ
ಕಲ್ಲಾಗಿರುತಿಹೆನಿದು ನೋಡಿ
ಮೆಲ್ಲನೆ ನಿಮ್ಮಯ ಸ್ಥಳಕೆ ಪೋಗಿ ಎನ್ನ
ಉಲ್ಲಾಸದಿ ಸ್ತುತಿ ಮಾಡಿರೆನೆ ೨

ಬಂದರು ದಂಪತಿಗಳು ಕುವರಿಯ ಆ-
ನಂದ ಕಂದನಿಗರ್ಪಿಸೆ ಮುದದಿ
ನಿಂದರು ಮಾನಸ ಮಂದಿರದಲಿ ಗೋ-
ವಿಂದನ ಧ್ಯಾನವ ಮಾಡುತಲಿ ೩

ಗುರುಗಳ ಕರುಣದಿ ನುಡಿಸಿದ ನುಡಿಗಳು
ನರಹರಿ ಪಾದಕೆ ಅರ್ಪಿತವು
ಅರಿತ ಸಜ್ಜನರು ಜರಿಯದೆ ಆಲಿಸಿ
ಸರಿ ಮಾಳ್ಪರು ತಪ್ಪುಗಳನ್ನು ೪

ಅರಿಯೆನು ಒಂದನು ಬರೆಯಲು ಗುರುಗಳು
ಬರೆಸಿದರಿದು ಬೇಸರಿಸದಲೆ

ಹಿರಿಯರು ಆದರದಲಿ ಕೇಳುವದು ಶ್ರೀ
ಪವನಂತರ್ಯಾಮಿಯ ಚರಿತೆಯನು ೫

ಶ್ರೀಪತಿ ಮಾಡುವ ವ್ಯಾಪಾರವು ಬಲು
ನೂತನವಾಗಿಹುದಿದು ಕೇಳಿ
ಗೋಪತಿ ಕೃಷ್ಣನ ಗುಣಗಳ ಪಾಡಲು
ನಾಕೇಶನು ಆಜ್ಞಾಪಿಸಲು ೬

ದೇವೇಂದ್ರನ ನುಡಿ ಕೇಳುತ ತ್ವರದಲಿ
ದೇವ ದುಂದುಭಿಗಳು ಮೊಳಗಿದವು
ಗಾನದಿ ಪಾಡುತ ಶ್ರೀನಿಧಿ ಕಮಲ
ನಾಭ ವಿಠ್ಠಲನ ಪೊಗಳಿದರ್ದರಿಗೆ ೭

**ಮಂಗಳ**

ಜಯ ಜಯ ಶ್ರೀ ಲಕ್ಷ್ಮಿರಮಣನಿಗೆ
ಜಯ ಜಯ ಶ್ರೀ ಭೂರಮಣ ಶ್ರೀಹರಿಗೆಪ

ಮಂಗಳ ಮಹಿಮಗೆ ಶೃಂಗಾರ ರೂಪಗೆ
ಅಂಗಜಜನಕಗೆ ಜಯ ಜಯತು
ಗಂಗೆಯಪಿತ ಪಾಂಡುರಂಗಗೆ ಯದುಕುಲ-
ಚಂದ್ರಗೆ ಸದ್ಗುಣ ಸಾಂದ್ರ ಶ್ರೀಹರಿಗೆ ೧

ರಣದೊಳು ಪಾರ್ಥಗೆ ಸಾರಥಿಯಾಗುತ
ನಯನದೊಳು ಗೀತೆಯ ಪೇಳಿದಗೆ
ಸುಲಭದಿ ಕುರು ಸೈನ್ಯವನೆಲ್ಲ ಮಡುಹಿಸಿ
ಗುರುಗಾಂಗೇಯಗೆ ಒಲಿದವಗೆ ೨

ಪಂಡರೀಕನಿಗೆ ಒಲಿದು ವರವನಿತ್ತು
ಪಂಢರಿಪುರಿ ಪಾಂಡುರಂಗನಿಗೆ
ಇಂದು ವದನೆಯಳ ಪೊಂದಿದ ವಸುದೇವ
ಕಂದನೆಂದೆನಿಸುತ ಮೆರೆದವಗೆ ೩

ಭಕ್ತರ ಮೊರೆ ಕೇಳಿ ಯುಕ್ತಿಯಿಂ ಪಾಲಿಸಿ
ಅಕೃತಾತ್ಮರನೆಲ್ಲ ಕೆಡಿಸಿದಗೆ
ಭಕ್ತವತ್ಸಲ ಸ್ವಾಮಿ ಸತ್ಯಮೂರುತಿಗೀಗ
ಮುತ್ತಿನಾರತಿ ಎತ್ತಿ ಪಾಡಿದರು ೪

ಕಾಳಿಯ ಮಡುವನು ಕಲಕಿದ ಧೀರಗೆ
ಕಂಸನ ಮರ್ದಿಸಿ ಕೊಂದವಗೆ
ಖಗನ ಹೆಗಲೇರಿ ಕನ್ನಿಕೆಯನು ಕೊಂದ
ಜಗದೀಶ ಕಮಲನಾಭ ವಿಠ್ಠಲಗೆ ೫

## ಹರಿದಾಸರ ಪಾಂಡುರಂಗ ವಿಠಲ (೯)

೫೫

**ಭೈರವಿಧ್ರುವ**

ಸುಂದರಮಯವಾದ ದ್ವಂದ್ವ ಚರಣವನು
ಇಂದು ಕಂಡೆನು ಬಂದು
ಅಂದು ಕಾಳಿಂದಿಯಾ ಧಮುಕಿ ನಾ
ಗೇಂದ್ರನಾ ಫಣಿಯಲ್ಲಿ ಕುಣಿಕುಣಿದಾಡಲು
ದುಂದುಭಿರಭಸಾ ಮೊರಿಯೆ ಗಗನ
ದಿಂದಲೆ ಪೂಮಳೆ ಬಿಡದೆ ಸುರಿಯೆ
ವೃಂದಾರಕವೃಂದ ಚಂದಾಗಿ ಗೈವುತಿರೆ
ನಂದನಂದನ ಗೋಪಿಯ ಕಂದ
ಅಂದಂದಾಡಿದ ಗೋವಿಂದ ವಿಜಯವಿಠಲಾ
ನಿಂದು ನಲಿವಿಂದಾ ಮೆರೆವ ನೀನು ಇಲ್ಲಿ
ಇಂದಿರೆಯರಸನ ನಂದ ಮೂರುತಿಯಾದೆ

**ಮಟ್ಟ**

ಇದೆ ವೈಕುಂಠಾ ಇದೆ ಶ್ವೇತ ದ್ವೀಪ
ಇದೆ ಅನಂತಾಸನ ಇದೆ ಗೋಕುಲವೋ
ಇದೆ ವೃಂದಾವನ ಇದೆ ದ್ವಾರವತಿ
ಇದೆ ನಮ್ಮಾ ಯದುಪತಿ ಇಪ್ಪಾ ನಗರಾ
ಇದೆ ನಿಮ್ಮ ತಿರುಮಲಾ ವಿಜಯವಿಠಲನಿಪ್ಪ ಸಂಭ್ರಮವೋ ೧

**ತ್ರಿವಿಡಿ**

ಧನ್ಯನಾನಾದೆನೋ ದಾನ್ನವಾರಿಯಾ ಕಂಡು
ಎನ್ನ ಸಂಸ್ಕಾರಕ್ಕೆ ಪಡೆಗಾಣೆ ಪಡೆಗಾಣೆ
ಅನ್ಯಾಯಗೊಳಿಸುವ ದುರುಳ ವೃತ್ತಿಗಳೆಲ್ಲಾ
ಬೆನ್ನು ತೋರಿದವಯ್ಯಾ ಬೀಳುವಾದರಿಯಾದೆ
ಅನ್ನಾ ದೇವರಿಗೆ ಶಿರವಾಗಿ ಶಿರವಾಗಿ ಶ

ರಣು ಶರಣೆನ್ನಿನೋ ಆವಾವ ಕಾಲದಲ್ಲಿ
ರನ್ನ ಕೈ ಸೇರಾಲು ಗಾಜುಮಣಿ ಬಯಸುವೆನೆ
ತನ್ನಿಂದ ತಾವೊಲಿದ ವಿಜಯವಿಠಲ ಕರ
ವನ್ನು ಪಿಡಿಯೆ ಎನಗೆ ಇನ್ನು ಯಾತರ ಭೀತಿ ೩

**ಅಟ್ಟ**

ಮೈಲಿಗಿಯವ ನಾನಾದಡೆ ಜಗದಯ್ಯಾ
ಆಯ್ಯಾನೆ ನಿನ್ನ ಮಂಗಳವಾದ ನಾಮಕ್ಕೆ
ಮೈಲಿಗಿ ಉಂಟೇನೋ ಮದನಾರಿಯ ಒಡೆಯಾ
ಮೈಲಾರಿ ಚೊಕ್ಕನು ಆವಲಕುಲದವ
ಆಯ್ಯಾ ವಿಜಯವಿಠ್ಠಲಾನುದಿನ ನೀನೊಲಿಯೆ
ವೈವಾದು ಸದ್ಗತಿಗೆ ಒಂದೆ ನಾಮವೆನೆನಿಯ ೪

**ಆದಿ**

ಹರಿದು ಎಂತನ್ನಯಿಯಾದ ನರರಿಗೆ
ಶರಣಜನರಿಗೆ ಬಲು ಮರಳು ಕಾಣೋ ಪಾಂಡುರಂಗಾ
ವರ ಇಟ್ಟಂಗಿ ಮೇಲೆ ಸ್ಥಿರವಾಗಿ ನಿಂದಾ
ಸಿರಿಧರಪತಿ ವಿಜಯವಿಠಲಾ
ಗುರುಪುರಂದರರನ್ನ ಪ್ರೀಯಾ ೫

ಪಂಢರೀರಾಯಾ ಪ್ರಾಕೃತವಿರಹಿತಕಾಯಾ
ಪುಂಡರೀಕ ವರದ ವಿಜಯವಿಠಲರೇಯಾ ೬

**೫೬**

ಹರೆ ವಿಠ್ಠಲಾ ಪಾಂಡುರಂಗ
ಪರಿಪಾಲಯ ಕಂಸಾರೆಪ

ಕರಕಮಲದ್ವಯ ಕಟಿಯ ಮ್ಯಾಲೆಯಿಟ್ಟ
ಪರಮ ಪುರುಷ ಶೌರೇ ಮುರಾರೇ|| ಅ.ಪ ||

ಜಲಜಭವಾದಿ ಸುರಸನ್ನುತ ಪಾದ ಜಲಜನಾಭನಾದ
ಕಲುಷ ದೂರ ಕರುಣಾಕರ ರಂಗ
ಸುಲಲಿತ ಮಹಿಮ ಹರೇ ಮುರಾರೆ ೧

ಪುಂಡಲೀಕ ವರದಾತ ಮುಕುಂದ ಕುಂಡಲಿಶಯನ ಹರೇ
ಅಂಡಜವಾಹನ ಅಪ್ರಾಕೃತಕಾಯ
ಕುಂಡಲಧರ ಹರೇ ಮುರಾರೇ ೨

ದಿಟ್ಟತನದಿ ಹರಿಭಕ್ತ ಕೊಟ್ಟ ಇಟ್ಟಿಗಿ ಮೇಲೆ ನಿಂದ ದೇವ
ಸೃಷ್ಟಿಗೊಡೆಯ ಶ್ರೀವಿಜಯವಿಠ್ಠಲ
ದುಷ್ಟಕುಲಾಂತಕನೇ ಶ್ರೀ ಕೃಷ್ಣ ೩

**ಅನುಬಂಧಗಳು**

**೧. ಪುರಂದರದಾಸರ ಕಂಬವನ್ನು ಕುರಿತು**

ಎಷ್ಟು ಪುಣ್ಯ ಮಾಡೀ ಕಂಬ
ವಿಠ್ಠಲನ್ನ ಗುಡಿ ಸೇರಿತೋಪ

ಶ್ರೇಷ್ಠ ಪುರಂದರ ದಾಸರನ್ನು
ಕಟ್ಟಿಸಿಕೊಂಡು ತಾ ಪೂಜೆಗೊಂಡಿತೊಅ.

ಎಲ್ಲಾ ಕಂಬಗಳಿದ್ದರೂ ಇಂತು
ಇಲ್ಲೀ ಇದಕೆ ಈ ಖ್ಯಾತಿಯು ಬಂತು
ಬಲ್ಲಿದ ಸುಜನ ವಂದಿಪರಿ
ಪುಲ್ಲನಾಭನ್ನ ಕೃಪೆಯ ಪಡೆದಿತು ೧

ಮಾಯಾಕಾರನು ನೀರನು ತಂದು
ಈಯಲು ಪುರಂದರದಾಸರಿಗಂದು
ನೋಯಿಸೆ ತಿಳಿಯದೆ ಮನಕದ ತಂದು
ನ್ಯಾಯದಿ ತಿಳಿಸಿ ಹೊಡೆಸಿದನಂದು ೨

ದಾಸರಂತೆ ತಾನು ವೇಷವ ಧರಿಸಿ
ವೆಶ್ಯೆಗೆ ತನ್ನ ಕಂಕಣವನ್ನೇ ಕೊಡಿಸಿ
ತಾಸೊತ್ತಿನಾ ರಾತ್ರೆ ಹೊಡೆದದ್ದ ನೆನಸಿ
ವಾಸುದೇವ ಬೈಲಿಗೆಳೆಸಿದ ಬಿಗಿಸಿ ೩

ಜ್ಞಾನ ಪುಟ್ಟಲು ಹರಿಮಾಯವಿದೆಂದು
ಶ್ರೀನಿವಾಸ ತಾ ಒಲಿದನು ಅಂದು
ಆನಂದದಿಂದೊಂದು ಕವನ ಗೈದು
ಶ್ರೀನಿಧೆ ಮುಟ್ಟಿತು ಮುಯ್ಯವಿದೆಂದು ೪

ದಾಸರ ಅಂಗವು ಸೋಕಿದ್ದರಿಂದ
ಶ್ರೀಶನು ಹಗ್ಗದಿ ಬಿಗಿಸಿದ್ದರಿಂದ
ದಾಸರ ಪೆಸರಲಿ ಮೆರೆಪುದರಿಂದ
ದೋಷ ಪೋಯಿತು ಕಂಬಕೆ ಭವ ಬಂದ ೫

ಹಿಂದೆ ಕಂಬದಿ ನರಹರಿ ಅವತರಿಸೆ
ಅಂದಿನ ಕಂಬವೆ ಈಗಿಲ್ಲ ಉದಿಸೆ
ಸಿಂಧುಶಯನನ್ನ ದಾಸತ್ವ ಮಹಿಸೆ
ಬಂದಿತು ವಿಠಲನ್ನ ಗುಡಿಯನಾಶ್ರೈಸಿ ೬

ದಾಸರ ದರುಶನ ಕರ್ಮ ಕಳೆವುದು
ದಾಸರ ವಾಕ್ಯ್ರವಣ ಜ್ಞಾನವೀಯುವುದು
ದಾಸರ ಸ್ಪರ್ಶವು ಮುಕ್ತಿಗೊಯ್ಯುವುದು ೭

ಕಂಭವೆ ಸಾಕ್ಷಿಯು ಈ ಕಲಿಯುಗದಿ
ಡಾಂಭಿಕ ಜನರಿಗೆ ತಿಳಿಯದು ಹಾದಿ
ಬೆಂಬಿಡದೆ ಹರಿ ಕಾಯುವ ಭರದಿ
ಇಂಬುಗೊಟ್ಟು ತನ್ನ ನಿಜ ದಿವ್ಯ ಪುರದಿ ೮

ದಾಸರ ಮಾರ್ಗವೆ ಸುಲಭವೆಂತೆಂದು
ದಾಸರ ಕೃಪೆ ದ್ವಾರ ಬಲಿಯುವೆನೆಂದು
ದಾಸರ ದೂಷಿಸೆ ಗತಿ ಇಲ್ಲೆಂದು
ಶ್ರೀಶ ತಾನಿಲ್ಲೀ ನಿಂತನು ಬಂದು೯

ಶ್ರೀರಮಾಪತಿ ಓಡಿ ಬಂದು ನಿಲ್ಲೆಂದೂ
ದ್ವಾರಕ ಪುರದೊಂದು ಕಂಭವೆ ಬಂದು
ಸೇರಿತೊ ವಿಠಲನ ಮುಂದಿರವಂದು
ಸೂರೆಗೈದರೂ ಖ್ಯಾತಿ ದಾಸರು ಬಂದು ೧೦

ನಿಜದಾಸರಂಗಸಂಗದ ಫಲದಿ
ರಜತದ ಕಟ್ಟೆನಿಂ ಮೆರೆದಿತು ಜಗದಿ
ಸುಜನರ ಸಂಗದಿ ಮುಕುತಿಯ ಹಾದಿ
ಭುಜಗಶಯನ ತೋರುವ ನಿರ್ಮಲದಿ ೧೧

ತತ್ವವನಿದರಿಂದ ತಿಳಿವುದು ಒಂದು
ಉತ್ತಮತ್ವವು ಜಡಕಾಯಿತು ಬಂದು
ಉತ್ತಮರಾ ಪಾದ ಸೋಂಕಲು ಅಂದು
ವ್ಯರ್ಥವಾಗದು ಹರಿಭಕ್ತರೆ ಬಂಧು ೧೨

ಪಾಪ ನಿರ್ಲೇಪವಾಗೋದು ವಿಠ್ಠಲನ್ನ
ಆಪಾದ ಮೌಳಿಯ ರೂಪ ದರುಶನ್ನ
ಈ ಪರಿ ಖ್ಯಾತಿ ಪೊಂದಿತು ಕಂಬ ಘನ್ನ
ಗೋಪಾಲಕೃಷ್ಣ ವಿಠ್ಠಲ ಸುಪ್ರಸನ್ನ ೧೨

ಮುಯ್ಯಕ್ಕೆ ಮುಯ್ಯಿ ತೀರಿತು
ಮುಯ್ಯಕ್ಕೆ ಮುಯ್ಯಿ ತೀರುತು ಜನ ಪ|
ದಯ್ಯ ವಿಜಯ್ಯ ಸಾಹಯ್ಯ ಪಂಢರಿರಾಯ || || ಅ.ಪ || ||

ಸಣ್ಣವನೆಂದು ನಾ ನೀರು ತಾರೆಂದರೆ
ಬೆಣ್ಣೆ ಕಳ್ಳ ಕೃಷ್ಣ ಮರವೆ ಮಾಡಿ
ಚಿನ್ನದ ಗಿಂಡಿಲಿ ನೀರು ತಂದಿಟ್ಟರೆ
ಕಣ್ಣು ಕಾಣದೆ ನಾ ರೊಣದೆ ಪಂಢರಿರಾಯ ೧

ಎನ್ನ ಹೆಸರು ಮಾಡಿ ಸೂಳೆಗೆ ಕಂಕಣ
ವನ್ನು ನೀನೆತ್ತಿ ನಿಜರೂಪದಿ
ಎನ್ನ ಪೀಡಿಸಿ ಪರಮ ಭಂಡನ ಮಾಡಿ
ನನ್ನ ಮಾಯ್ಯಕೆ ಮುಯ್ಯಿ ತೀರಿಸಿಕೊಂಡಯ್ಯ ೨

ಭಕ್ತವತ್ಸಲನೆಂಬೊ ಬಿರುದು ಬೇಕಾದರೆ
ಭಕ್ತರಾಧೀನನಾಗಿರಬೇಡವೆ
ಯುಕ್ತಿಯಲಿ ನಿನ್ನಂಥ ದೇವರ ನಾ ಕಾಣೆ
ಮುಕ್ತೀಶ ಪುರಂದರವಿಠಲ ಪಂಢರಿರಾಯ
ಆಯಾ ಹರಿದಾಸರ ಹಾಡುಗಳ ಅಕಾರಾದಿ

**ಪುರಂದರದಾಸ**

೧. ಕೂಸಿನ ಕಂಡಿರಾ....
೨. ಜಯಪಾಂಡುರಂಗ.....
೩. ಪುಂಡರೀಕವರದ ಪಂಢರಿರಾಯನ
೪. ಮುಯ್ಯಕ್ಕೆ ಮುಯ್ಯಿ ತೀರಿತು

**ಜಗನ್ನಾಥ ದಾಸ**

೧. ಎಂದು ಕಾಂಬೆನು ಪಾಂಡುರಂಗ ಮೂರುತಿಯಾ
೨. ಕಂಡೆ ಪಂಢರಿರಾಯನ ತನ್ನನು
೩. ಕಂಡೆ ಪಂಢರಿರಾಯನ ಸಿರಯನ ಪ್ರಿಯನಾ
೪. ಧನ್ಯನಾದೆನು ವಿಠಲನ ಕಂಡು ಓಡಿತು ಅಘುದಿಂಡು

೫. ನೋಡಿದೆ ವಿಠಲನ ನೋಡಿದೆ
೬. ಪಾಲಿಸೊ ಪಾಂಢರಿಪುರರಾಯ್ಯಾ ಪಾವನ ಕಾಯಾ
೭. ವಿಠಲಯ್ಯಾ ವಿಠಲಯ್ಯ

**ಪ್ರಸನ್ನ ಶ್ರೀನಿವಾಸ ದಾಸ**

೧. ವಂದೇ ವಿಠಲರಾಯ ಇಂದಿಗೆ ಬಂದು

**ಅಂಬಾಬಾಯಿ**

೧. ಏಳು ಪಂಢರಿವಾಸ ಏಳು ಶ್ರೀ ದೇವೇಶ
೨. ಕಂಡು ಉಂದಿಗೆ ಧನ್ಯಳಾಗುವೆ ನಾನು
೩. ಕಂಗೆ ಕನಸಿನಲಿ ನಾ ಪಾಂಡುರಂಗನ
೪. ಕಂಡೆ ಕಂಡೆ ಪಂಢರೀಶನ ಕಂಡೆ
೫. ಕಂಡು ಧನ್ಯಳಾದೆ ನಾ
೬. ಕರುಣ ಬಾರದೆ ವಿಠ್ಠಲ ಶ್ರೀ ಪಾಂಡುರಂಗ
೭. ನೋಡಿದೆನು ವಿಠ್ಠಲನ ದಣಿಯ
೮. ಪಾಂಡುರಂಗನೆ ಪಾಲಿಸೆನ್ನನು
೯. ಬಿಟ್ಯಾಗೆ ಇರಲಿನ್ನೀ ಚರಣರಂಗ
೧೦. ಮಂಗಳ ಪಂಢರಿವಾಸನಿಗೆ ಜಯ

**ನಿಡುಗುರುಕಿ ಜೀವೂಬಾಯಿ**

೧. ವಾಯುಸುತನ ತಂದು ಪೂಜಪ ತಂದೆ ಮುದ್ದು (ಶ್ರೀ ಪಾಂಡುರಂಗ ಚರಿತ್ರ )

**ವಿಜಯದಾಸ**

೧. ಅಂದು ಮಾನಿಸನಾದೆಲೋ
೨. ಅಚ್ಯುತಾನಂತನ ಕಂಡೆ
೩. ಜನನಿ ರುಕುಮಿಣಿ
೪. ತರುಣ ಅರುಣ
೫. ನಾನಾ ಪರಿಯಿಂದ ನಿನ್ನ....
೬. ನೋಡಿದೆನೊ ಸಿರಿ ಪಾಂಡುರಂಗನ
೭. ಪಾಂಡುರಂಗನೆ ವೀಕ್ಷಿಸುವ
೮. ಬಂದೆನೊ ಎಲೆ ಹರಿಯೆ
೯. ವ್ಯಕ್ತನಾಗಿ ಶಕ್ತನಾಗಿ
೧೦. ಸುಂದರಮಯವಾದ ದ್ವಂದ್ವ
೧೧. ಹರೇ ವಿಠಲಾ ಪಾಂಡುರಂಗ

**ಭೂಪತಿ ವಿಠ್ಠಲ**

೧. ಈ ಪರಿಯ ಸುಲಭ ಇನ್ಯಾವ ದೇವರು ಉಂಟು
೨. ಕರಮುಗಿದು ಪ್ರಾರ್ಥಿಪೆವು
೩. ಗಿರಿಧರ ಪರಮ ಮಂಗಲಾ
೪. ಜಯದೇವ ಜಯದೇವ
೫. ಧನ್ಯನಾದೆ ಪಾಂಡುರಂಗನ ಕಣ್ಣಾರೆ ಕಂಡು
೬. ಪಂಢರಿಯ ಬಿಟ್ಟೆಲ್ಲಿ ಹೆಂಡತಿಯ ಕರಕೊಂಡು
೭. ಪುಂಡರೀಕ ವರದಾ ವಿಠ್ಠಲ
೮. ಪೋಗಿ ಬರುವೆನು ನಾ ಪಂಢರಿರಾಯಾ
೯. ಬಂದಾನು ಪಾಂಡುರಂಗಾ
೧೦. ಬಂದ್ಯಾ ವಿಠ್ಠಲ ಆನಂದವಾಯಿತು
೧೧. ಪ್ರತಿ ಮನೆಯೊಳು ಶ್ರೀ ತುಲಸಿ ವೃಂದಾವನ ಬೇಕು
೧೨. ಬಾರೋ ಪಾಂಡುರಂಗಾ ಕೇಲಹ್ವಾ ಬೇಟಿ ದೇಗಿ
೧೩. ವಂದೇ ಗೋವಿಂದ ಮಹಾನಂದಂ

**ಗುರುಗೋವಿಂದ ವಿಠ್ಠಲ ದಾಸರು**

೧. ಎಂದು ಕಾಂಬೆನು ತಂದೆ
೨.ನೋಡಿದೆ ಶ್ರೀ ವಿಠಲನ ನೋಡಿದೆ
೩. ಬಂದಾ ನೋಡೇ ವಿಠಲಾ ಮನೆಗೇ

**ಗೋಪಾಲ ದಾಸ**

೧. ಎನ್ನ ಜ್ಞಾನಗಳೆಲ್ಲ ಎನ್ನ ಧ್ಯಾನಗಳೆಲ್ಲ

**ಹರಪನಹಳ್ಳಿ ಭಿಮವ್ವ**

೧. ಪಂಢರಿಪುರ ವಾಸ ಪಾಲಿಸೊ ಶ್ರೀಶ

# ಹರಿದಾಸರ ಪಾಂಡುರಂಗ ವಿಠಲ: ಅನುಬಂಧ

**ಮತ್ತೆ ಸಿಕ್ಕಿದ ಹಾಡುಗಳು**

**೧ ನೀಲಗುದುರೆಯನ್ನೇರಿ ........**

**ಧ್ರುವತಾಳ**

ನೀಲಗುದುರೆಯನ್ನೇರಿ ಶಾಲು ಸೊಂಟಕ್ಕೆ ಸುತ್ತಿ
ಕಾಲುಕುಪ್ಪಸ ತೊಟ್ಟು ಮೇಲೆ ಮೋಹನ ಹಾಕಿ

ಒಲ್ಯಾಡಿಸುತ್ತ ಒಂಟಿ ಥಾಳಾಗಿ ಶೋಭಿಸಲು
ಸಾಲು ಬೆರಳುಂಗುರ ಕೈಲಿ ಖಡ್ಗವ ಪಿಡಿದು
ತೋಳು ತಾಯಿತ ಶಿರಕೆ ಮೇಲಾದ ವಸ್ತ್ರ ಸುತ್ತಿ
ಫಾಲ ಕಸ್ತೂರಿನಿಟ್ಟು ಮೈಲಿ ಗಂಧವ ಪೂಸಿ
ಪಾಲಾಯನದಿ ಅಶ್ವವೇರಿ ಒಲ್ಯಾಡಿಸುತ್ತ
' ಆಲೆನಾಹಿ ' ಎಂದು ಕೇಳಿದವನಾರವ್ವ
ವೇಳೆ ಸಾಲದ್ಹೋಯಿತು ಕೇಳುವುದಕ್ಕೆನಗೆ
ಹೇಳುವುದಕ್ಕೆ ವಚನಗದ್ಗದದಿ
ಏಳದು ವಚನ ಉಚ್ಚರಿಸುವೆನೆನಲು
ಅಲೋಚನೆಗೆ ಅತಿವಿಚಿತ್ರವು
ಕೇಳಿಲ್ಲ ಕಂಡಿಲ್ಲ ಇಂಥ ಪುರುಷನ್ನ ಎಂದೂ
ಕಾಳಗತ್ತಲು ಅಲ್ಲ ನೋಡು ಹಗಲು
ಕೇಳು ತಗ್ಗು ಮಿಟ್ಟೆ ಮೇಲೆ ಮಂಜುರವಲ್ಲ
ಹೇಳಲೇನಿದು ಒಂದು ಸೋಜಿಗವು ಕಾಲು
ಏಳವು ಮುಂದೆ ನಡೆಯಲು ಎನಗಿನ್ನು
ಅಲೋಚನೆಯೆಲ್ಲ ಅತ್ತಲಾಗಿ ಎನ್ನ
ಕೇಳಿದನಲ್ಲೆ ಅರೆ ಮಾತಿನಿಂದಲಿ ಎನ್ನ
ಹೇಳುವ ಪುರುಷನ ಆವನಾಗುವನು
ಆಲೋಚನೆಗೆ ಎನಗೆ ತೋರುತಲಿದೆ ತುಲಸಿ-
ಮಾಲೆ ಪರಿಮಳಗಂಧ ಕುರುಹದಿಂದ
ಶೀಲಮೂರುತಿ ಪಂಡರಿರಾಯ ಗೋಪಾಲವಿಠಲ
ಒಲ್ಯಾಡಿ ಕುದುರೆ ಒಲ್ಯಾಡಿಸುತ್ತ ಪೋದನಲ್ಲೆ

**ಮಠ್ಯತಾಳ**

ಕಂಡಿರ್ಯ ಕಂಡಿರ್ಯ ಖಂಡವ್ಯಾಪುತನಿವ
ಕಂಡಿರ್ಯ ಕಂಡಿರ್ಯ ಬೊಮ್ಮಾಂಡದೊಡೆಯನ
ಕಂಡಿರ್ಯ ಕಂಡಿರ್ಯ ಅಜಭವಾದಿಗಳ
ತೊಂಡರ ಮಾಡಿ ಬಿಡದಖಂಡ ಪೊರೆವವನ
ಕಂಡಿರ್ಯ ಕಂಡಿರ್ಯ ಸರ್ವಜೀವರ ಪಶು-
ಹಿಂಡು ಮಾಡಿ ಬಿಡದೆ ಕಾಯುವ ಗೋಪಾಲನ
ಕಂಡಿರ್ಯ ಕಂಡಿರ್ಯ ಮಣಿಮೌಳಿ ಮಲ್ಲಿಗೆ ದಂಡೆಯ
ಮಂಡೆಯು ಶೋಭಿಸೆ ಮುದ್ದುಮೊಗದ ಚೆಲುವ
ಪುಂಡರೀಕದಳನಯನ ಕಸ್ತೂರಿ ತಿಲಕ
ಕುಂಡಲಕರ್ಣ ಕಪೋಲ ತತ್ತಳಿಸುತ್ತ

ಪುಂಡರೀಕ ತುಲಸೀದಂಡೆಯ ಕೊರಳೊಲಿಯೆ
ಚೆಂಡು ಬುಗುರಿ ಚೆಣ್ಣಿಗೋಲುಗಳಾಡುತ್ತ
ಪುಂಡರೀಕನ ಭಕುತಿಗೊಲಿದು ಬಂದು ನಿಂದ
ಪಂಡರಪುರಿರೇಯ ಗೋಪಾಲವಿಠಲನ್ನ
ಕಂಡಿರ್‍ಯ ಕಂಡಿರ್‍ಯ ಕಪಟನಾಟಕಹರಿಯ

**ರೂಪಕತಾಳ**

ಆವ ರೂಪದಲ್ಲೇ ಗೋವು ಕಾಯಿದ ರೂಪ
ಆವ ಈ ರೂಪವೇ ಮತ್ಸ್ಯಾದಿ ರೂಪವು
ಆವ ಈ ರೂಪವೇ ಅಜಾದಿರೂಫನು
ಆವ ಈ ರೂಪವೇ ಆತ್ಮಾದಿರೂಪನು
ಆವ ಈ ರೂಪವೇ ಆನಂತಾತ್ಮಕ
ಶ್ರೀವಿಷ್ಣು ರೂಪವು ಮತ್ತಿವನೆ ಸಾಕ್ಷಾತು ನೋಡಾ
ಆವ ರಾಹುತನಂತೆ ಅಶ್ವವೇರಿ ಎನ್ನ
ಈ ವಿಧದಲಿ ಎನ್ನ ಕಾವಳಗೊಳಿಸಿದುದು ಏನೊ
ನಾವೊಂದರಿತವನಲ್ಲ ನಿನ್ನ ಲೀಲೆ
ಆವ ಬಗೆಯೊ ನಾನರಿಯೆ ಈ ವಿಧ ತೋರಿದ್ದು
ಸೇವಕಜನಸ್ಥಿತಿ ನೀನೆ ಬಲ್ಲೆ
ಗೋವರ್ಧನೋದ್ಧಾರ ಗೋಪಾಲವಿಠಲ
ದೇವ ಪಂಡರಿರಾಯ ಶ್ರೀ ವಿಜಯದಾಸರ ಪ್ರಿಯ

**ಝುಂಪೆತಾಳ**

ನೋಡಿದಂತೆನ್ನನು ನೋಡಿತಿದ್ದರೆ ಕೊನೆಗೆ
ಮಾಡಿಕೊಂಬೆ ಮನಕೆ ಅವ ನಾಥನೆಂದು
ನೋಡಿದಾಕ್ಷಣದಲ್ಲಿ ಆವವನೊ ಎಂದು
ನೋಡನೋಡಾ ಅದೃಶ್ಯನಾದ ಕಾರಣ ಮನಕೆ
ನೋಡು ಎಂತಿಪ್ಪುದು ನೋಡುವರಿಗೆ
ಆಡುವ ಮಾತಲ್ಲ ಕಂಡು ಕಂಡಂತಿನ್ನು
ನೋಡಬಾರದೆ ಒಂದು ಘಳಿಗೆ ನಿಂತು
ನೋಡಿದಾಕ್ಷಣ ನಿಂದು ಬೇಡುವುದಿನ್ನೇನು
ನೋಡೊ ಯೋಗ್ಯತೆಯರಿತು ನೋಡು ದೊರೆಯ
ಆಡಿದ್ದೆಲ್ಲ ಬರಲಿ ಇಲ್ಲವೆಂದು ಎನ್ನ
ನೋಡು ಆವಸ್ಥೆಳಕೆ ಬರಲಿ ನಾನು

ನೋಡು ತಿಳಿಯದು ಸ್ವಾಮಿ ಗೋಪಾಲವಿಠಲ
ನೋಡು ಪಂಡರಿರಾಯ ಮಾಡು ದಯವ

**ತ್ರಿಪಟತಾಳ**

ಆವ ದೇಶಕೆ ಬರಲಿ ಅವ ಕ್ಷೇತ್ರವ ನೋಡಲಿ
ಆವ ಸಂಗವ ಬಿಡಲಿ ಆವ ಸಂಗವ ಪಿಡಿಯಲಿ
ಆವ ವ್ರತಗಳ ಮಾಡಲಿ ಆವ ಶ್ರವಣವ ಕೇಳಲಿ
ಆವ ಧೈರ್ಯವು ಇರಲಿ ಆವುದಾವುದು ತಿಳಿಯಲಿ
ಆವ ಸಾಧನ ಮಾಡಲಿ ಆವುದಾವುದು ಕೊಡಲಿ
ಆವುದಾವುದು ಉಣಲಿ ಆವುದಾವುದು ಹೊದೆಯಲಿ
ಅವುದಾವುದು ತಡೆಯಲಿ ಅವುದಾವುದು ಜಡಿಯಲಿ
ಆವುದಾವುದರ್ಚಿಸಲಿ ಆವುದಾವುದು ಕೇಳಲಿ
ಆವುದಾವುದ ನುಡಿಯಲಿ ಆವುದಾವುದು ಜಪಿಸಲಿ
ದೇವ ನೀನಲ್ಲದಿಲ್ಲ ಇದರೊಳಗೊಂದು
ಆವಲ್ಲಿಗೊ ನಾನರಿಯೆ ಬರಹೇಳಿದ್ದು ಎನ್ನ
ಪಾವನ್ನ ಪಾಳ್ವ ಶಕ್ತ ನೀನೆ ಎನ್ನ
ಆವಲ್ಲಿದ್ದರು ಎನಗೆ ಅನುಭೋಗ ಈಗಲೆ
ಕಾನಲಿ ಬಹು ಇರಲಿ
ಕಾಕು ಜನರಿಂದ ಬಂದ ಸೊಲ್ಲಿಗೆ ಮನ ಒ-
ಯ್ದು ವಶವು ಮಾಡಲಿಬ್ಯಾಡ
ನಾವೊಬ್ಬನೆ ನಿನ್ನ ಪೊಂದಿನಡೆವ ಸಿ-
ರಿ ವಿಜಯದಾಸರ ಸಹವಾಸದಲ್ಲಿಪ್ಪ
ಜೀವರುಗಳಿಗೆಲ್ಲ ನೋವು ಎಂಬುದು ಬ್ಯಾಡ
ದೇವ ಪಂಡರಿರಾಯ ಗೋಪಾಲವಿಠಲ
ನೀ ಒಲಿದುದಕ್ಕಿಂದು ಈ ವರವ ನೀಡು

**ಅಟ್ಟತಾಳ**

ಶರಣು ಗೋವಳರಾಯ ಶರಣು ನಿರ್ಜಿತ ಮಾಯ
ಶರಣು ಮುಕ್ತಾಶ್ರಯ ಶರಣಾನಂದಮಯ
ಶರಣು ದೋಷವಿದೂರ ಶರಣು ನಿರ್ವಿಕಾರ
ಶರಣು ಭಕ್ತರಪಾಲ ಶರಣು ಲೀಲಾವತಾರ
ಶರಣು ಅವ್ಯಕ್ತಕಾಯ ಶರಣು ಪ್ರಾಕೃತಕಾಯ
ಶರಣು ಜ್ಞಾನಪೂರ್ಣ ಶರಣು ಮೂಲಕಾರಣ
ಶರಣು ಅಖಂಡೇಶ ಶರಣು ಅನಾದಿದೇವ
ಶರಣು ನಿತ್ಯತೃಪ್ತ ಶರಣು ನಿರಂಜನ

ಶರಣು ಅಘಟಿತಘಟಿತಾನಂತ ಐಶ್ವರ್ಯ
ಶರಣು ಅಗಮ್ಯ ಅಲೌಕಿಕ ಐಶ್ವರ್ಯ
ಶರಣು ಮಹಾಪ್ರಭೋ ಹೇ ರಾಜಾಧಿರಾಜ
ಶರಣು ಆಯ್ಯ ಆಯ್ಯ ಪೂತರೆ ಪೂತರೆ
ಶರಣು ಪಂಡರಿರಾಯ ಗೋಪಾಲವಿಠಲ
ಶರಣು ಶರಣು ನಿನ್ನ ಪರಿವಾರಸಹ ನಿತ್ಯ

**ಆದಿತಾಳ**

ಮಾನಿಸರೂಪದಿ ಮಹಿಮೆಯ ತೋರ್ಪನೆ
ಮಾನಿಸರೂಪದಿ ಮನೆಮನೆ ಪೊಕ್ಕನೆ
ಮಾನಿಸರೂಪದಿ ಮಣ್ಣನೆ ಮೆದ್ದನೆ
ಮಾನಿಸರೂಪದಿ ಮುನಿಮನ ಸೆಳೆದನೆ
ಮಾನಿಸರೂಪದಿ ದನುಜರ ಕೊಂದನೆ
ಮಾನಿಸರೂಪದಿ ಧನುವನು ಮುರಿದನೆ
ಮಾನಿಸದೃಷ್ಟಿಗೆ ಮನುಷ್ಯನಂತೆ ಅ-
ಮಾನುಷ್ಯ ಮಹಿಮನೆ ಮರೆಮೋಸ ಮಾಡೋದು
ಮಾನಿತವೇನಯ್ಯ ಮಾನವಂತನೆ ಹೀಗೆ
ಮಾನಿಸಾನ್ನವನುಂಬ ಮನುಜನಾದುದರಿಂದ
ಮನುಷ್ಯನಂತೆ ನಿನ್ನ ಮನದಿ ನಿಶ್ಚೈಸಿದೆ
ಮಾನಗುಣಾಂಬುಧಿ ಗೋಪಾಲವಿಠಲ
ಮನಸಾವಾಚಾಕಾಯಾ ಮೊರೆಹೊಕ್ಕೆ ಮನ ನೀಡೊ

**ಜತೆ**

ಎಲ್ಲಿ ನೋಡಲು ಮತ್ತಲ್ಲಿ ನೀನಿರೆ ಬರ
ಲಿಲ್ಲವೆಂಬುದೇನೋ ಗೋಪಾಲವಿಠಲ

**ಗೋಪಾಲದಾಸ**

**೧. ಶ್ರೀರಂಗವಿಠಲನ....**

ಶ್ರೀರಂಗವಿಠಲನ ಶ್ರೀ ಮಕುಟಕೆ ಶರಣು(ಪ)

ಶಿರದಲ್ಲೊಪ್ಪುವ ನೀಲಕುಂತಳಕೆ ಶರಣು
ಸಿರಿ ಸಹೋದರನರ್ಧದವಳಿಗೆ ಶರಣು ‖ ಅ.ಪ ‖

ಸೊಂಪು ನೋಟದ ಚೆಲುವ ಸೋಗೆಗಣ್ಣಿಗೆ ಶರಣು
ಸಂಪಿಗೆಯ ಕುಸುಮಸಮ ನಾಸಿಕಕೆ ಶರಣು
ಗುಂಪುರತ್ನದ ಕರ್ಣಕುಂಡಲಗಳಿಗೆ ಶರಣು
ಇಂಪುದರ್ಪಣನಿಭ ಕಪೋಲಗಳಿಗೆ ಶರಣು ೧

ಕುಂದಕುಟ್ಮಲ ಪೋಲ್ವ ದಂತಪಂಕ್ತಿಗೆ ಶರಣು
ಅಂದವಾಗಿರುವ ಬಿಂಬೋಷ್ಠಕೆ ಶರಣು
ಚಂದ್ರಿಕಾನಿಭ ಮುದ್ದು ಮಂದಹಾಸಕೆ ಶರಣು
ನಂದಗೋಪನ ಮುದ್ದು ಕಂದನಿಗೆ ಶರಣು ೨

ಅಬ್ಜನಾಭನ ದಿವ್ಯ ಕಂಬು ಕಂಠಕೆ ಶರಣು
ಅಬ್ಜಮುಖಿಯಿರುವ ವಕ್ಷಸ್ಥಳಕೆ ಶರಣು
ಕುಬ್ಜೆಯನು ಡೊಂಕೆ ತಿದ್ದಿದ ಭುಜಗಳಿಗೆ ಶರಣು
ಅಬ್ಜಜಾಸನ (ನ) ಪೆತ್ತ ನಾಭಿಗೆ ಶರಣು ೩

ರನ್ನಗಂಟೆಗಳಿರುವ ನಿನ್ನ ಕಟಿಗೆ ಶರಣು
ಪೊನ್ನಕದಳೀ ಪೋಲ್ವ ತೊಡೆಗಳಿಗೆ ಶರಣು
ಪುನ್ನಾಗ (ಕ) ರ (ಗೆ)ತ್ತ ದ್ವಯ ನಿತಂಬಕೆ ಶರಣು
ಚೆನ್ನಾಗಿ ಕುಣಿವ ಸಮಜಾನುವಿಗೆ ಶರಣು ೪

ಮಂಗಳ ವೈಭೋಗಂಗಳ ಅಂಘ್ರಿದ್ವಯಕೆ ಶರಣು
ತುಂಗ ಕುಚಗಳ ಪಿಡಿದ ಕರಗಳಿಗೆ ಶರಣು
ಪೊಂಗೊಳಲನೂದುವಾ ಅಂಗುಲಿಗಳಿಗೆ ಶರಣು
ರಂಗವಿಠಲನ ಸರ್ವಾಂಗಕೆ ಶರಣು ೫

**ಶ್ರೀಪಾದರಾಜ**

## ಹರಿದಾಸರ ಪಾಂಡುರಂಗ ವಿಠಲ: ಪರಾಮರ್ಶನ ಗ್ರಂಥಗಳು


**ಚಿದಾನಂದಮೂರ್ತಿ ಡಾ. ೨೦೦ ೫**
ಭಾಷಿಕ ಬೃಹತ್ ಕರ್ನಾಟಕ ಕನ್ನಡ ದೈವಗಳು - ಈಗ ಮಹಾರಾಷ್ಟ್ರದ ಲೋಕದೇವತೆಗಳು
- ಪ್ರ : ಸಪ್ನಾ ಬುಕ್ ಹೌಸ್, ಬೆಂಗಳೂರು.

**ನಾಗರತ್ನ ಟಿ.ಎನ್. ೨೦೦೪**
ಶ್ರೀಪಾದರಾಜರು ಪ್ರ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ

**ಬೇಲೂರು ಕೇಶವದಾಸ ೧೯೭೪**
ಶ್ರೀ ಕರ್ನಾಟಕ ಭಕ್ತ ವಿಜಯ ಪ್ರ : ಉಷಾ ಸಾಹಿತ್ಯ ಮಾಲೆ, ಮೈಸೂರು

**ರಾಮಚಂದ್ರ ಚಿಂತಾಮಣಿ ಢೇರೆ ೨೦೦೨**

ಶ್ರೀ ವಿಠ್ಠಲ : ಒಂದು ಮಹಾ ಸಮನ್ವಯ. ಕನ್ನಡಕ್ಕೆ ಚಂದ್ರಕಾಂತ ಪೋಕಳೆ ಪ್ರ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

**ರಾಮಚಂದ್ರರಾವ್ ಎಸ್.ಕೆ. ೧೯೮೫**

ಪುರುಂದರ ಸಾಹಿತ್ಯ : ಜೀವನ ದರ್ಶನ ಸಂ. ೧ ಪ್ರ: ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

**ವರದರಾಜರಾವ್ ಗಾಯಕ್ವಾಡ್ ೨೦೦೫**

ಹರಿದಾಸ ಸಾಹಿತ್ಯಸಾರ ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಮೈಸೂರು.

**ವಿಠ್ಠಲರಾವ್ ಗಾಯಕ್ವಾಡ್ ೨೦೦೫**

ವಿಠ್ಠಲ ಸಂಪ್ರದಾಯ ಪ್ರ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ವಿದ್ಯಾರಣ್ಯ.

**ಶಂಬಾ ಜೋಸಿ ೧೯೯೯**

ಶಂಬಾ ಜೋಶಿ ಸಮಗ್ರ ಸಂಪುಟ ಸಂ. ೩ ಸಂ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಪ್ರ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

***